ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 35 | ಆಗಸ್ಟ್ 23–29 2021 | ಪುಟ 16 | ರೂ.10/-

https://janashakthi.wordpress.com e-mail : js_weekly@gmail.com

ಶಾಲಾ ಮಕ್ಕಳ ಸಾವಿಗೆ ಯಾರು ಹೊಣೆ?



ಕೆಂಪು ಕೋಟೆಯ ಭಾಷಣ ವಂಚನೆಯ ಕಸರತ್ತು

ವಿದ್ಯುತ್ ಮಸೂದೆ: ಮಂಡಿಸಲೂ ಇಲ್ಲ ವಾಪಾಸ್ ಪಡೆಯಲೂ ಇಲ್ಲ





ಹವಾಮಾನ ವೈಪರೀತ್ಯ ಮತ್ತು ಐಪಿಸಿಸಿ ವರದಿಯ ಎಚ್ಚರಿಕೆಯ ಗಂಟೆ



ಆಫ್ಘಾನಿಸ್ತಾನ: ಅಮೆರಿಕಾದ ಪರಾಭವ ಮತ್ತು ಭಾರತಕ್ಕೆ ಪಾಠ

ದೇಶಾದ್ಯಂತ 75ನೇ ಸ್ವಾತಂತ್ರ್ಯ ದಿನಾಚರಣೆ

ಅಫಘಾನಿಸ್ತಾನದಲ್ಲಿ ಮತ್ತೆ ತಾಲಿಬಾನ್-ಅಮೆರಿಕಕ್ಕೆ ಅವಮಾನಕಾರೀ ಸೋಲು

ಅಮೆರಿಕ ಸಂಯುಕ್ತ ಸಂಸ್ಥಾನ ಅಫಘಾನಿಸ್ತಾನದಲ್ಲಿ ಒಂದು ಅವಮಾನಕಾರೀ ಸೋಲನ್ನು ಉಂಡಿದೆ. ಆಗಿದ್ದ ತಾಲಿಬಾನ್ ಆಳ್ವಿಕೆಯನ್ನು ಉರುಳಿಸಿದ ಇಪ್ಪತ್ತು ವರ್ಷಗಳ ನಂತರ ತಾಲಿಬಾನ್ ಮತ್ತೆ ಅಧಿಕಾರಕ್ಕೆ ಬಂದಿದ್ದಾರೆ. ಅಶ್ರಫ್ ಘನಿ ನೇತೃತ್ವದ ಸರಕಾರ ಮತ್ತು ರಾಷ್ಟ್ರೀಯ ಸೇನೆ ಕುಸಿದು ಬಿದ್ದಿರುವುದು ಅಮೆರಿಕ ಮತ್ತು ಅದರ ನಾಟೋ ಮಿತ್ರರು ರಚಿಸಿದ ಪ್ರಭುತ್ವದ ಟೊಳ್ಳುತನವನ್ನು ತೋರಿಸಿದೆ ಎಂದು ಸಿಪಿಐ(ಎಂ) ಮತ್ತು ಸಿಪಿಐ ಜಂಟಿ ಹೇಳಿಕೆಯಲ್ಲಿ ಹೇಳಿವೆ.

ಭಾರತೀಯ ಸರಕಾರದ ಅಫ್‌ಘಾನ್ ಧೋರಣೆಯೆಂದರೆ ಅಮೆರಿಕನ್ನರನ್ನು ಕಣ್ಣುಮುಚ್ಚಿ ಅನುಸರಿಸುವುದು. ಇದರ ಫಲಿತಾಂಶವೆಂದರೆ, ಈ ಪ್ರದೇಶದಲ್ಲಿ ಭಾರತ ಒಬ್ಬಂಟಿಯಾಗಿ ಬಿಟ್ಟಿದೆ, ಅದರಿಂದಾಗಿ ಅದರ ಮುಂದೆ ಹೆಚ್ಚೇನೂ ಆಯ್ಕೆಗಳಿಲ್ಲದಂತಾಗಿದೆ.

ಈ ಹಿಂದಿನ 1990ರ ದಶಕದ ತಾಲಿಬಾನ್ ಸರಕಾರದಲ್ಲಿ ಉಗ್ರ ಮೂಲಭೂತವಾದೀ ನಿಲುವು ಎದ್ದು ಕಾಣುತ್ತಿತ್ತು. ಅದು ಮಹಿಳೆಯರು, ಹೆಣ್ಣುಮಕ್ಕಳು ಮತ್ತು ದಮನಿತ ಜನಾಂಗೀಯ ಅಲ್ಪಸಂಖ್ಯಾತರ ಮೇಲೆ ವಿನಾಶಕಾರಿ ಪರಿಣಾಮಗಳನ್ನು ಬೀರಿತು.

ತಾಲಿಬಾನ್ ಹತೋಟಿಯಲ್ಲಿ ರಚಿಸುವ ಹೊಸ ವ್ಯವಸ್ಥೆ ಮಹಿಳೆಯರ ಮತ್ತು ಜನಾಂಗೀಯ ಅಲ್ಪಸಂಖ್ಯಾತರ ಹಕ್ಕುಗಳಿಗೆ ಸೂಕ್ತ ಗೌರವ ಮತ್ತು ಮಾನ್ಯತೆ ಕೊಡಲೇಬೇಕಾಗಿದೆ.

ಅಫ್‌ಘಾನಿಸ್ತಾನ ಇಸ್ಲಾಮಿಕ್ ಸ್ಟೇಟ್, ಅಲ್‌ಖೈದಾದಂತಹ ಭಯೋತ್ಪಾದಕ ಗುಂಪುಗಳಿಗೆ ಆಶ್ರಯದಾಣವಾಗಬಾರದು ಎಂಬ ಅಂತರ್ರಾಷ್ಟ್ರೀಯ ಸಮುದಾಯದ ಆತಂಕವನ್ನು ಆಗಸ್ಟ್ 16ರಂದು ನಡೆದ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ತನ್ನ ತುರ್ತು ಸಭೆಯಲ್ಲಿ ಸಾಮೂಹಿಕವಾಗಿ ವ್ಯಕ್ತಗೊಳಿಸಿದೆ.

ಅಫ್ಘಾನ್ ಜನತೆ ಒಂದು ಶಾಂತಿಯುತ ಮತ್ತು ಸ್ಥಿರ ಪರಿಸರದಲ್ಲಿ ಬದುಕಲು ಸಾಧ್ಯವಾಗುವಂತೆ ಭಾರತ ಇಲ್ಲಿನ ಪ್ರಾದೇಶಿಕ ಶಕ್ತಿಗಳೊಂದಿಗೆ ನಿಕಟವಾಗಿ ಕೆಲಸ ಮಾಡಬೇಕಾಗಿದೆ. ಭಾರತ ಸರಕಾರ ಕೂಡಲೇ ಅಫಘಾನಿಸ್ತಾನದಲ್ಲಿ ಸಿಲುಕಿರುವ ಎಲ್ಲ ಭಾರತೀಯ ನಾಗರಿಕರನ್ನು ಸುರಕ್ಷಿತವಾಗಿ ಪಾರು ಮಾಡಲು ಕೆಲಸ ಮಾಡಬೇಕು ಎಂದು ಸಿಪಿಐ(ಎಂ) ಮತ್ತು ಸಿಪಿಐ ಆಗ್ರಹ ಪಡಿಸಿವೆ.

ಆಗಸ್ಟ್ 26–27–ರಾಷ್ಟ್ರೀಯ ಸಮಾವೇಶ ಮತ್ತು ಸೆಪ್ಟಂಬರ್ 5–ಮುಝಫ್ಫರ್‌ನಗರ ರ್‍ಯಾಲಿ: ಸಂಯುಕ್ತ ಕಿಸಾನ್ ಮೋರ್ಚಾ ಕರೆ

ದಿಲ್ಲಿ ಗಡಿಗಳಲ್ಲಿ ರೈತರ ತೀವ್ರ ಪ್ರತಿಭಟನೆಗಳು ಒಂಭತ್ತು ತಿಂಗಳುಗಳನ್ನು ಪೂರ್ಣಗೊಳಿಸುವ ಸಂದರ್ಭದಲ್ಲಿ ಆಗಸ್ಟ್ 26–27ರಂದು ದಿಲ್ಲಿಯಲ್ಲಿ ಅಖಿಲ ಭಾರತ ಸಮಾವೇಶವನ್ನು ಸಂಘಟಿಸಲು ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ನಿರ್ಧರಿಸಿದೆ.

ಇದರಲ್ಲಿ ಭಾಗವಹಿಸಲು ರೈತ ಸಂಘಟನೆಗಳಿಗೆ, ಕಾರ್ಮಿಕ ಸಂಘಟನೆಗಳಿಗೆ ಮತ್ತು ಇತರ ಸಾಮೂಹಿಕ ಸಂಘಟನೆಗಳಿಗೆ ಎಸ್.ಕೆ.ಎಂ. ಕರೆ ನೀಡಿದ್ದು, ದೇಶದೆಲ್ಲೆಡೆಯಿಂದ ಇದರಲ್ಲಿ ಭಾಗವಹಿಸಲು ಅಪಾರ ಉತ್ಸುಕತೆ ವ್ಯಕ್ತವಾಗಿದೆ ಎಂದು ಅದು ಹೇಳಿದೆ. ದೇಶದ ಎಲ್ಲ ರಾಜ್ಯಗಳಿಂದ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿದ್ದಾರೆ ಎಂದು ಎಸ್‌ಕೆಎಂ ಹೇಳಿದೆ.

ಈ ರಾಷ್ಟ್ರೀಯ ಸಮಾವೇಶದಲ್ಲಿ ರೈತರು ಮತ್ತು ಅವರ ಆಗ್ರಹಗಳ ಬಗ್ಗೆ ಕೇಂದ್ರ ಸರಕಾರದ ದುರಹಂಕಾರದ, ಸ್ಪಂದನಾಶೂನ್ಯ ಮತ್ತು ಪ್ರಜಾಪ್ರಭುತ್ವ–ವಿರೋಧಿ ನಿಲುವನ್ನು ಚರ್ಚಿಸಿ ಈ ಚಳುವಳಿಯ ಮುಂದಿನ ದಿಕ್ಕನ್ನು, ಕಾರ್ಯಾಚರಣೆಗಳನ್ನು ಜಂಟಿಯಾಗಿ ನಿರ್ಧರಿಸಲಾಗುವುದು ಮತ್ತು ಜಾರಿಗೊಳಿಸಲಾಗುವುದು. ಈ ಐತಿಹಾಸಿಕ ಹೋರಾಟ ಕೆಲವೇ ರಾಜ್ಯಗಳಿಗೆ ಸೀಮಿತವಾಗಿದೆ ಎಂಬಿತ್ಯಾದಿ ಮೋದಿ ಸರಕಾರದ ಸುಳ್ಳಿನ ಕಂತೆಗಳನ್ನು ಈ ರಾಷ್ಟ್ರೀಯ ಸಮಾವೇಶ ಬಯಲಿಗೆಳೆಯುತ್ತದೆ ಎಂದು ಅದು ಹೇಳಿದೆ.

ಇದಲ್ಲದೆ ಇನ್ನು ಆರು ತಿಂಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಉತ್ತರ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ರೈತರನ್ನು ಅಣಿನೆರೆಸುವ 'ಮಿಷನ್ ಉತ್ತರ ಪ್ರದೇಶ ಮತ್ತು ಉತ್ತರಾಖಂಡ'ದ ಭಾಗವಾಗಿ ಸೆಪ್ಟಂಬರ್ 5 ರಂದು ಮುಝಫ್ಫರ್ ನಗರದಲ್ಲಿ ಒಂದು ದೊಡ್ಡ ಕಿಸಾನ್ ಪಂಚಾಯತ್ ನಡೆಸಲು ನಿರ್ಧರಿಸಲಾಗಿದ್ದು ಅದಕ್ಕೆ ಸಿದ್ಧತೆ ಭರದಿಂದ ಸಾಗಿದೆ. ಈ ಐತಿಹಾಸಿಕ ರೈತ ಪಂಚಾಯ್ತಿನಿಂದ ಮೋದಿ ಮತ್ತು ಯೋಗಿ ಸರಕಾರದ ಮತ್ತು ವಿವಿಧ ಬಿಜೆಪಿ ರಾಜ್ಯ ಸರಕಾರಗಳ ರೈತ–ವಿರೋಧಿ ಮತ್ತು ಕಾರ್ಪೊರೇಟ್–ಪರ ಕೃತ್ಯಗಳನ್ನು ಈ ಎರಡು ರಾಜ್ಯಗಳ ಮೂಲೆ–ಮೂಲೆಗಳಿಗೆ ಒಯ್ಯಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ.

'ಛೋಟಾ ಕಿಸಾನ್' ದೇಶದ 'ಶಾನ್' .....ಬಿಜೆಪಿ ಆಳ್ವಿಕೆಯಲ್ಲಿ 'ಪರೇಶಾನ್'

ದೇಶಾದ್ಯಂತ ಕಿಸಾನ್ ತಿರಂಗಾ ಯಾತ್ರಾ ಕೆಂಪು ಕೋಟೆಯಿಂದ ಮತ್ತಷ್ಟು ಸುಳ್ಳುಗಳ ಪ್ರಸಾರ– ಎಐಕೆಎಸ್

ಆಗಸ್ಟ್ 15 ರಂದು 'ಕಿಸಾನ್ ಮಜ್ದೂರ್ ಆಝಾದಿ ಸಂಗ್ರಾಮ್' ದಿನಾಚರಣೆಯ ಸಂಯುಕ್ತ ಕಿಸಾನ್ ಮೋರ್ಚಾದ ಕರೆಯ ಮೇರೆಗೆ ದೇಶಾದ್ಯಂತ ರೈತರು ಮತ್ತು ಕಾರ್ಮಿಕರ ತಿರಂಗಾ ಯಾತ್ರಾಗಳು ನಡೆದಿವೆ. ಹಲವಡೆ ಮಹಿಳಾ ರೈತರು ನೇತೃತ್ವ ನೀಡಿದರು ಎಂದು ವರದಿಯಾಗಿದೆ.

ಇದೇ ವೇಳೆಗೆ ಕೆಂಪು ಕೋಟೆಯಲ್ಲಿ ಭಾಷಣ ಮಾಡುತ್ತಿದ್ದ ಪ್ರಧಾನಿ ಮೋದಿಯವರು ಈ ಐತಿಹಾಸಿಕ ಹೋರಾಟದ ಬಗ್ಗೆ ಪ್ರಸ್ತಾಪವನ್ನೂ ಮಾಡಲಿಲ್ಲ, ಬದಲಿಗೆ "ಛೋಟಾ ಕಿಸಾನ್ ಬನೇ ದೇಶ ಕಾ ಶಾನ್" ಎಂದು ಇನ್ನೊಂದು ಘೋಷಣೆ ಕೊಡುತ್ತಿದ್ದರು. ಇದು 'ಶಾನ್'(ಗೌರವ) ಅಲ್ಲ, 'ಪರೇಶಾನ್' (ಸುಸ್ತು) ಎಂದಿರಬೇಕಿತ್ತು ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಇದಕ್ಕೆ ಬಲವಾದ ಪ್ರತಿಕ್ರಿಯೆ ನೀಡುತ್ತ ಹೇಳಿದೆ. ಇದು ಕೆಂಪು ಕೋಟೆಯಿಂದ ಪ್ರಧಾನಿಗಳು ರೈತರ ಬಗ್ಗೆ ನೀಡಿರುವ ಇನ್ನೊಂದು ಸುಳ್ಳು–ವಂಚಕ ಘೋಷಣೆ ಎಂದಿರುವ ಅದು, ವಾಸ್ತವವಾಗಿ "ಛೋಟಾ ಕಿಸಾನ್–ಬಿಜೆಪಿ ರಾಜ್ ಮೇಂ ಪರೇಶಾನ್"(ಸಣ್ಣ ರೈತರು ಬಿಜೆಪಿ ರಾಜ್ಯಭಾರದಲ್ಲಿ ಸುಸ್ತಾಗಿದ್ದಾರೆ") ಎಂದು ಹೇಳಿದೆ.

ಸಂಸತ್ತಿನಲ್ಲಿ ರೈತರ ಶೋಚನೀಯ ಪರಿಸ್ಥಿತಿಯ ಬಗ್ಗೆ ಮಾತನಾಡಲು ಅಥವ ಅವರು ಎತ್ತಿದ ಪ್ರಶ್ನೆಗಳನ್ನು ಪರಿಹರಿಸಲು ನಿರಾಕರಿಸಿರುವ ಪ್ರಧಾನ ಮಂತ್ರಿಗಳು ದೇಶದ ಕಣ್ಣಿಗೆ ಮಣ್ಣೆರಚಲು ಸ್ವಾತಂತ್ರ್ಯ ದಿನದ ವಿಧ್ಯುಕ್ತ ಸಮಾರಂಭವನ್ನು ಬಳಸಿಕೊಂಡಿದ್ದಾರೆ, ಬಿಜೆಪಿ ಸರಕಾರ ರೈತರಿಗಾಗಿ ಬಹಳಷ್ಟು ಮಾಡುತ್ತಿದೆ ಎಂದು ಸುಳ್ಳು ಚಿತ್ರ ನೀಡಿದ್ದಾರೆ ಎಂದು ಎಐಕೆಎಸ್ ಹೇಳಿದೆ.

ಪ್ರಧಾನ ಮಂತ್ರಿಗಳಿಗೆ ನಿಜವಾಗಿಯೂ ಸಣ್ಣ ರೈತರ ಬಗ್ಗೆ ಕಾಳಜಿ ಇದ್ದಿದ್ದರೆ ದಿಲ್ಲಿಯ ಗಡಿಗಳಲ್ಲಿ ಮತ್ತು ದೇಶಾದ್ಯಂತ ಒಂಭತ್ತು ತಿಂಗಳಿಂದ ಅವರೆಲ್ಲರೂ ಪ್ರತಿಭಟಿಸುತ್ತಿದ್ದರೂ ಕಾರ್ಪೊರೇಟ್ ಲಾಭಕೋರತನವನ್ನು ಪ್ರೋತ್ಸಾಹಿಸುವ ಧೋರಣೆಗಳನ್ನೇ ಪಟ್ಟು ಹಿಡಿದು ಅನುಸರಿಸುತ್ತಿರುವುದೇಕೆ ಎಂದು ಪ್ರಶ್ನಿಸಿರುವ ಎಐಕೆಎಸ್, ಪ್ರಧಾನಿಗಳಿಗೆ ನಿಜವಾಗಿಯೂ ಕಾಳಜಿಯಿದ್ದರೆ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡುವ, ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ಪಡೆಯುವ ಮತ್ತು ಕನಿಷ್ಟ ಬೆಂಬಲ ಬೆಲೆಯನ್ನು ಒಂದು ಕಾನೂನಾತ್ಮಕ ಹಕ್ಕಾಗಿ ಮಾಡುವ ಪ್ರಕಟಣೆಯನ್ನು ಅವರ ಸರಕಾರ ಮಾಡಬೇಕಿತ್ತು ಎಂದು ಹೇಳಿದೆ.

ಕಹಿ ಸತ್ಯವೇನೆಂದರೆ, ಕಳೆದ 7 ವರ್ಷಗಳಲ್ಲಿ, ನರೇಂದ್ರ ಮೋದಿಯವರು ಆಶ್ವಾಸನೆ ನೀಡಿದಂತೆ ರೈತರ ಆದಾಯ ದುಪ್ಪಟ್ಟು ಆಗುವ ಬದಲು, ಇದು ಇಳಿಯುತ್ತಲೇ ಬರುತ್ತಿದೆ, ರೈತರ ಆತ್ಮಹತ್ಯೆಗಳ ಸಂಖ್ಯೆ 1 ಲಕ್ಷವನ್ನು ದಾಟಿದೆ. ನಿರ್ದಿಷ್ಟವಾಗಿ ಸಣ್ಣ ರೈತರಿಗೆ ನೆರವಾಗುತ್ತದೆ ಎಂದು ಅವರು ಒತ್ತಿ–ಒತ್ತಿ ಹೇಳುತ್ತಿರುವ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ ವಾಸ್ತವವಾಗಿ ಒಂದು ಸಾಧನೆಯ ಬದಲು ದೊಡ್ಡ ವಿಫಲತೆಯಾಗಿ ಬಿಟ್ಟಿದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳ ಜೊತೆಗೆ ರೈತರೂ ಇದಕ್ಕೆ ಪ್ರೀಮಿಯಂ ತೆರುತ್ತಿದ್ದರೂ, ಅವರ ದಾವೆಗಳು ಇತ್ಯರ್ಥವಾಗುತ್ತಿಲ್ಲ. ಗುಜರಾತ್ ಕೂಡ ಸೇರಿದಂತೆ ಹಲವು ರಾಜ್ಯಗಳು ಆಂಧ್ರಪ್ರದೇಶ, ಬಿಹಾರ, ಪಂಜಾಬ್, ತೆಲಂಗಾಣ, ಪಶ್ಚಿಮ ಬಂಗಾಲ ಮುಂತಾದವು ಈ ಯೋಜನೆಯ ಅದಕ್ಷತೆಯಿಂದಾಗಿ ಅದರಿಂದ ಹೊರಬಂದಿವೆ.

ದೇಶದಲ್ಲಿ ಎರಡು ಎಕ್ರೆಗಿಂತ ಕಡಿಮೆ ಭೂಮಿ ಹೊಂದಿರುವ ರೈತರ ಪ್ರಮಾಣ 80 ಶೇ. ಇದ್ದು, ಇವರ ಹಿತಗಳಿಗೆ ಆದ್ಯತೆ ನೀಡಲಾಗುತ್ತಿದೆ ಎನ್ನುತ್ತ ಪ್ರಧಾನ ಮಂತ್ರಿಗಳು ಸಣ್ಣ ರೈತರಿಗೆ ಅಗ್ಗದ ಸಾಲಗಳನ್ನು ಲಭ್ಯಗೊಳಿಸಲಾಗುತ್ತಿದೆ ಎಂದಿದ್ದಾರೆ. ಆದರೆ ಅವರು ಪ್ರಧಾನ ಮಂತ್ರಿಗಳಾಗುವ ಮೊದಲಿನಿಂದಲೂ ಜಾರಿಯಲ್ಲಿರುವ ಈ ಸ್ಕೀಮು ಕೋಟ್ಯಂತರ ಗೇಣಿ ಸಾಗುವಳಿದಾರರನ್ನು ಈಗಲೂ ಹೊರಗಿಟ್ಟಿದೆ. ಕೊವಿಡ್ ಮಹಾಸಾಂಕ್ರಾಮಿಕದಿಂದಾಗಿ ರೈತರು ಅಪಾರ ಆದಾಯ ನಷ್ಟಗಳನ್ನು ಅನುಭವಿಸಿರುವಾಗಲೂ ಯಾವುದೇ ಪರಿಹಾರ, ಸಾಲಮನ್ನಾವನ್ನು ರೈತರಿಗೆ ಕೊಟ್ಟಿಲ್ಲ.

ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಳನ್ನು ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿಗೆ ಹೆಚ್ಚಿಸಲಾಗಿದೆ ಎಂದು ಅದೇ ಕೆಂಪು ಕೋಟೆಯಿಂದ ಸಾರಿದ ಇನ್ನೊಂದು ಘೋಷಣೆಯೂ ಸುಳ್ಳಾಗಿದೆ. ಅವರ ಸರಕಾರ ರಾಷ್ಟ್ರೀಯ ರೈತರ ಆಯೋಗ ಶಿಫಾರಸು ಮಾಡಿದಂತೆ ಸಿ2+50% ಸೂತ್ರವನ್ನು ಜಾರಿಗೊಳಿಸಿಲ್ಲ. ಇದರಿಂದ ರೈತರಿಗೆ ಭಾರೀ ನಷ್ಟವಾಗುತ್ತಿದೆ. ಉದಾ: ಭತ್ತಕ್ಕೆ ಈ ಸೂತ್ರವನ್ನು ಅನ್ವಯಿಸದೇ ಇರುವುದರಿಂದ ಘೋಷಿತ ಎಂಎಸ್‌ಪಿ ಬೆಲೆಗಳು ದೊರೆತರೂ ರೈತರು ಪ್ರತಿ ಕ್ವಿಂಟಾಲಿನಲ್ಲಿ 650ರೂ. ಕಳಕೊಳ್ಳುತ್ತಿದ್ದಾರೆ. ಇನ್ನೊಂದು ಸಂಗತಿಯೆಂದರೆ ಈ ಇಳಿಸಿದ ಎಂಎಸ್‌ಪಿಯೂ ರೈತರಿಗೆ ಸಿಗುತ್ತಿಲ. ಅಕ್ಟೋಬರ್–ನವಂಬರ್ 2020 ರಲ್ಲಿ ಧಾನ್ಯ ಮಾರಾಟ ಕುರಿತ ಒಂದು ವರದಿಯ ಪ್ರಕಾರ 11 ಪ್ರಮುಖ ಕೃಷಿ ರಾಜ್ಯಗಳಲ್ಲಿ ರೈತರು ಮಾರಿದ ಜೋಳಕ್ಕೆ ಎಂಎಸ್‌ಪಿಗಿಂತ ರೂ.1900 ಕೋಟಿಯಷ್ಟು ಕಡಿಮೆ ಬೆಲೆ ಸಿಕ್ಕಿದೆ. ಆದರೆ ಅತ್ತ ಬೀಜಗಳು, ರಸಗೊಬ್ಬರ ಮುಂತಾದ ಲಾಗುವಾಡುಗಳ ಬೆಲೆಗಳು ಪೆಟ್ರೋಲ್–ಡೀಸೆಲ್ ಸತತ ಬೆಲೆಯೇರಿಕೆಗಳಿಂದಾಗಿ ಹೆಚ್ಚೆಚ್ಚು ವೆಚ್ಚದಾಯಕವಾಗುತ್ತಿವೆ.

ನಿಜ ಹೇಳಬೇಕೆಂದರೆ, ಬಿಜೆಪಿ ಸರಕಾರದ ಧೋರಣೆಗಳಿಂದ ಅತಿ ಹೆಚ್ಚು ತೊಂದರೆಗಳಿಗೆ ಒಳಗಾಗಿರುವವರು ಸಣ್ಣ ರೈತರು ಮತ್ತು ಗೇಣಿ ಸಾಗುವಳಿದಾರರು, ಆದರೂ ಪ್ರಧಾನ ಮಂತ್ರಿಗಳು ಹರಿಯ ಬಿಡುತ್ತಿರುವ ಈ ಸುಳ್ಳು–ವಂಚನೆಗಳನ್ನು ಬಯಲಿಗೆಳೆಯಲು ಒಂದು ಪ್ರಚಾರಾಂದೋಲನವನ್ನು ನಡೆಸಲಾಗುವುದು ಎಂದು ಎಐಕೆಎಸ್ ಹೇಳಿದೆ.

ಐಐಟಿ, ಎನ್‌ಐಟಿಗಳಲ್ಲಿ ಮೀಸಲಾತಿ ಸೀಟು ನಷ್ಟದ ಬಗ್ಗೆ ಕ್ರಮ ಕೈಗೊಳ್ಳಿ–ಎಸ್‌ಎಫ್‌ಐ

ಕೇಂದ್ರ ಸರಕಾರದ ಅಡಿಯಲ್ಲಿರುವ ನಮ್ಮ ದೇಶದ ಪ್ರಮುಖ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಶಿಕ್ಷಣ ಸಂಸ್ಥೆಗಳಾದ ಐಐಟಿ, ಎನ್‌ಐಟಿ, ಐಐಐಟಿ, ಐಐಎಸ್‌ಇಆರ್, ಐಐಎಸ್‌ಸಿ ಮತ್ತಿತರ ಸಂಸ್ಥೆಗಳಲ್ಲಿ ಪದವಿ ಕೋರ್ಸ್‌ಗಳಲ್ಲಿ ಪ್ರವೇಶ ಪಡೆಯುವ(ಅಡ್ಮಿಷನ್) ಮತ್ತು ಮಧ್ಯದಲ್ಲೇ ಬಿಟ್ಟುಹೋಗುವ(ಡ್ರಾಪೌಟ್) ಅಂಚಿಗೆ ಸರಿಸಲ್ಪಟ್ಟ ಮತ್ತು ಹಿಂದುಳಿದ ಗುಂಪುಗಳಿಂದ ಬರುವ ವಿದ್ಯಾರ್ಥಿಗಳ ಅಂಕಿ–ಅಂಶಗಳನ್ನು ಸಂಸತ್ತಿಗೆ ಇತ್ತೀಚೆಗೆ ಸಲ್ಲಿಸಲಾಯಿತು. ಇದರ ಪ್ರಕಾರ 2016–20ರ ಅವಧಿಯಲ್ಲಿ ಕನಿಷ್ಟ 683 ಪರಿಶಿಷ್ಟ ಜಾತಿ, 831 ಪರಿಶಿಷ್ಟ ಬುಡಕಟ್ಟುಗಳು ಮತ್ತು 591 ಒಬಿಸಿ ಸೀಟುಗಳು ಖಾಲಿ ಉಳಿದವು ಮತ್ತು ಪ್ರವೇಶ ಪಡೆದವರಲ್ಲಿ ಮಧ್ಯದಲ್ಲೇ ಬಿಟ್ಟುಹೋದವರ ಸಂಖ್ಯೆ ಅನುಕ್ರಮವಾಗಿ 619, 365 ಮತ್ತು 847. ಅಂದರೆ ಒಟ್ಟು 3936 ಮೀಸಲಾತಿ ಸೀಟುಗಳ ನಷ್ಟವಾಗಿದೆ.

ಇದನ್ನು ತಡೆಯಲು ಭಾರತ ಸರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು, ಕೇಂದ್ರೀಯ ಶಿಕ್ಷಣ ಸಂಸ್ಥೆಗಳು(ಪ್ರವೇಶದಲ್ಲಿ ಮೀಸಲಾತಿ)ಕಾಯ್ದೆ, 2006ರ ಅನುಷ್ಠಾನ ಸರಿಯಾಗಿ ಆಗಬೇಕು ಎಂದು ಎಸ್‌ಎಫ್‌ಐ ಆಗ್ರಹಿಸಿದೆ. ಈ ವಿಭಾಗಗಳಿಂದ ಬರುವ ವಿದ್ಯಾರ್ಥಿಗಳ ಕಲ್ಯಾಣಕ್ಕೆ ವಿಶೇಷ ಸೆಲ್‌ಗಳನ್ನು ರಚಿಸಬೇಕು ಎಂದೂ ಅದು ಆಗ್ರಹಪಡಿಸಿದೆ.

ಸಿಪಿಐ(ಎಂ) ಸಂಸದ್ ಸದಸ್ಯರಾದ ಕೆ. ಸೋಮಪ್ರಸಾದ್ ಮತ್ತು ಡಾ.ವಿ. ಶಿವದಾಸನ್ ಸಂಸತ್ತಿನಲ್ಲಿ ಕೇಳಿರುವ ಪಶ್ನೆಗಳಿಗೆ ಉತ್ತರವಾಗಿ ಪಡೆದ ಮಾಹಿತಿಗಳನ್ನು ವಿವರವಾಗಿ ವಿಶ್ಲೇಷಿಸಿದಾಗ, ದೇಶದ ಈ ಪ್ರಮುಖ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಶಿಕ್ಷಣ ಸಂಸ್ಥೆಗಳಲ್ಲಿ ಡ್ರಾಪೌಟ್‌ಗಳಲ್ಲಿ ಹೆಚ್ಚು ಈ ವಿಭಾಗಗಳದ್ದೇ, ಉದಾ: ಏಳು ಐಐಟಿಗಳಲ್ಲಿ ಡ್ರಾಪೌಟ್‌ಗಳಲ್ಲಿ ಈ ವಿಭಾಗಗಳ ವಿದ್ಯಾರ್ಥಿಗಳ ಪ್ರಮಾಣ 63% ಎಂದು ಕಂಡುಬಂದಿದೆ. ಇದರಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಒಟ್ಟು ಪ್ರಮಾಣವೇ 40%. ಈ ಹಿನ್ನೆಲೆಯಲ್ಲಿ ಎಸ್‌ಎಫ್‌ಐ ಈ ಆಗ್ರಹವನ್ನು ಭಾರತ ಸರಕಾರದ ಮುಂದಿಟ್ಟಿದೆ.

ಈ ಮೊದಲು ಈ ಕೇಂದ್ರೀಯ ತಂತ್ರಜ್ಞಾನ ಶಿಕ್ಷಣ ಸಂಸ್ಥೆಗಳಲ್ಲಿ ಪಿಹೆಚ್‌ಡಿ ಮತ್ತು ಎಂಎಸ್ ಪ್ರವೇಶದಲ್ಲಿ ಮೀಸಲಾತಿಯ ನಗ್ನ ಉಲ್ಲಂಘನೆಯ ಪ್ರಶ್ನೆಯನ್ನು ಎಸ್‌ಎಫ್‌ಐ ಎತ್ತಿದ್ದು, ಅದೀಗ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಕಲ್ಯಾಣ ಕುರಿತ ಸಂಸದೀಯ ಸ್ಥಾಯೀ ಸಮಿತಿಯ ಪರಿಶೀಲನೆಯಲ್ಲಿದೆ.

"ನಾವು ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳಿಗೆ ಸಾಮಾಜಿಕ ನ್ಯಾಯ ಪಡೆಯಲು ಮುಂದೆಯೂ ಸತತವಾಗಿ ಮಧ್ಯಪ್ರವೇಶ ಮಾಡುತ್ತೇವೆ" ಎಂದು ಎಸ್‌ಎಫ್ ಅಧ್ಯಕ್ಷ ವಿ.ಪಿ. ಸಾನು ಮತ್ತು ಪ್ರಧಾನ ಕಾರ್ಯದರ್ಶಿ ಮಯೂಖ್ ಬಿಸ್ವಾಸ್ ಹೇಳಿದ್ದಾರೆ.

ಸಂಪಾದಕೀಯ

ಶಾಲಾ ಮಕ್ಕಳ ಸಾವಿಗೆ ಯಾರು ಹೊಣೆ?

ತುಮಕೂರು ಜಿಲ್ಲೆಯ ಕರಿಕೆರೆ ಗ್ರಾಮದ ಸರ್ಕಾರಿ ಶಾಲೆಯೊಂದರಲ್ಲಿ ಆಗಸ್ಟ್ 15 ರಂದು ರಾಷ್ಟ್ರಧ್ವಜ ಹಾರಿಸುವುದಕ್ಕಾಗಿ ಕಂಬವನ್ನು ನಿಲ್ಲಿಸುತ್ತಿದ್ದಾಗ ವಿದ್ಯುತ್ ಪ್ರವಹಿಸಿ 16 ವರ್ಷದ ಬಾಲಕ ಚಂದನ್ ಮೃತಪಟ್ಟಿದ್ದು ಶಶಾಂಕ ಮತ್ತು ಪವನ್ ಎಂಬ ಇನ್ನಿಬ್ಬರು ವಿದ್ಯಾರ್ಥಿಗಳು ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪ್ರಸಾರವಾದ ದಾರುಣ ಘಟನೆ ಮತ್ತೊಮ್ಮೆ ಮಕ್ಕಳ ಪಾಲಕರನ್ನು ತೀವ್ರ ಆತಂಕಕ್ಕೆ ತಳ್ಳಿದೆ. ಈಗ 2 ವರ್ಷಗಳ ಹಿಂದೆ ಕೊಪ್ಪಳದ ಬನ್ನಿ ಕಟ್ಟೆಯಲ್ಲಿರುವ ವಿದ್ಯಾರ್ಥಿ ನಿಲಯವೊಂದರಲ್ಲಿ ಇದೇ ರೀತಿ ರಾಷ್ಟ್ರ ಧ್ವಜವನ್ನು ಕೆಳಗೆ ಇಳಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿದ್ಯುತ್ ಸಂಪರ್ಕಕ್ಕೆ ಒಳಗಾಗಿ ಸಾವನ್ನಪ್ಪಿದರು. ಇಂತಹ ದುರ್ಘಟನೆಗಳು ಮತ್ತೆ ಮರುಕಳಿಸಲಿಕ್ಕಿಲ್ಲ ಎಂದು ಅಂದು ಸಮಾಧಾನ ಮಾಡಿಕೊಂಡಿದ್ದ ವಿದ್ಯಾರ್ಥಿಗಳ ಪಾಲಕರು ಮತ್ತೆ ತಲ್ಲಣಕ್ಕೊಳಗಾಗಿದ್ದಾರೆ. ಮಕ್ಕಳನ್ನು ಶಾಲೆಗೆ ಕಳುಹಿಸುವುದು ಹೇಗೆ ಎಂಬ ಆತಂಕ ಅವರನ್ನು ತೀವ್ರವಾಗಿ ಕಾಡತೊಡಗಿದೆ. ಅವರು ಬಡವರಿರಬಹುದು. ಆದರೆ ತಮ್ಮ ಮಕ್ಕಳಲ್ಲಿ ಅವರು ಹತ್ತು ಹಲವು ಕನಸುಗಳನ್ನು ಕಾಣುತ್ತಿರುತ್ತಾರೆ. ಅವರ ಇದೇ ಮಕ್ಕಳು ಇಂತಹ ಅಕಾಲಿಕ ಸಾವಿಗೆ ಬಲಿಯಾದಾಗ ಆ ತಂದೆ ತಾಯಿಯರ ಪಾಲಿಗೆ ಆಕಾಶವೇ ಅವರ ಮೇಲೆ ಕಳಚಿಬಿದ್ದ ಅನುಭವವಾದರೆ ಆಶ್ಚರ್ಯವಿಲ್ಲ. ಏನು ಕೊಟ್ಟರು ಯಾರು ತಮ್ಮ ಮಕ್ಕಳ ಜೀವವನ್ನು ಮರಳಿ ಕೊಡಲಾರರು ಎಂಬ ಕಟು ಸತ್ಯ ಅವರನ್ನು ಹತಾಶರಾಗಿಸುತ್ತಿದೆ.

ತುಮಕೂರಿನ ಹೃದಯ ವಿದ್ರಾವಕ ಘಟನೆಯಲ್ಲಿ ನಮ್ಮ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ಮಧ್ಯಪ್ರವೇಶ ಮಾಡಿದ್ದು ಹೆಮ್ಮೆಯ ವಿಷಯ. ಈ ಸಂಬಂಧ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಶಕ್ತಿ ಅರ್ಜಿ ದಾಖಲಿಸಿಕೊಂಡು ತನಿಖೆಗೆ ಮುಂದಾಗಿದೆ. ನೂತನ ಮಂತ್ರಿಗಳು, ಜಿಲ್ಲಾ ಉಸ್ತುವಾರಿಗಳು ಇತ್ತ ತಮ್ಮ ಚಿತ್ತವನ್ನು ತಿರುಗಿಸುವ ಮೊದಲೇ ರಾಜ್ಯದ ಉಚ್ಚ ನ್ಯಾಯಾಲಯ ಮೃತಪಟ್ಟ ಬಾಲಕನ ಪೋಷಕರಿಗೆ ಕೂಡಲೇ ಸೂಕ್ತ ಪರಿಹಾರವನ್ನು ನೀಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇಬ್ಬರು ವಿದ್ಯಾರ್ಥಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿದೆಯೇ ಎಂಬುವುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು. ಸರಿಯಾದ ಚಿಕಿತ್ಸೆ ದೊರೆಯುವಂತೆ ತುಮಕೂರು ಜಿಲ್ಲಾ ಜಿಲ್ಲಾಧಿಕಾರಿ ನೋಡಿಕೊಳ್ಳಬೇಕು. ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕಾಗುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ, ನ್ಯಾಯಮೂರ್ತಿ ಎನ್.ಎಸ್. ಸಂಜಯ್ ಗೌಡ ಸದಸ್ಯರಾಗಿರುವ ವಿಭಾಗೀಯ ಪೀಠ ಹೇಳಿತು. ಅಲ್ಲದೆ ಘಟನೆಯ ಕುರಿತು ಒಂದು ವರದಿಯನ್ನು ಸಲ್ಲಿಸುವಂತೆಯೂ ಆದೇಶ ನೀಡಿ ಪ್ರಕರಣದ ವಿಚಾರಣೆಯನ್ನು ಸೆಪ್ಟಂಬರ್ 6 ಕ್ಕೆ ಮುಂದೂಡಿತು.

ಪ್ರಕರಣದಲ್ಲಿ ರಾಜ್ಯ ಹೈಕೋರ್ಟಿನ ಮಧ್ಯಪ್ರವೇಶದಿಂದಾಗಿ ಪ್ರಶ್ನೆಯೊಂದು ತಲೆಎತ್ತುವಂತಾಗಿದೆ. ವಿದ್ಯಾರ್ಥಿಗಳ ಇಂತಹ ಕರುಣಾಜನಕ ಸಾವುಗಳಿಗೆ ಯಾರು ಹೊಣೆ? ಹೊಣೆ ಸರ್ಕಾರದಲ್ಲದೆ ಇನ್ನು ಯಾರದ್ದು? ನಮ್ಮ ಕೇಂದ್ರ/ ರಾಜ್ಯ ಸರ್ಕಾರಗಳು ಇಂತಹ ವಿಷಯಗಳಲ್ಲೂ ಹೊಣೆಗೇಡಿಯಾಗಿ ವರ್ತಿಸುತ್ತಾ ಬಂದಿವೆ.

ನಮ್ಮ ಮಕ್ಕಳು ಶಾಲೆಗೆ ಹೋಗುವಾಗ ದಾರಿಯಲ್ಲಿ, ಶಾಲೆಯಲ್ಲಿ ಇರುವಾಗ, ಶಾಲೆಯಿಂದ ಮನೆಗೆ ತೆರಳುವಾಗ ಅನೇಕ ರೀತಿಯ ಅನಾಹುತಗಳಿಗೆ ತುತ್ತಾಗುತ್ತಿರುತ್ತಾರೆ. ಅನೇಕ ಆಕಸ್ಮಿಕ, ಅನಿರೀಕ್ಷಿತ ದುರ್ಘಟನೆಗಳು ಸಂಭವಿಸುತ್ತಿರುತ್ತವೆ. ರಸ್ತೆ ಅಪಘಾತಗಳು, ಪ್ರವಾಹಕ್ಕೆ ಸಿಕ್ಕಿಕೊಂಡು, ಅತ್ಯಾಚಾರಿಗಳ ಮತ್ತು ಕೊಲೆಗಾರರ ಕೈಗೆ ಸಿಲುಕಿಕೊಂಡು, ವಿಷದ ಹಾವು ಕಚ್ಚಿ, ಸಿಡಿಲು ಬಡಿದು, ಶಾಲೆಯ ಗೋಡೆ ಕುಸಿದು, ಮಕ್ಕಳ ಮೇಲೆ ಬಿದ್ದಾಗ ನಮ್ಮ ಮಕ್ಕಳು ಅನಿರೀಕ್ಷಿತ ಸಾವುಗಳಿಗೆ ಬಲಿಯಾಗುತ್ತಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಸರ್ಕಾರ ಸಹಾಯದ ಹಸ್ತ ಚಾಚಲು ಹಿಂಜರಿಯಬಾರದು. ಸರ್ಕಾರಕ್ಕೆ ತಮ್ಮ ಮಕ್ಕಳು, ಪರರ ಮಕ್ಕಳು ಎಂಬ ತಾರತಮ್ಯದ ಕಣ್ಣುಗಳು ಇರಬಾರದು. ಎಲ್ಲಾ ಮಕ್ಕಳೂ ದೇಶದ ಮಕ್ಕಳು ಎಂದುಕೊಳ್ಳಬೇಕು ನಾವು ಮತ್ತು ನಮ್ಮ ಸರ್ಕಾರ, ನೊಂದ ಕುಟುಂಬಗಳಿಗೆ ಗರಿಷ್ಠ ಪರಿಹಾರ ನೀಡಲು ಸರ್ಕಾರ ವಿಳಂಬ ಮಾಡಬಾರದು. ಸಂಭವಿಸಬಹುದಾದ ಅಪಘಾತಗಳಿಗೆ ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಂಡಿರಬೇಕು. ಉದಾಹರಣೆಗೆ ರಾಷ್ಟ್ರಧ್ವಜ ಏರಿಸುವಾಗ ಅಥವ ಇಳಿಸುವಾಗ ಹತ್ತಿರದಲ್ಲಿ ವಿದ್ಯುತ್ ತಂತಿಗಳಿದ್ದರೆ ಅನಾಹುತ ಕಟ್ಟಿಟ್ಟ ಬುತ್ತಿ ಇದ್ದಂತೆ. ಇಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಅಸಾಧ್ಯವೇನಲ್ಲ. ಕಠಿಣವಾದ ನಿಯಮಗಳನ್ನು ರೂಪಿಸಿ ಜಾರಿಗೆ ತರಬೇಕು. ಅಪಾಯ ಇರುವ ಸ್ಥಳದಲ್ಲಿ ಧ್ವಜಾರೋಹಣ ಜರಗಿಸುವುದನ್ನೇ ನಿಷೇಧಿಸಬಹುದು.

ಶಿಥಿಲಗೊಂಡ ಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸಬೇಕಾದ ಪರಿಸ್ಥಿತಿಯನ್ನು ರಾಜ್ಯ ಸರ್ಕಾರ ಕೂಡಲೇ ನಿವಾರಿಸಿಕೊಳ್ಳಬೇಕು. ಮಕ್ಕಳನ್ನು ಹೊರಗಡೆ ಮಣ್ಣಲ್ಲಿ, ಬಿಸಿಲಿನಲ್ಲಿ ಕೂಡಿಸಿ ಪಾಠ ನಡೆಸುವುದನ್ನು ನಿಲ್ಲಿಸಬೇಕು. ವಿದ್ಯುತ್ ಪ್ರಸರಣವನ್ನು ನಿಯಂತ್ರಿಸಲು ಸರ್ಕಾರ ಶಾಲೆಗೆ ಅಗತ್ಯ ನುರಿತ ಸಿಬ್ಬಂದಿಗಳನ್ನು ನೇಮಿಸಬೇಕು. ಪ್ರತಿಯೊಂದು ಶಾಲೆಯಲ್ಲಿ ಪ್ರಥಮ ಚಿಕಿತ್ಸಾ ಸೌಲಭ್ಯವನ್ನು ಕಾಯ್ದಿಡಬೇಕು. ಶಾಲೆಯ ಪರಿಸರ ಆರೋಗ್ಯಕರವಾಗಿರಬೇಕು. ಶಾಲೆಯನ್ನು, ಹಾಗೂ ಶಾಲೆಯ ವಠಾರವನ್ನು ಮಲಿನಗೊಳಿಸುವುದನ್ನು ತಡೆಯಲು ಬಿಗಿಯಾದ ಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ಅವಘಡಗಳು ಸಂಭವಿಸಿದಾಗ ಚಿಕಿತ್ಸೆಗಾಗಿ ಮಕ್ಕಳನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲು ತುರ್ತು ವ್ಯವಸ್ಥೆ ಮಾಡಿಕೊಳ್ಳಬೇಕು. ಮಕ್ಕಳ ಸುರಕ್ಷತೆ ಬಗ್ಗೆ ಗಮನ ನೀಡಲು ಸಾರ್ವಜನಿಕ ಸಮಿತಿಯನ್ನು ರಚಿಸಬೇಕು.

ಕೋವಿಡ್ ವಿಷಯದಲ್ಲೂ ಸರಕಾರದ ವೈಫಲ್ಯದಿಂದಾಗಿ ಮಕ್ಕಳ ಸಾವುಗಳು ಸಂಭವಿಸಿವೆ. ಮಕ್ಕಳನ್ನು ಬೆದರಿಸುವ ಅಗತ್ಯವಿಲ್ಲ. ಮಾಧ್ಯಮಗಳಲ್ಲಿ ಭಯ ಹುಟ್ಟಿಸುವುದಕ್ಕೆ ಪೈಪೋಟಿ ನಡೆಸುತ್ತಿದ್ದಂತೆ ಕಾಣುತ್ತದೆ. ಯಾವುದೇ ರೋಗಿ ವೈದ್ಯರ ಒಳ್ಳೆಯ ಮಾತುಗಳಿಂದ, ಸಿಬ್ಬಂದಿಗಳ ಮಾನವೀಯ ಮುಖದ ಸೇವೆಯಿಂದ 50% ರಷ್ಟು ಗುಣ ಆಗಿರುತ್ತಾರೆ. ಅವರು ಚಿಕಿತ್ಸೆಯನ್ನು ವಿಶ್ವಾಸದಿಂದ ಸ್ವೀಕರಿಸುತ್ತಾರೆ. ಗುಣಮುಖರಾಗುತ್ತಾರೆ.

ನಮ್ಮ ಎಲ್ಲಾ ಮಕ್ಕಳು ದೇಶದ ಆಸ್ತಿ. ಅವರೆಲ್ಲರಿಗೆ ಯಾವುದೇ ತಾರತಮ್ಯವಿಲ್ಲದೆ ಸಮಾನ ಸೌಲಭ್ಯಗಳು ಸಿಗುವಂತಾಗಬೇಕು. ಇಂದಿನ ಮಕ್ಕಳು ನಾಳೆಯ ನಾಗರಿಕರು. ಅವರ ನಾಳೆಗಳು ಒಳ್ಳೆಯದವುಗಳಾಗಬೇಕಾದರೆ ಇಂದು ಅವರ ಬಗ್ಗೆ ನಮ್ಮ ಹಾಗೂ ನಮ್ಮ ಸರ್ಕಾರದ ಕಾಳಜಿ ಹೆಚ್ಚಾಗಬೇಕು. ಅವರಿಗಾಗಿ ಈಗ ಖರ್ಚು ಮಾಡುವ ಹಣ ವ್ಯರ್ಥವಲ್ಲ. ಮುಂದಿನ ಸುಂದರ ಬದುಕಿಗೆ, ಮುಂದಿನ ಸಮೃದ್ಧ ದೇಶಕ್ಕಾಗಿ ಹೂಡಲಾದ ಬಂಡವಾಳ.

ನೇರ ನಗದು ವರ್ಗಾವಣೆ ತಡೆಯಿರಿ, ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಸಿಪಿಐ(ಎಂ) ಆಗ್ರಹ

ಅಪೌಷ್ಠಿಕತೆಯ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಯ ನೀತಿಯನ್ನು ಜಾರಿಗೊಳಿಸಲಾಗುತ್ತಿದೆ. ಅದೇ ರೀತಿ, ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗುತ್ತಿದೆ. ನೇರ ನಗದು ವರ್ಗಾವಣೆ ಯೆಂಬುದು ಅಪೌಷ್ಠಿಕತೆಯಿಂದ ಬಳಲುವವರನ್ನು ಮತ್ತಷ್ಟು ಸಂಕಷ್ಟಕ್ಕೆ ಈಡು ಮಾಡುವ ಕ್ರಮವಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಕರ್ನಾಟಕ ರಾಜ್ಯ ಸಮಿತಿಯು ತಿಳಿಸಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಅವರು ಅಪೌಷ್ಠಿಕತೆಯ ನಿವಾರಣೆ ಮತ್ತು ಆರು ವರ್ಷದ ಒಳಗಿನ ಮಕ್ಕಳಿಗೆ ಪ್ರಾಥಮಿಕ ಪೂರ್ವ ಶಾಲೆಗಳಾಗಿ ಕೆಲ ಮಟ್ಟಿಗಾದರೂ ಕಾರ್ಯ ನಿರ್ವಹಿಸುತ್ತಿರುವ ರಾಜ್ಯದಾದ್ಯಂತ ಇರುವ ಸುಮಾರು 70,000 ಅಂಗನವಾಡಿ ಕೇಂದ್ರಗಳಲ್ಲಿ ಸುಮಾರು 47 ಲಕ್ಷ ಫಲಾನುಭವಿಗಳಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಹಾಗೂ ಕೇಸರೀಕರಣದ ನೀತಿಗಳಿಂದಾಗಿ ದುಡಿಯುವ ಬಹು ಸಂಖ್ಯಾತ ಜನತೆ ವ್ಯಾಪಕವಾಗಿ ದಿವಾಳಿಯಾಗುತ್ತಿರುವುದರಿಂದ, ಅಪೌಷ್ಠಿಕತೆಯ ದುಸ್ಥಿತಿ ದಿನೇ ದಿನೇ ಮತ್ತಷ್ಟು ಹೆಚ್ಚುತ್ತಲೇ ಸಾಗಲಿದೆ ಎಂದು ಆರೋಪಿಸಿದ್ದಾರೆ.

ಇಂತಹ ಸಂದರ್ಭದಲ್ಲಿ ಈ ದುಸ್ಥಿತಿಯಿಂದ ಅವರನ್ನು ಮೇಲೆತ್ತಲು ಈಗಿರುವ ಐಸಿಡಿಎಸ್ ಯೋಜನೆಯನ್ನು ಮತ್ತಷ್ಟು ಅನುದಾನದೊಂದಿಗೆ ಬಲಪಡಿಸಬೇಕಾಗಿದೆ. ಆದರೆ, ಒಕ್ಕೂಟದ ಹಾಗೂ ರಾಜ್ಯ ಸರಕಾರಗಳು ಐಸಿಡಿಎಸ್ ಯೋಜನೆಯನ್ನು ಕಿತ್ತು ಹಾಕುವ ಮತ್ತು ಬಡಮಕ್ಕಳು, ಬಾಲಿಕೆಯರನ್ನು ಶಿಕ್ಷಣದಿಂದ ಹಾಗೂ ಮೀಸಲಾತಿಯಿಂದ ಹೊರಗಿಡುವ ಸಂಚನ್ನು ನಡೆಸಿರುವುದು ತೀವ್ರ ಖಂಡನೀಯ ಎಂದು ತಿಳಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರಕಾರದ ಇಂತಹ ಕ್ರಮಗಳಿಂದ ಮೂರು ರೀತಿಯಲ್ಲಿ ವಂಚನೆ ಎದುರಾಗಲಿದೆ.

ಒಂದು ಪ್ರಮುಖ ವಂಚನೆಯ ಅಂಶವನ್ನು ಪರಿಗಣಿಸುವುದಾದಲ್ಲಿ, ಅಡುಗೆ ಅನಿಲದ ವಿಚಾರದಲ್ಲಿ ಜಾರಿಯಲ್ಲಿರುವ ನಗದು ವರ್ಗಾವಣೆಯು ಫಲಾನುಭವಿಗಳಿಗೆ ಬಹುತೇಕ ತಲುಪುತ್ತಿಲ್ಲ ಅಥವಾ ನಿಲ್ಲಿಸಲಾಗುತ್ತಿದೆ. ಅದೇ ರೀತಿ ಅಡುಗೆ ಅನಿಲದ ಬೆಲೆಯನ್ನು ಗಗನ ಮುಖಿಯಾಗಿದೆ.

ಇದೇ ಪರಿಸ್ಥಿತಿಯನ್ನು ಈ ಅಪೌಷ್ಠಿಕತೆಯ ಫಲಾನುಭವಿಗಳು ಅನುಭವಿಸಲಿದ್ದಾರೆ. ಇವರು ಮುಂದೆ ನಗದನ್ನು ಪಡೆಯಲಾರರು ಮತ್ತು ಪೌಷ್ಠಿಕ ಆಹಾರದ ಬೆಲೆ ಏರಿಕೆಯಿಂದ ಅದರ ಕನಸನ್ನು ಕಾಣಲಾರರು. ಮೇಲಾಗಿ, ತೀವ್ರ ಸಾಲದ ಬಾಧೆಯಿಂದ ನಲುಗುವ ಈ ಫಲಾನುಭವಿಗಳ ಕುಟುಂಬಗಳು ಕೆಲ ದಿನಗಳ ಮಟ್ಟಿಗಾದರೂ ಸಿಗುವ ಅಲ್ಪಸ್ವಲ್ಪ ನಗದನ್ನು ಆಹಾರಕ್ಕಾಗಿಯೇ ಬಳಸುವರೆಂಬ ಯಾವುದೇ ಖಾತರಿ ಇಲ್ಲ.

ಇದು ಮಾತ್ರವೇ ಅಲ್ಲಾ ಈ ನಗದು ವರ್ಗಾವಣೆಯು ಅಂಗನವಾಡಿ ಕೇಂದ್ರಗಳನ್ನು ಮುಚ್ಚಿ ಹಾಕುವುದರಿಂದ ರಾಜ್ಯದ ಸುಮಾರು 1.40 ಲಕ್ಷ ನೌಕರರು ಉದ್ಯೋಗ ಕಳೆದುಕೊಳ್ಳಲಿದ್ದಾರೆ ಹಾಗೂ ದುಬಾರಿ ವಂತಿಗೆ ನೀಡಿ ನರ್ಸರಿಗೆ ಸೇರಲಾಗದ ಈ ಬಡ ಮಕ್ಕಳು, ಪೌಷ್ಠಿಕ ಆಹಾರ ಮತ್ತು ಸಿಗುತ್ತಿದ್ದ ಪ್ರಾಥಮಿಕ ಪೂರ್ವ ಕನಿಷ್ಠ ಶಿಕ್ಷಣದಿಂದಲೂ ವಂಚಿತಗೊಳ್ಳಲಿವೆ. ಶಿಕ್ಷಣದ ಖಾಸಗೀಕರಣವೂ ಈ ಬಡವರ ಮಕ್ಕಳು ಮತ್ತು ಎಲ್ಲ ಬಾಲಕೀಯರು ಮತ್ತು ತರುಣಿಯರನ್ನು ಶಿಕ್ಷಣ ಕ್ಷೇತ್ರದಿಂದ ಹೊರದೂಡಲಿದೆ. ಅದೇ ರೀತಿ, ಈ ದುರ್ಬಲ ಜನ ಸಮುದಾಯಗಳು ಮೀಸಲು ಸೌಲಭ್ಯದಿಂದ ವಂಚನೆಗೊಳಗಾಗಲಿವೆ ಎಂದು ಸಿಪಿಐ(ಎಂ) ಪಕ್ಷವು ವಿವರಿಸಿದೆ.

ಆದ್ದರಿಂದ ನೇರ ನಗದು ವರ್ಗಾವಣೆ ಮತ್ತು ನೂತನ ರಾಷ್ಟ್ರೀಯ ಶಿಕ್ಷಣ ನೀತಿಗಳು ತೀವ್ರ ಪ್ರಮಾದಕರ ನೀತಿಗಳಾಗಿದ್ದು, ಅವುಗಳನ್ನು ರಾಜ್ಯದಲ್ಲಿ ಜಾರಿಗೊಳಿಸಬಾರದೆಂದು ಸಿಪಿಐ(ಎಂ) ಬಲವಾಗಿ ಒತ್ತಾಯಿಸುತ್ತದೆ. ಮಾತ್ರವಲ್ಲಾ, ಒಕ್ಕೂಟ ಸರಕಾರಕ್ಕೆ ಪತ್ರ ಬರೆದು ಅವುಗಳನ್ನು ಹಿಂಪಡೆಯುವಂತೆ ರಾಜ್ಯ ಸರಕಾರ ಜನತೆಯ ಪರವಾಗಿ ಒತ್ತಾಯಿಸಬೇಕೆಂದು ಮನವಿ ಮಾಡಿದೆ.

ಅದೇ ರೀತಿ, ಐಸಿಡಿಎಸ್ ಯೋಜನೆಯನ್ನು ಬಲಗೊಳಿಸಲು ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಕ್ರಮವಹಿಸಬೇಕು. ನೌಕರರ ಉದ್ಯೋಗಗಳನ್ನು ಖಾಯಂಗೊಳಿಸಿ, ಅಗತ್ಯ ತರಬೇತಿ ನೀಡಿ ಅಂಗನವಾಡಿ ಕೇಂದ್ರಗಳನ್ನು ಇದ್ದಲ್ಲಿಯೇ ಪ್ರಾಥಮಿಕ ಪೂರ್ವಶಿಕ್ಷಣ ಒದಗಿಸುವ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಬೇಕು. ಅಗತ್ಯ ನೆರವನ್ನು ಒದಗಿಸಬೇಕು. ಈ ಕುರಿತು ಅಗತ್ಯ ಕ್ರಮವಹಿಸುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಒತ್ತಾಯಿಸಿದೆ.

ದೆಹಲಿ ರೈತ ಹೋರಾಟವನ್ನು ಅವಮಾನಿಸಿದ ಸಚಿವೆ ಶೋಭಾ ಕರಂದ್ಲಾಜೆ – ಸಚಿವರ ರಾಜೀನಾಮೆಗೆ ರೈತ ಸಂಘಟನೆಗಳ ಆಗ್ರಹ

ದೆಹಲಿಯಲ್ಲಿ ನಡೆಯುತ್ತಿರುವುದು ರೈತರ ಹೋರಾಟವಲ್ಲ, ಅದು ದಲ್ಲಾಳಿಗಳ ಹೋರಾಟವಾಗಿದೆ ಎಂದು ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ. ಸಚಿವರ ಈ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ರೈತರು ಹಾಗೂ ಕೃಷಿಯ ಕುರಿತು ಅಜ್ಞಾನ ಮತ್ತು ತಿರಸ್ಕಾರ ಹೊಂದಿರುವ ಸಚಿವೆ ಶೋಭಾ ಕರಂದ್ಲಾಜೆಯವರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಆಗ್ರಹಿಸಿದೆ.

ಜನಾಶೀರ್ವಾದ ಯಾತ್ರೆ ಅಂಗವಾಗಿ ಮೈಸೂರಿಗೆ ಆಗಮಿಸಿದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾಧ್ಯಮದವರೊಂದಿಗೆ ಮಾತನಾಡುತ್ತಾ, ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ಮಾಡುತ್ತಿರುವವರು ರೈತರಲ್ಲ, ರೈತರ ಹೆಸರಿನ ದಲ್ಲಾಳಿಗಳು, ರೈತರನ್ನಾದರೆ ಮನವೊಲಿಸಬಹುದು, ರೈತರಂತೆ ನಟಿಸುವವರನ್ನು ಮನವೊಲಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಈ ಕಾಯ್ದೆಗಳಿಂದ ರೈತರ ಬೆಳೆ ಮಾರಾಟಕ್ಕೆ ಅನುಕೂಲವಾಗಲಿದೆ. ರೈತರ ಹೊಲಕ್ಕೆ ಮುಂಬೈನಿಂದ ಟ್ರಕ್ ಬಂದು ನಿಲ್ಲುತ್ತದೆ, ನೂತನ ಕಾಯ್ದೆಯಿಂದ ರೈತರು ಎಪಿಎಂಸಿ ಹೊರತಾಗಿ ಹೊರಗೆ ವ್ಯಾಪಾರ ಮಾಡಬಹುದು. ರೈತ ಹೆಚ್ಚಿನ ಬೆಲೆಗೆ ತನ್ನ ಬೆಳೆ ಮಾರಾಟ ಮಾಡಲು ಅನುಕೂಲ ಆಗಲಿದೆ, ಆದರೆ ದೆಹಲಿಯಲ್ಲಿ ಎಂಟತ್ತು ತಿಂಗಳಿಂದ ಹೋರಾಟ ಮಾಡುತ್ತಿದ್ದಾರೆ. ಅವರು ರೈತರಲ್ಲ, ದಲ್ಲಾಳಿಗಳು ಎಂದು ಹೇಳಿದ್ದು ವಿವಾದಕ್ಕೆ ಕಾರಣವಾಗಿತ್ತು.

ರಾಜೀನಾಮೆಗೆ ಪ್ರಾಂತ ರೈತ ಸಂಘ ಆಗ್ರಹ :

ಕರ್ನಾಟಕ ಪ್ರಾಂತ ರೈತ ಸಂಘ ಸಚಿವರ ಉದ್ಧಟತನವನ್ನು ಬಲವಾಗಿ ಖಂಡಿಸಿದೆ ಮತ್ತು ಸಚಿವರು ದೇಶದ ಅನ್ನದಾತರ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದೆ.

ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ರೈತ ಹಾಗೂ ಕಾರ್ಮಿಕ ವಿರೋಧಿ ತಿದ್ದುಪಡಿ ಕೃಷಿ ಕಾಯ್ದೆಗಳನ್ನು ಪ್ರತಿರೋಧಿಸಿ ದೇಶದಾದ್ಯಂತ ಕಳೆದ ನವೆಂಬರ್ ತಿಂಗಳಿಂದ ನಿರಂತರ ಹೋರಾಟದಲ್ಲಿ ತೊಡಗಿರುವ ಲಕ್ಷಾಂತರ ರೈತ ಕುಟುಂಬಗಳನ್ನು, ಅವರು ರೈತರಲ್ಲಾ ಬ್ರೋಕರ್ ಗಳೆಂದು ಉದ್ಧಟತನದ ಮಾತನಾಡಿ ಅಪಮಾನಿಸಿದ್ದಾರೆ. ರೈತರು ಹಾಗೂ ಕೃಷಿಯ ಕುರಿತು ಅಜ್ಞಾನ ಮತ್ತು ತಿರಸ್ಕಾರ ಹೊಂದಿರುವ ಇವರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕೆಂದು ಪ್ರಧಾನ ಮಂತ್ರಿಗಳನ್ನು ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ಕಾರ್ಪೋರೇಟ್ ಕಂಪನಿಗಳ ಬ್ರೋಕರ್ ಗಳಾಗಿ ದೇಶವನ್ನು ಹಾಗೂ ಕೃಷಿಯನ್ನು ಕಾರ್ಪೋರೇಟ್ ಲೂಟಿಗಾಗಿ ತೆರೆಯುತ್ತಿರುವವರಾರೆಂದು ದೇಶ ಮತ್ತು ಜಗತ್ತಿಗೆ ತಿಳಿದಿದೆಯೆಂದು ಪ್ರಾಂತ ರೈತ ಸಂಘ ಛೇಡಿಸಿದೆ.

ಖಾಸಗೀಕರಣಗೊಳಿಸದೇ ಸರಕಾರವೇ ಕುಡಿಯುವ ನೀರನ್ನು ಒದಗಿಸಲಿ: ಸಿಪಿಐ(ಎಂ) ಆಗ್ರಹ



ಜನತೆಗೆ ಕನಿಷ್ಠ ಶುದ್ಧ ಕುಡಿಯುವ ನೀರನ್ನು ಉಚಿತವಾಗಿ ಒದಗಿಸಲಾಗದ ಕೇಂದ್ರ-ರಾಜ್ಯ ಸರಕಾರಗಳ ಈ ದುರ್ನಡೆ ನಾಚಿಕೆ ಗೇಡಿನದಾಗಿದೆ. ಜಲ ಜೀವನ ಮಿಷನ್ ಹೆಸರಿನ ಕಾರ್ಯಕ್ರಮದ ಮೂಲಕ ಗ್ರಾಮ ಪಂಚಾಯತ್‌ಗಳು ಜನತೆಯ ಮೇಲೆ ಮತ್ತಷ್ಟು ಹೊರೆ ಹೇರಲು ಹೊರಟಿವೆ. ತಲಾ ವ್ಯಕ್ತಿಗೆ 55 ಲೀಟರ್ ನೀರನ್ನು ಮನೆ ಮನೆಗೆ, ಮೀಟರ್ ಮಾಪನದೊಂದಿಗೆ, ವಯುಕ್ತಿಕ ನಳಗಳನ್ನು ಅಳವಡಿಸುವ ಮೂಲಕ ನೀರು ಸರಬರಾಜು ಮಾಡಲಾಗುವುದೆಂದು ಮತ್ತು ಇದಕ್ಕಾಗಿ, ಗ್ರಾಮದ ಶೇ.85 ರಷ್ಟಿರುವ ಬಡ ಜನತೆಯು ಸೇರಿದಂತೆ ಶೇ.10 ರಷ್ಟು ವಂತಿಗೆಯನ್ನು ನೀಡುವಂತೆ ಒತ್ತಾಯಿಸಲಾಗುತ್ತದೆ.

ಸರಕಾರದ ಈ ಕ್ರಮವನ್ನು ಖಂಡಿಸಿರುವ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)– ಸಿಪಿಐ(ಎಂ), ಕರ್ನಾಟಕ ರಾಜ್ಯ ಸಮಿತಿಯು ನಗರ ಹಾಗೂ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಖಾಸಗೀಕರಣವನ್ನು ತೀವ್ರವಾಗಿ ವಿರೋಧಿಸುತ್ತದೆ ಮತ್ತು ಅಂತಹ ಎಲ್ಲಾ ಕಾರ್ಯಕ್ರಮಗಳನ್ನು ಕೈಬಿಡುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಒತ್ತಾಯಿಸಿದೆ.

ಪತ್ರಿಕಾ ಹೇಳಿಕೆ ನೀಡಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು.ಬಸವರಾಜ ಅವರು "ರಾಜ್ಯದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಆಗಿಂದಾಗ್ಗೆ ಅದರ ಖಾಸಗೀಕರಣದ ಪ್ರಸ್ತಾಪಗಳು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕಡೆಯಿಂದ ಬರುತ್ತಲೇ ಇದೆ. ರಾಜ್ಯದ ಜನತೆ ಅದನ್ನು ತೀವ್ರವಾಗಿ ವಿರೋಧಿಸುತ್ತಲೂ ಇದ್ದಾರೆ" ಎಂದು ತಿಳಿಸಿದ್ದಾರೆ.

ಕೋವಿಡ್ ಸಂಕಷ್ಟದ ನಡುವೆ, ಇದೀಗ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಖಾಸಗೀಕರಣದ ಕಾರ್ಯಕ್ರಮವನ್ನು, ಸದ್ದಿಲ್ಲದೇ ಗ್ರಾಮ ಪಂಚಾಯತ್‌ಗಳ ಮೂಲಕ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೊಳಿಸಲು ಮುಂದಾಗುತ್ತಿರುವುದು ತೀವ್ರ ಖಂಡನೀಯವಾಗಿದೆ.

ಮನೆ-ಮನೆಗೆ ವಯಕ್ತಿಕ ನಳಗಳ ಅಳವಡಿಕೆ ಮೂಲಕ ನೀರು ಸರಬರಾಜು ಮಾಡುವ ವಿಚಾರ ಒಪ್ಪಬಹುದಾಗಿದೆ. ಆದರೇ, ನಳಗಳಲ್ಲಿ ಬರುವ ನೀರನ್ನು ಮಾಪನ ಮಾಡುವ ಮೀಟರ್ ಅಳವಡಿಕೆಯನ್ನು ಒಪ್ಪಲಾಗದು. ಇದು ಜೀವ ಜಲದ ಖಾಸಗೀಕರಣದ ದುರುದ್ದೇಶ ಹೊಂದಿದೆ. ಅದೇ ರೀತಿ, ರೈತರು, ಕೂಲಿಕಾರರು, ಕಸುಬುದಾರರು, ಕಾರ್ಮಿಕರು, ಮಹಿಳೆಯರು, ದಲಿತರು, ದುರ್ಬಲರು ವಂತಿಗೆ ನೀಡುವ ಸ್ಥಿತಿಯಲ್ಲಿಲ್ಲದಿರುವುದು ಮತ್ತು ಮುಂದೆ ಖಾಸಗೀಕರಿಸಿದರೆ ನೀರಿನ ಬಿಲ್ ಕಟ್ಟುವ ಸ್ಥಿತಿಯಲ್ಲಿಲ್ಲ ಎಂದು ಸಿಪಿಐ(ಎಂ) ಪಕ್ಷವು ತಿಳಿಸಿದೆ.

ಆದ್ದರಿಂದ, ಕೇಂದ್ರ ಹಾಗೂ ರಾಜ್ಯ ಸರಕಾರಗಳೇ ಜನರ ವಂತಿಗೆಯ ಮೊತ್ತವನ್ನು ಭರಿಸಬೇಕು ಹಾಗೂ ನಳಗಳಿಗೆ ಮೀಟರ್ ಅಳವಡಿಕೆ ಮತ್ತು ಖಾಸಗೀಕರಿಸುವ ಪ್ರಸ್ತಾಪಗಳನ್ನು ಕೈ ಬಿಟ್ಟು ಸಾರ್ವಜನಿಕ ರಂಗದಡಿ ಜಲ ಜೀವನ ಮಿಷನ್ ಕಾರ್ಯಕ್ರಮವನ್ನು ಜಾರಿಗೊಳಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಲವಾಗಿ ಒತ್ತಾಯಿಸುತ್ತದೆ.

ಮಂಗಳೂರಿನಲ್ಲಿ ಬಂದರು ತಲೆಹೊರೆ, ಅಡಿಕೆ ಸಂಸ್ಕರಣಾ ಘಟಕಗಳ ಕಾರ್ಮಿಕರ ಸಮಾವೇಶ

ವರದಿ: ವಾ. ಉಚ್ಚಿಲ್

ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಹೋರಾಟ ಅನಿವಾರ್ಯ. ಆಳುವ ವರ್ಗಗಳು ನಿರಂತರ ಕಾರ್ಮಿಕರ ಮೇಲೆ ದಾಳಿಗಳನ್ನು ಸಂಘಟಿಸಿವೆ. ಕಾರ್ಮಿಕ ಸಂಘಟನೆಗಳ ಮುಖಾಂತರ ಹೋರಾಟ ನಡೆಸಿ ಪಡೆದಿರುವ ಎಲ್ಲಾ ಕಾನೂನು ಸವಲತ್ತುಗಳು ನಾಶ ಮಾಡಲಾಗುತ್ತಿದೆ. ಕನಿಷ್ಠ ವೇತನ, ಸಾಮಾಜಿಕ ಭದ್ರತೆ, ಕೆಲಸದ ಭದ್ರತೆ ಅಪಾಯದಲ್ಲಿದೆ. ಮಾಲಿಕರ ಮರ್ಜಿಯಲ್ಲಿ ಕಾರ್ಮಿಕರು ದುಡಿಯಬೇಕಿದೆ. ಗುಲಾಮ ಗಿರಿಯಲ್ಲಿ ಬದುಕು ಸಾಗಿಸಬೇಕಿದೆ ಎಂದು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿಯವರು ಹೇಳಿದರು. ಅವರು ದಿನಾಂಕ 17-8-2021 ರಂದು ಬಂದರು ತಲೆ ಹೊರೆ, ಅಡಿಕೆ ಸಂಸ್ಕರಣಾ ಘಟಕಗಳ ಕಾರ್ಮಿಕರ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು. ಅವರು ಮುಂದುವರಿದು ಕೇಂದ್ರ ಸರ್ಕಾರ ಬೀಡಿ ರೂ.179/-ನ್ನು ಕನಿಷ್ಠ ಕೂಲಿಯಾಗಿ ನಿಗದಿಪಡಿಸಿ ಕಾರ್ಮಿಕ ಸಮುದಾಯಕ್ಕೆ ಅನ್ಯಾಯ ಎಸಗಿದೆ. ಇನ್ನೊಂದು ಬದಿಯಲ್ಲಿ ಅಗತ್ಯ ವಸ್ತುಗಳ ದರವನ್ನು ವಿಪರೀತವಾಗಿ ಏರಿಸಿದೆ. ಪೆಟ್ರೋಲ್ ಉತ್ಪನ್ನಗಳ ದರ ನೂರರ ಗಡಿ ದಾಟಿಸಿ ಇನ್ನೊಬ್ಬರ ಬಳಿ ಬೆರಳು ತೋರಿಸುತ್ತಿದೆ ಎಂದು ಅವರು ಹೇಳಿದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ವಸಂತ ಆಚಾರಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾವೇಶದ ಅಧ್ಯಕ್ಷತೆಯನ್ನು ಅಹಮ್ಮದ್ ಬಾವಾರವರು ವಹಿಸಿದ್ದರು. ಸಮಾವೇಶವು ಗೌರವ ಅಧ್ಯಕ್ಷರಾಗಿ ವಸಂತ ಆಚಾರಿ, ಅಧ್ಯಕ್ಷರಾಗಿ ಅಹಮ್ಮದ್ ಬಾವಾ, ಪ್ರಧಾನ ಕಾರ್ಯದರ್ಶಿಯಾಗಿ ನಝೀರ್ ಅಹಮ್ಮದ್, ಖಜಾಂಚಿಯಾಗಿ ಸುರೇಖ ರವರುಳ್ಳ 18 ಮಂದಿಯ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಪ್ರಾರಂಭದಲ್ಲಿ ನಝೀರ್ ಅಹಮ್ಮದ್‌ರವರು ಸ್ವಾಗತಿಸಿದರು.

ಏರಿಸಿದ ಬಸ್ ಪ್ರಯಾಣ ದರವನ್ನು ಕೂಡಲೇ ತಡೆಹಿಡಿದು ಸಾರಿಗೆ ಪ್ರಾಧಿಕಾರದ ಸಭೆ ಕರೆಯಲು ಒತ್ತಾಯಿಸಿ ಐಕ್ಯ ಪ್ರತಿಭಟನೆ



ಖಾಸಗೀ ಬಸ್ ಪ್ರಯಾಣ ದರದ ವಿಪರೀತ ಏರಿಕೆಯನ್ನು ವಿರೋಧಿಸಿ, ಜಿಲ್ಲಾಡಳಿತದ ಏಕಪಕ್ಷೀಯ ನಿರ್ಧಾರವನ್ನು ಖಂಡಿಸಿ, ಏರಿಸಿದ ಬಸ್ ಪ್ರಯಾಣ ದರವನ್ನು ಕೂಡಲೇ ತಡೆಹಿಡಿದು, ಸಾರಿಗೆ ಪ್ರಾಧಿಕಾರದ ಸಭೆ ಕರೆಯಲು ಒತ್ತಾಯಿಸಿ ದ.ಕ. ಜಿಲ್ಲೆಯ ಜಾತ್ಯಾತೀತ ಪಕ್ಷಗಳ ಹಾಗೂ ಸಮಾನ ಮನಸ್ಕ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ನಗರದ ಕ್ಲಾಕ್ ಟವರ್ ಬಳಿಯಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಯಿತು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ವಿವಿಧ ಪಕ್ಷಗಳ ಹಾಗೂ ಸಂಘಟನೆಗಳ ಕಾರ್ಯಕರ್ತರು, ಬಸ್ ಮಾಲಕರ ದುರ್ವರ್ತನೆ ಹಾಗೂ ಜನವಿರೋಧಿಯಾಗಿ ವರ್ತಿಸುತ್ತಿರುವ ಜಿಲ್ಲಾಡಳಿತದ ಹಾಗೂ ಜನಪ್ರತಿನಿಧಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಆಕ್ರೋಶವನ್ನು ವ್ಯಕ್ತಪಡಿಸಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡುತ್ತಾ, "ಪೆಟ್ರೋಲಿಯಂ ಉತ್ಪನ್ನಗಳ ಹಾಗೂ ಜೀವನಾವಶ್ಯಕ ವಸ್ತುಗಳ ವಿಪರೀತ ಬೆಲೆಯೇರಿಕೆಯಿಂದಾಗಿ ಕಂಗೆಟ್ಟ ಜನಸಾಮಾನ್ಯರ ಬದುಕಿಗೆ ಬಸ್ ಪ್ರಯಾಣ ದರಯೇರಿಕೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೊರೋನಾ ಸಂಕಷ್ಟದ ಕಾಲಘಟ್ಟದಲ್ಲಿ ಉದ್ಯೋಗವಿಲ್ಲದೆ, ಆದಾಯವಿಲ್ಲದೆ ಪರಿತಪಿಸುತ್ತಿರುವ ದುಡಿಯುವ ಜನತೆಗೆ ಈ ಬಾರಿಯ ಪ್ರಯಾಣ ದರವನ್ನು ಅರಗಿಸಿಕೊಳ್ಳಲು ಸಾಧ್ಯವೇ ಇಲ್ಲ. ಇಂತಹ ಸಂದರ್ಭದಲ್ಲಿ ಜನಪರವಾಗಿ ಯೋಚಿಸಬೇಕಾದ ಜಿಲ್ಲಾಡಳಿತ ಬಸ್ ಮಾಲಕರ ಏಜೆಂಟರಂತೆ ವರ್ತಿಸಿರುವುದು ತೀರಾ ಖಂಡನೀಯ" ಎಂದು ಜಿಲ್ಲಾಡಳಿತವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ನಾಯಕರಾದ ಕೃಷ್ಣಪ್ಪ ಸಾಲ್ಯಾನ್, ಮುನೀರ್ ಕಾಟಿಪಳ್ಳ, ಜಯಂತಿ ಶೆಟ್ಟಿ, ದಯಾನಂದ ಶೆಟ್ಟಿ, ಕಾಂಗ್ರೆಸ್ ನಾಯಕರಾದ ಸದಾಶಿವ ಉಳ್ಳಾಲ್, ನೀರಜ್ ಪಾಲ್, ಮಹಮ್ಮದ್ ಕುಂಜತ್ತಬೈಲ್, ಭರತೇಶ್ ಅಮೀನ್, ಹೊನ್ನಯ್ಯ, ಯಶವಂತ ಪ್ರಭು, ಉದಯ ಕುಂದರ್, ರೋಬಿನ್ ಪ್ರೀತಂ, ದುರ್ಗಾ ಪ್ರಸಾದ್, ಸಿಪಿಐ ನಾಯಕರಾದ ವಿ.ಕುಕ್ಯಾನ್ ಬಿ. ಶೇಖರ್, ಕರುಣಾಕರ್, ಜಗತ್ಪಾಲ್, ಪುಷ್ಪರಾಜ್ ಬೋಳೂರು, ಜೆಡಿ(ಎಸ್) ನಾಯಕರಾದ ಅಲ್ತಾಫ್ ತುಂಬೆ, ಹರ್ಷಿತಾ, ಶಾರದಾ, ಚೂಡಾಮಣಿ, ಲತೀಫ್, ರಿಯಾಜ್, ದಲಿತ ಸಂಘಟನೆಗಳ ಮುಖಂಡರಾದ ತಿಮ್ಮಯ್ಯ ಕೊಂಚಾಡಿ, ರಘು ಎಕ್ಕಾರು, ಕೃಷ್ಣ ತಣ್ಣೀರುಬಾವಿ, ವಿಶು ಕುಮಾರ್, ರಘುವೀರ್, ಡಿವೈಎಫ್ಐ ನಾಯಕರಾದ ನೌಷಾದ್ ಬೆಂಗರೆ, ಅನಿಲ್ ಡಿಸೋಜ, ಮಹಿಳಾ ಸಂಘಟನೆಗಳ ಮುಖಂಡರಾದ ರೇಣುಕಾ, ಪದ್ಮಾವತಿ, ಭಾರತಿ ಬೋಳಾರ, ಜಯಲಕ್ಷ್ಮಿ ಜಪ್ಪಿನ ಮೊಗರು, ಸಾಮಾಜಿಕ ಹೋರಾಟಗಾರರಾದ ಜೆರಾಲ್ಡ್ ಟವರ್ ಮುಂತಾದವರು ಉಪಸ್ಥಿತರಿದ್ದರು.

–ಸುನಿಲ್ ಕುಮಾರ್ ಬಜಾಲ್

ಉದ್ಯೋಗದ ಹಕ್ಕಿಗಾಗಿ ಪ್ರತಿಭಟನೆ



ಸರೋಜಿನಿ ಮಹಿಷಿ ವರದಿ ಜ್ಯಾರಿಗೆ ಒತ್ತಾಯಿಸಿ, ಉದ್ಯೋಗದ ಹಕ್ಕಿಗಾಗಿ ಡಿವೈಎಫ್ಐ ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯಾದ್ಯಂತ ಜರಗಿದ ಯುವಜನರ ಪ್ರತಿಭಟನೆಯ ಭಾಗವಾಗಿ ಡಿವೈಎಫ್ಐ ಬೈಂದೂರು ತಾಲೂಕು ಸಮಿತಿ ಪ್ರತಿಭಟನೆ ನಡೆಸಿದೆ.

ದಂತಕಥೆಯಾದ ಬಂಗಾಳದ ವೀರ ಹುತಾತ್ಮ ಖುದಿರಾಮ್ ಬೋಸ್



ಅಂದು ಆಗಸ್ಟ್ 12, 1908. ಅಮೃತ್ ಬಜಾರ್ ಪತ್ರಿಕೆಯು ದೊಡ್ಡ ಅಕ್ಷರಗಳುಳ್ಳ ತಲೆ ಬರಹದ ಸುದ್ದಿಯೊಂದನ್ನು ಪ್ರಮುಖವಾಗಿ ಪ್ರಕಟಿಸಿತ್ತು. "ಖುದಿರಾಮನ ಅಂತ್ಯ: ಆತ ಉಲ್ಲಾಸಭರಿತವಾಗಿ ನಗುನಗುತ್ತಾ ಸಾವನ್ನಪ್ಪಿದನು. ಆತನ ಅಂತ್ಯಸಂಸ್ಕಾರ ಸರಳವಾಗಿತ್ತು." ಪತ್ರಿಕೆಯು ಸಮಾಚಾರವನ್ನು ಮುಂದುವರೆಸುತ್ತಾ "ಖುದಿರಾಮ್‌ರನ್ನು ಅಗಸ್ಟ್ 11 ರ ಬೆಳಿಗ್ಗೆ 6 ಗಂಟೆಗೆ ಗಲ್ಲಿಗೇರಿಸಲಾಯಿತು. ಆತನು ದೃಢಚಿತ್ತದಿಂದ ಉಲ್ಲಾಸಿತನಾಗಿ ಗಲ್ಲುಗಂಬದತ್ತ ನಡೆದನು; ಆತನಿಗೆ ಮುಖ ಮುಚ್ಚುವ ಹೊದಿಕೆಯನ್ನು ತೊಡಿಸುವಾಗ ಅವನು ಮುಗುಳ್ನಗುವುದು ಕಂಡುಬಂತು."

ಬ್ರಿಟಿಷ್ ಆಡಳಿತಕ್ಕೆ ಸೇರಿದ 'ದಿ ಎಂಪಾಯರ್' ಪತ್ರಿಕೆಯು ಇದೇ ಘಟನೆಯನ್ನು ವರದಿ ಮಾಡುತ್ತಾ "ಖುದಿರಾಮ್ ಬೋಸ್‌ರನ್ನು ಬೆಳಿಗ್ಗೆ ನೇಣಿಗೆ ಹಾಕಲಾಯಿತು. ಆತನ ದೇಹ ನೆಟ್ಟಗಿತ್ತು. ಆತ ನಗುನಗುತ್ತಾ ಗಲ್ಲುಗಂಬವನ್ನೇರಿದನು. ಇನ್ನುಳಿದ ಅನೇಕ ಬ್ರಿಟಿಷ್ ಪತ್ರಿಕೆಗಳು ಭಾರತದ ಕ್ರಾಂತಿಕಾರಿಯೊಬ್ಬನ ಸಾವಿಗೆ ಯಾವುದೇ ಮಹತ್ವ ನೀಡಲಿಲ್ಲ.

ಖುದಿರಾಮ್ ಆಗ ಹದಿಹರೆಯದ ಉತ್ಸಾಹಿ ಯುವಕನಾಗಿದ್ದನು. ನ್ಯಾಯಾಧೀಶರೊಬ್ಬರ ಮಾತುಗಳಲ್ಲಿ ಹೇಳುವುದಾದರೆ ಆತ ಭಯಭೀತಿಯಿಲ್ಲದ, ಜಗ್ಗದ, ಬಗ್ಗದ ಯುವಕನಾಗಿದ್ದನು. ಆತನ ಧೈರ್ಯವನ್ನು ಗಮನಿಸಿ ಆಶ್ಚರ್ಯಪಟ್ಟ ಆ ನ್ಯಾಯಾಧೀಶ "ನಿನ್ನ ವಿರುದ್ಧ ನೀಡಲು ಉದ್ದೇಶಿಸಲಾದ ತೀರ್ಪಿನ ಗಂಭೀರತೆ ನಿನಗೆ ಅರ್ಥವಾಗಿದೆಯಾ' ಎಂದು ಪ್ರಶ್ನಿಸುವಂತಾಯಿತು. ಆಗಲೂ ಸಹ ಖುದಿರಾಮ್ ಧೈರ್ಯಗುಂದಲಿಲ್ಲ. ಖುದಿರಾಮ್‌ನನ್ನು ಅಗಸ್ಟ್ 11 ರ ಬೆಳಿಗ್ಗೆ ಮುಜಾಫರ್‌ಪುರ್‌ನಲ್ಲಿ ಗಲ್ಲಿಗೇರಿಸಲಾಯಿತು. ಅದು ಆತನ ತವರು ಜಿಲ್ಲೆ ಮಿದಿನಾಪುರದಿಂದ ತುಂಬಾ ದೂರದಲ್ಲಿತ್ತು. ನೇಣಿಗೇರಿಸುವ ಪ್ರಕ್ರಿಯೆ ಕೆಲವೇ ನಿಮಿಷಗಳಲ್ಲಿ ಮುಗಿದು ಹೋಯಿತು. ನಾಲ್ಕು ಜನ ಪೊಲೀಸರು ಆತನೊಂದಿಗೆ ನೇಣುಕಂಬಕ್ಕೆ ಹೆಜ್ಜೆಹಾಕಿದರು. ಆತ ಪೊಲೀಸರನ್ನೇ ನೇಣುಕಂಬಕ್ಕೆ ಕರೆದೊಯ್ಯುತ್ತಿದ್ದಾನೆ ಎಂಬಂತೆ ದೃಢವಾಡ ಹೆಜ್ಜೆಗಳನ್ನು ಹಾಕುತ್ತಿದ್ದನು. ಅವನು ಪೊಲೀಸರತ್ತ ನೋಡಿ ನಕ್ಕದ್ದನ್ನು ದಾಖಲಿಸಲಾಗಿದೆ. ಜಾನಪದ ಹಾಡುಗಾರನೊಬ್ಬ ಈ ಘಟನೆಯನ್ನು ಅಮರಗೊಳಿಸಿದ್ದು ಹೀಗೆ: "ಹೋಗಿ ಬರುತ್ತೇನೆ ಅವ್ವ, ಬಿಡು ನನ್ನ ನೇಣಿಗೆ ಹೋಗಲು. ಭಾರತೀಯರು ನೋಡುವಂತೆ ನಾನು ಅಪ್ಪಿಕೊಳ್ಳುವೆ ಆ ಗಲ್ಲುಗಂಬವನ್ನು."

ಖುದಿರಾಮ್ ಬೋಸ್ ಗಲ್ಲಿಗೇರಿ ಹುತಾತ್ಮನಾದದ್ದು ಆಕಸ್ಮಿಕವಲ್ಲ. ಅದು ಅಂದಿನ ದಿನಗಳಲ್ಲಿ ಬಂಗಾಳ, ಪಂಜಾಬ್ ಮತ್ತು ಮುಂಬೈ ಮುಂತಾದ ಕಡೆಗಳಲ್ಲಿ ಕ್ರಾಂತಿಕಾರಿಗಳು ನಡೆಸುತ್ತಿದ್ದ ಕ್ರಾಂತಿಕಾರಿ ಚಟುವಟಿಕೆಗಳ ಭಾಗವಾಗಿತ್ತು. ಇಲ್ಲಿ ವಸಾಹತುಶಾಹಿ ವಿರುದ್ಧ ಅತ್ಯಂತ ಶ್ರೀಮಂತವಾದ ಸಶಸ್ತ್ರ ಹೋರಾಟದ ಪರಂಪರೆ ಬೆಳೆದು ಬಂದಿತ್ತು. ಒಂದರ ನಂತರ ಒಂದರಂತೆ ಕ್ರಾಂತಿಕಾರಿ ಹೋರಾಟದ ಅಲೆ ಜನತೆಯನ್ನು ಆಕರ್ಷಿಸತೊಡಗಿತ್ತು. 18 ನೇ ಶತಮಾನದ ಕೊನೆಯಿಂದ 19ನೇ ಶತಮಾನದ ಉದ್ದಕ್ಕೂ ಅನೇಕ ಸ್ವಯಂ ನಿರ್ಧಾರದ ದಂಗೆಗಳು ಬುಗಿಲೆದ್ದವು. ಸನ್ಯಾಸಿಗಳ ಮತ್ತು ಫಕೀರರ ದಂಗೆ, ಮಲಬಾರ್ ಮಾಪಿಳ್ಳೆಯರ ಆಂದೋಲನ, ಆದಿವಾಸಿ ಸಂತಾಲರ ಸಶಸ್ತ್ರ ದಂಗೆ, ವಹಾಬಿಗಳ ಹೋರಾಟ, ನೀಲಿ ಬೆಳೆಗಾರರ ಚಳುವಳಿ, ಪರೈಝಿಯರ ಚಳವಳಿ ಮಹಾರಾಷ್ಟ್ರದ ವಾರ್ಲಿ ಆದಿವಾಸಿಗಳ ಹೋರಾಟ ಮೊದಲಾದ ಸಮರಶೀಲ ಚಳುವಳಿಗಳು ವಸಾಹತುಶಾಹಿ ಆಡಳಿತಕ್ಕೆ ಒಂದು ಬಲವಾದ ಸವಾಲನ್ನು ಎಸೆದವು ಮಾತ್ರವಲ್ಲ ಕ್ರಾಂತಿಕಾರಿಗಳ ದಾರಿಯನ್ನು ಸ್ಪಷ್ಟಗೊಳಿಸಿದವು. ಇದರೊಂದಿಗೆ

ನಿತ್ಯಾನಂದಸ್ವಾಮಿ

ಸ್ವಾತಂತ್ರ್ಯ ಚಳುವಳಿಯಲ್ಲಿ ಸಶಸ್ತ್ರ ರಾಷ್ಟ್ರೀಯತೆಯ ಉದಯವಾಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಒಡೆಯಿತು. ಗೋಖಲೆ, ಸುರೇಂದ್ರನಾಥ ಬ್ಯಾನರ್ಜಿ ಮೊದಲಾದವರನ್ನು ಒಳಗೊಂಡ ಒಂದು ವಿಭಾಗ, ಶಾಂತಿಯಿಂದ ಸ್ವಾತಂತ್ರ್ಯವನ್ನು ಪಡೆಯಲು ಬಯಸಿತು. ತಿಲಕ್, ಅರವಿಂದ್, ಘೋಷ್, ಬಿಪಿನ್ ಪಾಲ್, ಲಜಪತ್ ರಾಯ್ ಮೊದಲಾದವರು ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ರಾಜಿ ಮಾಡಿಕೊಳ್ಳಲು ಸಿದ್ಧರಿರಲಿಲ್ಲ. ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಅವರು ಕರೆ ನೀಡಿದರು. 1907 ರ ಕಾಂಗ್ರೆಸಿನ ಸೂರತ್ ಅಧಿವೇಶನದಲ್ಲಿ ಕಾಂಗ್ರೆಸಿನ ಎರಡು ವಿಭಾಗಗಳ ನಡುವೆ ಬಹಿರಂಗ ಸಂಘರ್ಷವೇ ನಡೆಯಿತು.

ಇದೇ ಸಮಯದಲ್ಲಿ ದೂರಗಾಮಿ ಪರಿಣಾಮ ಬೀರಿದ ಮತ್ತೊಂದು ಘಟನೆಯೂ ನಡೆಯಿತು. ಅದುವೇ ಬಂಗಾಳದ ವಿಭಜನೆ. ಅಂದು ವೈಸರಾಯಿ ಆಗಿದ್ದ ಲಾರ್ಡ್ ಕರ್ಜನ್ ಬಂಗಾಳವನ್ನು ಎರಡು ಭಾಗಗಳಾಗಿ ವಿಭಜಿಸಿದನು. ರಾಷ್ಟ್ರೀಯ ಚಳುವಳಿ ಪ್ರಬಲವಾಗಿ ಬೆಳೆಯುತ್ತಿದ್ದ ಬಂಗಾಳವನ್ನು ದುರ್ಬಲಗೊಳಿಸುವುದು ಬ್ರಿಟಿಷ್ ಆಡಳಿತಗಾರರ ದುರುದ್ದೇಶವಾಗಿತ್ತು. ಪೂರ್ವ ಬಂಗಾಳ ಮತ್ತು ಅಸ್ಸಾಂನ್ನು ಸೇರಿಸಿ ಡಾಕ್ಕಾವನ್ನು ಅದರ ರಾಜಧಾನಿ ಮಾಡಲಾಯಿತು. ಪಶ್ಚಿಮ ಬಂಗಾಳ, ಒರಿಸ್ಸಾ ಮತ್ತು ಬಿಹಾರ್ ಪ್ರದೇಶಗಳನ್ನು ಸೇರಿಸಿ ಕೊಲ್ಕತ್ತಾವನ್ನು ಅದರ ರಾಜಧಾನಿ ಮಾಡಲಾಯಿತು. ಬ್ರಿಟಿಷರ ದುರುದ್ದೇಶವನ್ನು ಮನಗಂಡ ದೇಶಬಾಂಧವರ ಆಕ್ರೋಶ ಸ್ಫೋಟಗೊಂಡಿತು. ಸ್ವದೇಶಿ ಚಳುವಳಿ ತೀವ್ರಗೊಂಡಿತು. ಕ್ರಾಂತಿಕಾರಿಗಳ ಗುಂಪುಗಳು ಹೆಚ್ಚಾದವು. ವಿದೇಶಿ ವಸ್ತುಗಳನ್ನು ಬಹಿರಂಗವಾಗಿ ಬೆಂಕಿಗೆ ಹಾಕಲಾಯಿತು. ಕ್ರಾಂತಿಕಾರಿ ಗುಂಪುಗಳ ಕಾರ್ಯಾಚರಣೆ ವ್ಯಾಪಕಗೊಂಡಿತು. ದೇಶದ ಉದ್ದಗಲಕ್ಕೂ ಸಾವಿರಾರು ಪ್ರತಿಭಟನಾ ಮೆರವಣಿಗೆಗಳನ್ನು ಹಾಗೂ ಪ್ರತಿಭಟನೆಗಳನ್ನು ಸಂಘಟಿಸಲಾಯಿತು. ಬ್ರಿಟಿಷರ ಒಡೆದು ಆಳುವ ನೀತಿಯನ್ನು ವಿರೋಧಿಸಿ ದೇಶ ಪ್ರೇಮಿಗಳು ಅಸಂಖ್ಯಾತ ಸಂಖ್ಯೆಯಲ್ಲಿ ಬೀದಿಗಿಳಿದು ಬಂದರು. ಬಂಗಾಳದಲ್ಲಂತೂ. 'ವಂದೇ ಮಾತರಂ' ಘೋಷಣೆ ಜನರನ್ನು ಬಡಿದೆಬ್ಬಿಸಿತ್ತು.

ನಮ್ಮ ದೇಶವನ್ನು, ದೇಶ ಬಾಂಧವರನ್ನು ಸಾಮ್ರಾಜ್ಯಶಾಹಿ ಬಂಧನದಿಂದ ವಿಮೋಚನೆ ಮಾಡಲು ತಮ್ಮ ಅಮೂಲ್ಯ ಪ್ರಣವನ್ನೇ ಬಲಿದಾನಗೈದ ವೀರ ಹುತಾತ್ಮರಲ್ಲಿ ಬಂಗಾಳದ ಖುದಿರಾಮ್ ಬೋಸ್ ಒಬ್ಬರು. ಆತ ಮೇದಿನಿಪುರ ಪಟ್ಟಣದ ಹತ್ತಿರದ ಹಬೀಬ್‌ಪುರದಲ್ಲಿ ಡಿಸೆಂಬರ್ 3, 1889 ರಲ್ಲಿ ಜನಿಸಿದ್ದರು. ಆತ 6 ವರ್ಷದವರಾಗಿದ್ದಾಗಲೇ ತಮ್ಮ ತಾಯಿ ತಂದೆಯರನ್ನು ಕಳೆದುಕೊಂಡಿದ್ದರು. ತನ್ನ ಅಕ್ಕನ ಮನೆಯಲ್ಲಿ ಇರುತ್ತಿದ್ದ ಆತ ಚಿಕ್ಕಂದಿನಿಂದಲೇ ಧೈರ್ಯಶಾಲಿಯೂ, ದೃಢ ಚಿತ್ತದವನೂ ಆಗಿದ್ದನು. ಗಂಭೀರ ಓದಿನತ್ತ ಆತನಿಗೆ ಹೆಚ್ಚೇನು ಆಸಕ್ತಿ ಇರಲಿಲ್ಲ. ಆದರೆ ಆತ ತನ್ನ ಶಿಕ್ಷಕರಿಗೆ ತುಂಬಾ ನಂಬಿಗಸ್ತನಾಗಿದ್ದ. ಮಿಡ್ನಾಪುರ ಶಾಲೆಗೆ ಸೇರಿದ ಬಳಿಕ ಆತ ಇಬ್ಬರು ಅಧ್ಯಾಪಕರ ವಿಶೇಷ ನಂಬಿಕೆಗೆ ಪಾತ್ರನಾದನು. ಒಬ್ಬರು ಜ್ಞಾನೇಂದ್ರನಾಥ್ ಬೋಸ್ ಮತ್ತು ಇನ್ನೊಬ್ಬರು ಹೇಮಚಂದ್ರ ಕನುಂಗೋ. ಅವರು ಖುದಿಮ್‌ರಾಮ್ ಬೋಸರಲ್ಲಿ ಆಳವಾದ ದೇಶ ಪ್ರೇಮವನ್ನು ಬಿತ್ತಿದ್ದರು. 1902 ರಲ್ಲಿ ಖುದಿಮ್ ರಾಮ್‌ರನ್ನು ಯುಗಾಂತರ್ ಎಂಬ ದೇಶಪ್ರೇಮಿ ಗುಂಪಿಗೆ ಸೇರಿಸಲಾಯಿತು. ಈ ಗುಂಪಿನವರು ಬ್ರಿಟಿಷರನ್ನು ದೇಶದಿಂದ ಬೇರು ಸಹಿತ ಕಿತ್ತೆಸೆಯುವ ಪಣತೊಟ್ಟಿರುವವರಾಗಿದ್ದರು. ಒಮ್ಮೆ ಕಾಂಗ್ಸಬಾಟಿಯಲ್ಲಿ ನೆರೆ ಹಾವಳಿ ಉಂಟಾಗಿ ಕೊಲೆರಾ ಮತ್ತು ಮಲೇರಿಯಾ ಸಾಂಕ್ರಾಮಿಕ ರೋಗಗಳು ಹಬ್ಬಿಕೊಂಡಾಗ ಖುದಿರಾಮ್ ತನ್ನ ಗುಂಪಿನ ಸದಸ್ಯರೊಂದಿಗೆ ಮುಂಚೂಣಿಯಲ್ಲಿದ್ದು ಹಗಲು ರಾತ್ರಿ, ಊಟವಿಲ್ಲದೆ, ವಿಶ್ರಾಂತಿಯಿಲ್ಲದೆ ಬಡವರ, ಬಡರೋಗಿಗಳ ಸೇವೆಯಲ್ಲಿ ತೊಡಗುತ್ತಿದ್ದರು. 1905 ರಲ್ಲಿ ಖುದಿರಾಮ್ ಶಾಲೆಗೆ ಹೋಗುತ್ತಿರುವಾಗಲೇ ಬಂಗಾಳ ವಿಭಜನೆಯ ವಿರುದ್ಧದ ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದರು. 1906 ರಲ್ಲಿ 'ಸೋನಾರ್ ಬಾಂಗ್ಲಾ' ಎಂಬ ಕ್ರಾಂತಿಕಾರಿ ಕರಪತ್ರಗಳನ್ನು ವಿತರಿಸುತ್ತಿದ್ದಾಗ ಪೊಲೀಸರು ಆತನನ್ನು ಸರ್ಕಾರದ ವಿರುದ್ಧದ ದ್ರೋಹದ ಆರೋಪ ಹೊರಿಸಿ ಬಂಧಿಸಿ ನಂತರ ಜೈಲಿನಲ್ಲಿ ಇಟ್ಟಿದ್ದರು. ಜೈಲಿನಲ್ಲಿ ಆತನ ಮೇಲೆ ಹಲ್ಲೆ ಮಾಡಿ ಚಿತ್ರಹಿಂಸೆ ನೀಡಲಾಯಿತು. ನಂತರ ಆತನ ಅಪ್ರಾಪ್ತ ವಯಸ್ಸನ್ನು ಪರಿಗಣಿಸಿ ಆತನನ್ನು ಬಿಡುಗಡೆ ಮಾಡಲಾಯಿತು.

ಆದರೆ, 1907 ರಲ್ಲಿ ಮತ್ತೊಮ್ಮೆ ಖುದಿರಾಮ್ ಮತ್ತು ಆತನ ಕೆಲವು ಸಂಗಾತಿಗಳನ್ನು ವಿಶೇಷ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗವರ್ನರ್ ಆಂಡ್ರೂ ಪ್ರೇಜರ್ ಮೇಲೆ ಬಾಂಬ್ ಎಸೆದ ಆರೋಪದ ಮೇಲೆ ಬಂಧಿಸಲಾಯಿತು. ಇದು ಮುಜಾಫರ್‌ಪುರ್ ಪಿತೂರಿ ಪ್ರಕರಣ ಎಂದು ಕರೆಯಲ್ಪಟ್ಟಿತು. ಗವರ್ನರ್ ಪ್ರೆಜರ್ ಒಬ್ಬ ಅತ್ಯಂತ ಕ್ರೂರ ವ್ಯಕ್ತಿಯಾಗಿದ್ದನು. ಒಮ್ಮೆ ಸುಶಿಲ್ ಸೇನ್ ಎಂಬ ಕೇವಲ 14 ವರ್ಷದ ಅಪ್ರಾಪ್ತ ವಯಸ್ಸಿನ ಹುಡುಗನನ್ನು 'ವಂದೇ ಮಾತರಂ' ಗೀತೆಯನ್ನು ಹಾಡಿದ ಅಪರಾಧಕ್ಕೆ ನ್ಯಾಯಾಲಯದ ಆವರಣದಲ್ಲಿ ಅಮಾನುಷವಾಗಿ ಹಲ್ಲೆ ಮಾಡಿಸಿದ್ದನು. ಸುಶಿಲ್ ಸೇನ್ ಧೈರ್ಯವಾಗಿ ಈ ಹಿಂಸೆಯನ್ನು ಎದುರಿಸಿದ್ದನು. ಗವರ್ನರ್ ಪ್ರೆಜರ್ ಬಾಂಬ್ ದಾಳಿಯಿಂದ ಬದುಕಿ ಉಳಿದನು. ಖುದಿರಾಮ್ ಮತ್ತು ಪ್ರಫುಲ್ಲ 'ಚಾಕಿ ಬ್ರಿಟಿಷ್ ನ್ಯಾಯಾಧೀಶ ಡೊಗ್ಲಾಸ್ ಕಿಂಗ್ಸ್‌ಫರ್ಡ್‌ನನ್ನು ಸಾಯಿಸಲು ಯೋಜನೆ ರೂಪಿಸಿದರು. ಆದರೆ ಆತ ಬೇರೊಂದು ಬಂಡಿಯಲ್ಲಿ ಕುಳಿತ್ತಿದ್ದ ಪ್ರಯುಕ್ತ ದಾಳಿಯಿಂದ ತಪ್ಪಿಸಿಕೊಂಡನು. ಆದರೆ ಅಪ್ಪಿ ತಪ್ಪಿ ಇಬ್ಬರು ಬ್ರಿಟಿಷ್ ಮಹಿಳೆಯರು ಸಾವಿಗೀಡಾದರು. ಖುದಿರಾಮ್ ರವರಿಗೆ ಮರಣದಂಡನೆ ವಿಧಿಸಲಾಯಿತು. ಆಗ ಖುದಿರಾಮ್ ರವರ ವಯಸ್ಸು 18 ವರ್ಷ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬಾಗವಹಿಸಿ ಪ್ರಾಣಾರ್ಪಣೆ ಮಾಡಿದ ಅತಿ ಚಿಕ್ಕ ವಯಸ್ಸಿನ ಹುತಾತ್ಮರಲ್ಲಿ ಒಬ್ಬನು.

ಪೊಲೀಸರು ಖುದಿರಾಮ್ ಮತ್ತು ಪ್ರಫುಲ್ಲರನ್ನು ಅಟ್ಟಿಸಿಕೊಂಡು ಹೋಗುವಾಗ, ಪ್ರಫುಲ್ಲ ತನ್ನ ಸ್ವಂತ ರಿವಾಲ್ವರ್‌ನಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡನು. ಆದರೆ ಖುದಿರಾಮ್ ಓಡಿಹೋಗಲು ಪ್ರಯತ್ನಿಸಲಿಲ್ಲ. ಅವನನ್ನು ಬಂಧಿಸಲಾಯಿತು. ಅಗಸ್ಟ್ 11, 1908 ರಂದು ಆತನನ್ನೂ ನೇಣುಗಂಬಕ್ಕೇರಿಸಲಾಯಿತು. ಖುದಿರಾಮ್ ಮತ್ತು ಅವನಂತಹ ಅಸಂಖ್ಯಾತ ಹುತಾತ್ಮರು ದೇಶಕ್ಕಾಗಿ ತಮ್ಮ ರಕ್ತವನ್ನು ಹರಿಸಿ ಅಮರರಾಗಿದ್ದಾರೆ. ಮುಂದಿನ ಯುವ ಪೀಳಿಗೆಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಅವರು ಚೆಲ್ಲಿದ ರಕ್ತ ಎಂದಿಗೂ ವ್ಯರ್ಥವಾಗದು. ಅವರು ಬಿದ್ದ ಮರಗಳಲ್ಲ. ಬಿತ್ತಿದ ಬೀಜಗಳು. ಅವರಿಗೆ ಶಸ್ತ್ರ ಬಳಸಿ ತಮ್ಮ ಗುರಿ ಮುಟ್ಟಲು ಸಾಧ್ಯವಾಗಿರಲಿಕ್ಕಿಲ್ಲ. ಆದರೆ ಅವರ ತ್ಯಾಗ ಬಲಿದಾನವನ್ನು, ದೇಶಕ್ಕಾಗಿ ಅವರು ನೀಡಿದ ಕೊಡುಗೆಯನ್ನು ಎಂದಿಗೂ ಕಡೆಗಣಿಸಲಾಗದು. ಅವರಿಂದ ಅಪೂರ್ಣವಾದುದನ್ನು ನಾವು ಪೂರ್ಣಗೊಳಿಸಬೇಕಾಗಿದೆ. ರೈತರನ್ನು, ಕಾರ್ಮಿಕರನ್ನು, ವಿದ್ಯಾರ್ಥಿ ಯುವಜನರನ್ನು ಶೋಷಿತರನ್ನು, ದಮನಿತರನ್ನು ಒಂದುಗೂಡಿಸುವ, ಅವರನ್ನು ಸಮರಶೀಲ ಹೋರಾಟಕ್ಕೆ ಸಜ್ಜುಗೊಳಿಸುವ ಕೆಲಸಕ್ಕೆ ದೇಶ ಸಜ್ಜಾಗಲೇಬೇಕು. ಬಂಗಾಳದ ಸಮರಶೀಲ ಜನತೆ, ಅವರ ತ್ಯಾಗ ಬಲಿದಾನ ಮುಂದೆಯೂ ನಮಗೆ ದಾರಿದೀಪವಾಗಲಿದೆ. ದಾರಿದ್ರ್ಯ, ನಿರಕ್ಷರತೆ, ನಿರುದ್ಯೋಗ, ಅಸ್ಪೃಶ್ಯತೆ ಮುಕ್ತವಾದ ದೇಶವನ್ನು ಕಟ್ಟೋಣ.

ಇಂದು ನಮ್ಮನ್ನು ಆಳುವವರು ಬ್ರಿಟಿಷ್ ಆಳ್ವಿಕೆಯನ್ನೇ ನೆನಪಿಸುತ್ತಾರೆ. ಧರ್ಮದ ಹೆಸರಿನಲ್ಲಿ ನಮ್ಮನ್ನು ಒಡೆದು ಆಳುತ್ತಾರೆ. ಆಡಳಿತವನ್ನು ಟೀಕಿಸುವವರನ್ನು, ಪರ್ಯಾಯಕ್ಕಾಗಿ ಧ್ವನಿ ಎತ್ತುತ್ತಿರುವವರನ್ನುದೇಶದ್ರೋಹಿಗಳೆಂದು ಆರೋಪಿಸಿ ಜೈಲಿನಲ್ಲಿ ಬಂಧಿಸಿಡುತ್ತಾರೆ. ಖುದಿರಾಮ್‌ರಂತವರ ತ್ಯಾಗ ಬಲಿದಾನ ವ್ಯರ್ಥವಾಗದಿರಲಿ. ಅವರ ಕನಸು ನನಸಾಗಲಿ. ತಾಯಿ ಕರೆಯುತ್ತಿದ್ದಾಳೆ. ■



ಅತಿಥಿ ಅಂಕಣ



ನಾ ದಿವಾಕರ

ಅಗಸ್ಟ್ 15 ರಂದು ಕೆಂಪು ಕೋಟೆಯಿಂದ ಮೂಡಿಬಂದ 'ಆದರ್ಶಭಾರತ'ದ ಕನಸಿನ ಲೋಕದಲ್ಲಿ ಭಾರತದ ಕೃಷಿ ಭೂಮಿ, ಆಹಾರ ಉತ್ಪನ್ನ, ಖನಿಜ ಸಂಪತ್ತು, ನೈಸರ್ಗಿಕ ಸಂಪನ್ಮೂಲಗಳು, ಜಲಸಂಪತ್ತು, ಅರಣ್ಯ ಸಂಪತ್ತು, ಉತ್ಪಾದನೆಯ ಮೂಲಗಳು, ಸಾರಿಗೆ ವ್ಯವಸ್ಥೆ, ಶ್ರಮಶಕ್ತಿಯ ಮೂಲಗಳು, ಶ್ರಮಿಕರ ಮೂಲ ನೆಲೆಗಳು ಮತ್ತು ಉತ್ಪಾದನೆಯ ಸಾಧನಗಳು, ಇವೆಲ್ಲವೂ ಕಾರ್ಪೋರೇಟ್ ಮಾರುಕಟ್ಟೆ ಅಧಿಪತಿಗಳ ಒಡೆತನಕ್ಕೆ ಒಳಪಟ್ಟಿರುತ್ತವೆ. ಇದು 'ಆತ್ಮನಿರ್ಭರ' ಭಾರತ 'ಆದರ್ಶಭಾರತ'ಕ್ಕಾಗಿ ರೂಪಿಸಿರುವ ನೀಲನಕ್ಷೆ. ಭಾರತದ ಪ್ರಭುತ್ವ ಈ ಹಾದಿಗೆ ಅಡ್ಡಿಯಾಗುವ ದನಿಗಳನ್ನು ದಮನಿಸಲು ಕರಾಳ ಶಾಸನಗಳ ಮೊರೆ ಹೋಗುತ್ತದೆ. ಈ ದೇಶದ ಮತೀಯವಾದಿ ಸಾಂಸ್ಕೃತಿಕ ಫ್ಯಾಸಿಸ್ಟ್ ರಾಜಕಾರಣ ಜಾತಿ ಪ್ರಣೀತ ಸಮಾಜವನ್ನು ಆಶ್ರಯಯಿಸುತ್ತದೆ. ಭಾರತದ ಶ್ರಮಿಕವರ್ಗ ಈ ತೂಗುಗತ್ತಿಯ ಅಡಿಯಲ್ಲೇ ತನ್ನ ಅಸ್ತಿತ್ವ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳಬೇಕಿದೆ. ಜಾತಿ, ಧರ್ಮ ಮತ್ತು ಭಾಷಿಕ ಸಂಕೋಲೆಗಳನ್ನು ತೊರೆದು ಒಂದು ಮಾನವೀಯ ಸಮಾಜವನ್ನು ರೂಪಿಸುವ ನಿಟ್ಟಿನಲ್ಲಿ ಭಾರತದ ಶ್ರಮಜೀವಿಗಳು ರೈತಾಪಿಯೊಂದಿಗೆ ಕೈಜೋಡಿಸಿ ಸಮ ಸಮಾಜದ ನಿರ್ಮಾಣದತ್ತ ಮುನ್ನಡೆಯಬೇಕಿದೆ. ಈ ಶ್ರಮಿಕ ವರ್ಗ ಹೊತ್ತ ಸೈಜುಗಲ್ಲುಗಳನ್ನೇ ಕಾರ್ಪೋರೇಟ್ ಮಾರುಕಟ್ಟೆಯ ಸಂತೆಮಾಳಗಳಲ್ಲಿ ಹಾಸುಗಲ್ಲುಗಳಂತೆ ಬಳಸಿ ನವ ಉದಾರವಾದದ ನೂತನ ಭಾರತವನ್ನು ನಿರ್ಮಿಸಲು ಭಾರತದ ಆಳುವ ವರ್ಗಗಳು ಸಜ್ಜಾಗುತ್ತಿವೆ.

ಅಮೃತ ಮಹೋತ್ಸವಕ್ಕೆ ಸಜ್ಜಾಗುವ ಮುನ್ನ... ಶ್ರಮದ ಸೈಜುಗಲ್ಲುಗಳೂ ಶೋಷಣೆಯ ಹಾಸುಗಲ್ಲುಗಳೂ

ನಾವು ಸ್ವತಂತ್ರರಾಗಿದ್ದೇವೆ ಎಂಬ ಘೋಷಣೆಯೊಡನೆ 1947ರ ಆಗಸ್ಟ್ 14ರ ನಡುರಾತ್ರಿ ವಿಧಿಯೊಡನೆ ಸಂಧಾನದ ನಡೆಸಿದ ಭಾರತ 75 ವರ್ಷಗಳ ನಂತರ ಮತ್ತೊಮ್ಮೆ ನವ ಉದಾರವಾದದ ದುರ್ವಿಧಿಯೊಡನೆ ಅನುಸಂಧಾನ ನಡೆಸಲು ಸಜ್ಜಾಗಬೇಕಿದೆ. ಶಸ್ತ್ರ ರಕ್ಷಿತ ಕೆಂಪುಕೋಟೆಯಿಂದ ಹೊರಬರುವ ಪ್ರಜಾಸತ್ತೆಯ ಭರವಸೆಗಳ ನುಡಿಗಳಲ್ಲಿ ಕಾಣುವ ಅಕ್ಷರಗಳ ರುದ್ರತಾಂಡವದಲ್ಲಿ ಸಾವಿರಾರು ನೋವಿನ ದನಿಗಳು ಸಮಾಧಿಯಾಗಿರುವುದನ್ನು ಗಮನಿಸುತ್ತಲೇ, ಆತ್ಮರತಿಯ ಕಾವ್ಯರೂಪಕಗಳಲ್ಲಿ ಅಡಗಿರುವ ಕಟು ವಾಸ್ತವಗಳನ್ನು ಕಾಣದೆ ಹೋದರೆ ಬಹುಶಃ ಭಾರತದ ಪ್ರಜೆಗಳಾದ ನಾವು ನವ ವಸಾಹತುಶಾಹಿಯ ಸಂತೆಮಾಳದಲ್ಲಿ ಬಿಕರಿಯಾಗುವ ಸರಕುಗಳಾಗಿಬಿಡುತ್ತೇವೆ. ಸಮಾಧಿಗಳನ್ನು ಮೆಟ್ಟಿ ನಿಂತು ಭೂಗತರಾದವರ ತ್ಯಾಗ ಬಲಿದಾನಗಳನ್ನು ಕೊಂಡಾಡುವ ಅದ್ಭುತ ಕಲೆಯನ್ನು ಕರಗತ ಮಾಡಿಕೊಂಡಿರುವ ಒಂದು ಬಂಡವಾಳಶಾಹಿ ಫ್ಯಾಸಿಸ್ಟ್ ಆಡಳಿತ ವ್ಯವಸ್ಥೆಯಲ್ಲಿಯೇ, ಈ ದೇಶದ ಶ್ರಮಜೀವಿಗಳು ತಮ್ಮ ತೊಗಲ ಮೇಲಿನ ಬೆವರ ಹನಿಗಳಲ್ಲಿ ಭವಿಷ್ಯವನ್ನು ಕಾಣಬೇಕಿದೆ.

74 ವರ್ಷಗಳ ಅಪಾರ ಪರಿಶ್ರಮದಿಂದ ನವ ಭಾರತವನ್ನು ನಿರ್ಮಿಸಿದ/ನಿರ್ಮಿಸುತ್ತಿರುವ ಕೋಟ್ಯಂತರ ಶಿಲ್ಪಿಗಳನ್ನು ನೆನೆಯುವ ಮೂಲಕವೇ ನಾವು 75ನೆಯ ವರ್ಷಕ್ಕೆ ಕಾಲಿರಿಸಬೇಕಿದೆ. ಕೆಂಪುಕೋಟೆಯ ಭಾಷಣಕಾರರಿಗೆ ಈ ಶಿಲ್ಪಿಗಳ ಗತ ಬದುಕು ಸ್ಮರಣಾರ್ಹ ಎನಿಸುತ್ತದೆ, ವರ್ತಮಾನದ ಬದುಕು ನಿಕೃಷ್ಟ ಎನಿಸುತ್ತದೆ, ಭವಿಷ್ಯ ಅನಪೇಕ್ಷಿತವಾಗಿಬಿಡುತ್ತದೆ. ಭರವಸೆಗಳ ಮಾಯಾಲೋಕದಲ್ಲೇ ವಿಹರಿಸುತ್ತಾ ಭಾರತದ ರಾಷ್ಟ್ರ ಶಿಲ್ಪಿಗಳು 74 ವರ್ಷ ಕಳೆದದ್ದಾಗಿದೆ. ಇಂದು ತಾವೇ ನಿಂತ ನೆಲ ಕುಸಿಯುತ್ತಿದ್ದರೂ, ತಮ್ಮದೇ ಸಮಾಧಿಗಾಗಿ ಕಂದಕಗಳನ್ನು ತೋಡಲಾಗುತ್ತಿದ್ದರೂ, ಅಮೃತ ಶಿಲೆಯ ಗೋಡೆಗಳನ್ನು ನೋಡುತ್ತಾ ಆನಂದಿಸುತ್ತಿದ್ದೇವೆ. ದುಡಿಮೆಯ ಕೈಗಳಿಗೆ ಸ್ವಾತಂತ್ರ್ಯ ಎಂದರೆ ದುಡಿಮೆಯಿಂದ ವಿರಮಿಸುವುದಲ್ಲ, ತಮ್ಮ ಶ್ರಮ ಶಕ್ತಿಯ ಫಲವನ್ನು ಪೂರ್ಣವಾಗಿ ತಾವೇ ಬಳಸಿಕೊಳ್ಳುವುದು. ಇದು ಸಾಧ್ಯವಾಗದ ಹೊರತು ಯಾವುದೇ ದೇಶದ ದುಡಿಮೆಗಾರರಿಗೆ ಸ್ವಾತಂತ್ರ್ಯ ಎನ್ನುವುದು ಒಂದು ಮರೀಚಿಕೆಯಾಗಿಯೇ ಉಳಿದಿರುತ್ತದೆ.

ಏಕೆಂದರೆ ಬದುಕುವ ಸ್ವಾತಂತ್ರ್ಯದೊಡನೆ ಶೋಷಣೆಯಿಂದ ವಿಮೋಚನೆಯೂ ಶ್ರಮಿಕರ ಆದ್ಯತೆಯಾಗಿರುತ್ತದೆ. ಭಾರತದ ಶ್ರಮಿಕ ವರ್ಗಗಳು ಈ ವಿಮೋಚನೆಯನ್ನು ಸಾಧಿಸಲು ಸಾಧ್ಯವಾಗಿದೆಯೇ ಎಂದು ಹಿಂದಿರುಗಿ ನೋಡಿದಾಗ, ಬಂಡವಾಳ ವ್ಯವಸ್ಥೆಯ ಸಂಕೋಲೆಗಳಿಂದ ಬಿಡುಗಡೆ ದೊರೆತ ಕೆಲವೇ ಸಂದರ್ಭಗಳು ಮಾತ್ರ ಕಾಣಸಿಗುತ್ತವೆ. ವಿಮೋಚನೆಯ ಹಾದಿ ಇನ್ನೂ ದೂರವೇ ಉಳಿದಿದೆ. ಇಂದಿನ ತಮ್ಮ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ 100ನೆಯ ಸ್ವಾತಂತ್ರ್ಯೋತ್ಸವದ ವೇಳೆಗೆ 'ಆದರ್ಶಭಾರತ'ದ ನಿರ್ಮಾಣವಾಗುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ಅವರ ಈ ಆಶೋತ್ತರದ ನುಡಿಗಳು ಸನಿಹದಲ್ಲೇ ನೆರೆದಿದ್ದ ಲಕ್ಷಾಂತರ ರೈತರ ಕಿವಿಗೆ ಅಪ್ಪಳಿಸಿರಬಹುದು. ಆದರ್ಶ ಎನ್ನುವ ಪರಿಕಲ್ಪನೆಯೇ ಸಾಪೇಕ್ಷವಾದುದರಿಂದ ಮತ್ತೊಂದು ಭ್ರಮಾಲೋಕಕ್ಕೆ ಜಾರುವ ಮುನ್ನ ಭಾರತದ ಶ್ರಮಜೀವಿಗಳು ವಾಸ್ತವ ಪ್ರಪಂಚದತ್ತ



ಹೊರಳುವುದು ಉಚಿತ ಎನಿಸುತ್ತದೆ.

ಭಾರತ ಇಂದು ಜಾಗತಿಕ ಮಾರುಕಟ್ಟೆಯಲ್ಲಿ ತನ್ನದೇ ಆದ ಶಕ್ತಿಯೊಂದಿಗೆ ಸ್ಪರ್ಧಾತ್ಮಕವಾಗಿ ಮುನ್ನಡೆಯುವ ಸಾಮರ್ಥ್ಯ ಗಳಿಸಿದ್ದರೆ ಅದು ಈ ದೇಶದ ಶ್ರಮಜೀವಿಗಳ ಪರಿಶ್ರಮದ ಫಲ ಅಲ್ಲವೇ? ಪ್ರಭುತ್ವಬಂಡವಾಳಶಾಹಿ ವ್ಯವಸ್ಥೆಯನ್ನೇ ಪೋಷಿಸಿಕೊಂಡು, ಅರೆ ಸಮಾಜವಾದಿ ಆರ್ಥಿಕ ನೀತಿಗಳನ್ನು ಅನುಸರಿಸುತ್ತಾ ಬಂದ ನೆಹರೂ ಆರ್ಥಿಕತೆ ಈ ದೇಶದ ಶ್ರಮಜೀವಿಗಳ ಪಾಲಿಗೆ ಒಂದು ಸುಭದ್ರ ಬುನಾದಿಯನ್ನು ನಿರ್ಮಿಸಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಸಾರಿಗೆ, ಸಂಪರ್ಕ, ಕೈಗಾರಿಕಾ ಉತ್ಪಾದನೆ, ಆಹಾರ ಉತ್ಪಾದನೆ ಮತ್ತು ಗಣಿಗಾರಿಕೆಯಲ್ಲಿ ಭಾರತ ಒಂದು ಸ್ವಾವಲಂಬಿ ರಾಷ್ಟ್ರವಾಗಿ ರೂಪುಗೊಂಡಿರುವುದು ಶ್ರಮಜೀವಿಗಳ ಬೆವರಿನ ಫಲವೇ ಹೊರತು, ಹವಾನಿಯಂತ್ರಿತ ಕೋಣೆಗಳಲ್ಲಿ ರೂಪಿಸಿದ ನೀಲನಕ್ಷೆಗಳ ಫಲ ಅಲ್ಲ.

ಕೇವಲ ಐವತ್ತು ವರ್ಷದ ಹಿಂದೆ ಆಹಾರದ ಕೊರತೆಯಿಂದ ಸಾಮ್ರಾಜ್ಯಶಾಹಿಗಳ ಮುಂದೆ ಮಂಡಿಯೂರುವ ಪರಿಸ್ಥಿತಿಯಲ್ಲಿದ್ದ ಭಾರತ ಇಂದು ಆಹಾರ ಉತ್ಪಾದನೆಯಲ್ಲಿ ಮುಂಚೂಣಿ ರಾಷ್ಟ್ರವಾಗಿದೆ. ಹಸಿರು ಕ್ರಾಂತಿಯ ವ್ಯತ್ಯಯಗಳು, ವಿರೋಧಾಭಾಸಗಳು ಏನೇ ಇದ್ದರೂ ಅದು ಈ ದೇಶದ ಆಹಾರ ಸ್ವಾವಲಂಬನೆಯನ್ನು ಸಾಧಿಸುವ ನಿಟ್ಟಿನಲ್ಲಿ ಒಂದು ಮಹತ್ತರ ಹೆಜ್ಜೆ ಎನಿಸಿದರೆ, ಅದರ ಹಿಂದೆ ಕೋಟ್ಯಂತರ ರೈತರ, ಕೃಷಿ ಕಾರ್ಮಿಕರ, ಗ್ರಾಮೀಣ ಬಡ ಜನತೆಯ ಪರಿಶ್ರಮವಿದೆ. ಭೂಮಿ ತನ್ನದಲ್ಲದಿದ್ದರೂ ಈ ದೇಶ ನನ್ನದು ಎಂಬ ಉದಾತ್ತ ಭಾವನೆಯಿಂದ ಹಗಲಿರುಳೂ ಉಳುಮೆಯಲ್ಲಿ ತೊಡಗುವ ಮೂಲಕ 133 ಕೋಟಿ ಜನತೆಗೆ ಅನ್ನ ನೀಡುತ್ತಿರುವ ಅನ್ನದಾತರ ಪರಿಶ್ರಮವೇ ಇಂದಿನ 'ಆತ್ಮನಿರ್ಭರ' ಭಾರತದ ನಿರ್ಮಾಣಕ್ಕೂ ಕಾರಣವಾಗಿದೆ.

ಆದರೆ ಈ ರೈತ ಸಮುದಾಯದ ನಿತ್ಯ ಜೀವನ ಭಾರತದ ಆಳುವ ವರ್ಗಗಳಿಗೆ ನಿಕೃಷ್ಟವಾಗಿಯೇ ಕಾಣುತ್ತಿರುವುದು ಸ್ವತಂತ್ರ ಭಾರತದ ಬಹುದೊಡ್ಡ ದುರಂತ. ಇಂದಿಗೂ ದೇಶದ ಶೇ.65ಕ್ಕೂ ಹೆಚ್ಚು ಪ್ರಜೆಗಳಿಗೆ ಜೀವನಾಧಾರವಾಗಿರುವ ಕೃಷಿ ಇಂದು ಮಾರುಕಟ್ಟೆಯ ಪಾಲಾಗುತ್ತಿದೆ. ಸ್ವಾತಂತ್ರ್ಯ ಬಂದ ದಿನದಿಂದಲೂ ಭಾರತದ ಕೃಷಿಕ ಸಮುದಾಯ ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತಲೇ ಬಂದಿದೆ. ಹಸಿರು ಕ್ರಾಂತಿಯ ಫಲಾನುಭವಿಗಳನ್ನು ಹೊರತುಪಡಿಸಿದರೆ ದೇಶದ ಬಹುಸಂಖ್ಯೆಯ ರೈತರು ಭೂಮಿಯನ್ನೇ ನಂಬಿ ಬದುಕುತ್ತಿರುವುದು ವಾಸ್ತವ. ಬೃಹತ್ ಅಣೆಕಟ್ಟುಗಳು, ನೀರಾವರಿ ಯೋಜನೆಗಳು ಮತ್ತು ಕೇಂದ್ರೀಕೃತ ಮಾರುಕಟ್ಟೆಯ ಹೊರತಾಗಿಯೂ ರೈತರು ತಾವು ಬೆಳೆದ ಫಸಲಿಗೆ ಸೂಕ್ತ ಬೆಲೆ ದೊರೆಯದೆ ಆತ್ಮಹತ್ಯೆಗೆ ಶರಣಾಗುತ್ತಿರುವುದು ಕಳೆದ ಮೂರು ದಶಕಗಳಲ್ಲಿ ಭಾರತ ಕಂಡಂತಹ ದುರಂತ ಸತ್ಯ.

ಆದರೆ ನವ ಉದಾರವಾದ ಮತ್ತು ಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿ ತಮ್ಮ ಸಾಮಾಜಿಕ ಮತ್ತು ನೈತಿಕ ಹೊಣೆಗಾರಿಕೆಯನ್ನೂ ಮರೆತಿರುವ ಭಾರತದ ಆಳುವ ವರ್ಗಗಳಿಗೆ ಆತ್ಮಹತ್ಯೆಗೆ ಶರಣಾದ ಲಕ್ಷಾಂತರ ರೈತರ ಬದುಕು ಇಂದಿಗೂ ನಿಕೃಷ್ಟವಾಗಿಯೇ ಕಾಣುತ್ತಿದೆ. ಇದರ ನೇರ ಪ್ರಾತ್ಯಕ್ಷಿಕೆಯನ್ನು ರಾಜಧಾನಿಯ ಸುತ್ತಲೂ ನಡೆಯುತ್ತಿರುವ ಲಕ್ಷಾಂತರ ರೈತರ ಮುಷ್ಕರದಲ್ಲಿ ಕಾಣಬಹುದಾಗಿದೆ. ಅನ್ನ ಬೆಳೆಯುವ ಈ ಶ್ರಮಜೀವಿಗಳಲ್ಲಿ ದೇಶದ್ರೋಹಿಗಳನ್ನು ಕಾಣುವ ಮಟ್ಟಿಗೆ ಭಾರತೀಯ ಪ್ರಭುತ್ವದ ದೃಷ್ಟಿ ಭ್ರಷ್ಟವಾಗಿದೆ. ಲಕ್ಷಾಂತರ ರೈತರ ಒಂಬತ್ತು ತಿಂಗಳುಗಳ ಹಕ್ಕೊತ್ತಾಯದ ಮುಷ್ಕರದತ್ತ ಕಣ್ಣೆತ್ತಿಯೂ ನೋಡದಂತಹ ಒಂದು ನಿರ್ದಯಿ ಪ್ರಭುತ್ವ ಏಳು ದಶಕಗಳ ಕೃಷಿ ನೀತಿಯನ್ನೇ ಬುಡಮೇಲು ಮಾಡಿ ಆಹಾರ ಉತ್ಪಾದನೆ, ಸಂಗ್ರಹ, ವಿತರಣೆ ಮತ್ತು ವ್ಯಾಪಾರವನ್ನು ಸಂಪೂರ್ಣವಾಗಿ ಕಾರ್ಪೋರೇಟ್ ಉದ್ಯಮಿಗಳಿಗೆ ವಹಿಸಲು ಸಜ್ಜಾಗುತ್ತಿದೆ.

ಇನ್ನು 25 ವರ್ಷಗಳಲ್ಲಿ 'ಆದರ್ಶ ರಾಷ್ಟ್ರ'ವಾಗಲು ಹೊರಟಿರುವ ಇಂದಿನ 'ಆತ್ಮನಿರ್ಭರ ಭಾರತ'ದ ಕೃಷಿ ಭೂಮಿ ಮಾರುಕಟ್ಟೆಯ ಸರಕಿನಂತೆ ಬಿಕರಿಯಾಗಲಿದೆ. ಐದು ದಶಕಗಳ ಪರಿಶ್ರಮದಿಂದ ಭಾರತ ಸಾಧಿಸಿದ ಆಹಾರ ಸ್ವಾವಲಂಬನೆ ಮಾರುಕಟ್ಟೆ ಜಾಗತಿಕ ಬಂಡವಾಳ ಮಾರುಕಟ್ಟೆಯಲ್ಲಿ ಲೀನವಾಗಲಿದೆ. ಭಾರತದ ರೈತ ಭೂಮಿಯ ಮೇಲಿನ ತನ್ನ ಹಕ್ಕನ್ನು ಕಳೆದುಕೊಳ್ಳುತ್ತಾನೆ. ತಾನು ಬೆಳೆಯುವ ಆಹಾರ ಧಾನ್ಯಗಳ ಮೇಲಿನ ಒಡೆತನವನ್ನು ಕಳೆದುಕೊಳ್ಳಲಿದ್ದಾನೆ. ತನ್ನ ಫಸಲನ್ನು ಸಂಗ್ರಹಿಸಿಟ್ಟು, ತನ್ನ ಕುಟುಂಬದ ಅವಶ್ಯಕತೆಗಳಿಗೆ ತಕ್ಕಂತೆ ಬಳಸಿಕೊಳ್ಳುವ ಹಕ್ಕುಗಳನ್ನೂ ಕಳೆದುಕೊಳ್ಳುತ್ತಾನೆ. ಇದು ನೂತನ ಕೃಷಿ ಕಾಯ್ದೆಯ ಸ್ಥೂಲ ಸ್ವರೂಪ. ಈ ಕರಾಳ ಕಾಯ್ದೆಯ ವಿರುದ್ಧ ದೇಶದ ರೈತರು ಒಂಬತ್ತು ತಿಂಗಳ ದೀರ್ಘಾವಧಿ ಮುಷ್ಕರದಲ್ಲಿ ತೊಡಗಿದ್ದಾರೆ.

ಆದರೆ 'ಆದರ್ಶಭಾರತ'ದ ಹರಿಕಾರರಿಗೆ ಈ ಅನ್ನದಾತರ ಕೂಗು ಕೇಳುತ್ತಿಲ್ಲ. ಈಗಾಗಲೇ ಭಾರತದ ರೈತ ತನ್ನ ಪಾರಂಪರಿಕ ವೃತ್ತಿಯಿಂದ ಹೊರದೂಡಲ್ಪಟ್ಟು ನಗರಗಳತ್ತ ವಲಸೆ ಹೋಗಲಾರಂಭಿಸಿದ್ದಾನೆ. ಕಳೆದ 25 ವರ್ಷಗಳಲ್ಲಿ ಗ್ರಾಮೀಣ ಭಾರತದ ಮಣ್ಣಿನ ಮಕ್ಕಳು ನಗರಗಳ ಸ್ಲಂ ನಿವಾಸಿಗಳಾಗಿ, ವಲಸೆ ಕಾರ್ಮಿಕರಂತೆ ಬದುಕು ಸವೆಸುತ್ತಿರುವ ದುರಂತ ವಾಸ್ತವವನ್ನು ಕೊರೋನಾ ನಮ್ಮ ಮುಂದೆ ತೆರೆದಿಟ್ಟಿದೆ. ನಗರೀಕರಣ ಮತ್ತು ಆಧುನಿಕ ಅಭಿವೃದ್ಧಿ ಪಥದ ವಾರಸುದಾರರು ಇಂದು ಕೃಷಿ ಮುಕ್ತ ಭೂಮಾಲೀಕರಾಗಿ ಶ್ರೀಮಂತರಾಗುತ್ತಿರುವುದನ್ನು ರಿಯಲ್ ಎಸ್ಟೇಟ್ ಮಾಫಿಯಾಗಳ ಮೂಲಕ, ಚುನಾವಣಾ ರಾಜಕಾರಣದ ಮೂಲಕ ನೋಡುತ್ತಲೇ ಇದ್ದೇವೆ. ಇದು ಮುಂದಿನ ದಿನಗಳ ಕರಾಳ ದಿಕ್ಸೂಚಿಯೂ ಆಗಿರುವುದನ್ನು ನಿರ್ಲಕ್ಷಿಸಲಾಗುವುದಿಲ್ಲ.

ನವ ಉದಾರವಾದದ ಆರ್ಥಿಕ ಪಥದಲ್ಲಿ ಎಲ್ಲವೂ ಮಾರುಕಟ್ಟೆ ಸರಕುಗಳಾಗುತ್ತವೆ. ಭೂಮಿ, ಅರಣ್ಯ, ನೀರು ಮತ್ತು ಗಾಳಿ ಎಲ್ಲವೂ ಬಿಕರಿಯಾಗುವ ಪದಾರ್ಥಗಳಂತಾಗುತ್ತದೆ. ಈಗಾಗಲೇ ಗಣಿ ಉದ್ಯಮವನ್ನು ಸಂಪೂರ್ಣವಾಗಿ ಕಾರ್ಪೋರೇಟ್ ಉದ್ಯಮಿಗಳಿಗೆ ಒಪ್ಪಿಸಿ ಈಶಾನ್ಯ ಮತ್ತು ಪೂರ್ವ ಭಾರತದ ಲಕ್ಷಾಂತರ ಆದಿವಾಸಿಗಳನ್ನು ಮೂಲ ನೆಲೆಯಿಂದ ಒಕ್ಕಲೆಬ್ಬಿಸಲಾಗಿದೆ. ತಮ್ಮ ನೆಲೆಯನ್ನೂ ಕಳೆದುಕೊಂಡು ನಿರ್ಗತಿಕರಾಗಿರುವ ಆದಿವಾಸಿಗಳು ಈ ಒಕ್ಕಲೆಬ್ಬಿಸುವಿಕೆಯ ವಿರುದ್ಧ ದನಿ ಎತ್ತಿದರೆ ಪ್ರಭುತ್ವದ ದೃಷ್ಟಿಯಲ್ಲಿ ನಕ್ಸಲರಾಗುತ್ತಾರೆ, ಇವರ ಹಕ್ಕೊತ್ತಾಯಗಳಿಗೆ ಬೆಂಗಾವಲಾಗಿ ನಿಂತ ಕಾರ್ಯಕರ್ತರು ಅರ್ಬನ್ ನಕ್ಸಲರಾಗುತ್ತಾರೆ. ಗಣಿ ಮಾಫಿಯಾ, ಭೂ ಮಾಫಿಯಾ ಮತ್ತು ಚುನಾವಣಾ ರಾಜಕಾರಣದ ವಾರಸುದಾರರು ಇಂದು ಕೃಷಿ ಭೂಮಿಯನ್ನು ಕಬಳಿಸುವ ಬಕಾಸುರರಂತೆ ಕಾಣುತ್ತಿದ್ದಾರೆ. ದೆಹಲಿಯ ರೈತ ಮುಷ್ಕರ ಈ ಅಪಾಯದ ವಿರುದ್ಧ ಮೂಡಿರುವ ಜನದನಿಯಾಗಿರುವುದನ್ನು ಗಮನಿಸಬೇಕಿದೆ.

ಈ ಒಕ್ಕಲೆಬ್ಬಿಸುವಿಕೆಯಿಂದ ನಗರ ಮತ್ತು ಪಟ್ಟಣಗಳಲ್ಲಿ ಅಸಂಘಟಿತ ಕಾರ್ಮಿಕರ ಸಂಖ್ಯೆಯೂ ದಿನೇ ದಿನೇ ಹೆಚ್ಚಾಗುತ್ತಿದ್ದು ಸುಭದ್ರ ಜೀವನದ ಚಿಂತೆಯೇ ಇಲ್ಲದೆ ನಿತ್ಯ ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಲಕ್ಷಾಂತರ ಶ್ರಮಜೀವಿಗಳು ನಗರದ ಸ್ಲಂಗಳಲ್ಲಿ, ಹೊರವಲಯಗಳಲ್ಲಿ ತಮ್ಮ ನಾಳೆಗಳನ್ನು ಎಣಿಸುತ್ತಿದ್ದಾರೆ. ಈ ಬೃಹತ್ ಸೇನೆಗೆ ಇನ್ನು ಕೆಲವೇ ವರ್ಷಗಳಲ್ಲಿ ಕೈಗಾರಿಕೆ ಮತ್ತು ಔದ್ಯೋಗಿಕ ಕ್ಷೇತ್ರದಿಂದ ಹೊರದೂಡಲ್ಪಡುವ ಬೃಹತ್ ಶ್ರಮಜೀವಿ ವರ್ಗವೂ ಸೇರ್ಪಡೆಯಾಗಲಿದೆ. ಏಳು ದಶಕಗಳ ಕಾಲ ಭಾರತದ ಶ್ರಮಿಕ ವಗ ಕಟ್ಟಿ ಬೆಳೆಸಿದ ಭವ್ಯ ಸೌಧಗಳನ್ನು ಒಂದೊಂದಾಗಿ ಕೆಡವಲು ಕೇಂದ್ರ ಸರ್ಕಾರ ಸಜ್ಜಾಗುತ್ತಿದೆ. ಲಕ್ಷಾಂತರ ಶ್ರಮಿಕರಿಗೆ ಬದುಕು ರೂಪಿಸುವ ಬೃಹತ್ ಔದ್ಯೋಗಿಕ ವಲಯ ರೈಲ್ವೆ, ರಸ್ತೆ ಸಾರಿಗೆ ಮತ್ತು ಜಲಸಾರಿಗೆ ಕಾರ್ಪೋರೇಟ್ ಸಾಮ್ರಾಜ್ಯದ ಪಾಲಾಗಲು ಸಿದ್ಧತೆಗಳು ನಡೆದಿವೆ. ಹಣಕಾಸು ಬಂಡವಾಳದ ಆಧಿಪತ್ಯಕ್ಕೆ ಸಾರಿಗೆ ಮತ್ತು ಸಂಪರ್ಕ ವಲಯಗಳು ಪ್ರಮುಖ ಸಾಧನಗಳಾಗಿದ್ದು,

ಪುಟ 15 ಕ್ಕೆ

ಆಫ್ಘಾನಿಸ್ತಾನದಲ್ಲಿ ಅಮೆರಿಕಾದ ಪರಾಭವ ಭಾರತವೂ ಪಾಟ ಕಲಿಯಬೇಕಾಗಿದೆ



ಆಫ್ಘಾನಿಸ್ತಾನದಲ್ಲಿ ಅಮೆರಿಕದ ಪರಾಭವದಲ್ಲಿ ಭಾರತಕ್ಕೂ ಪಾಠಗಳಿವೆ. ಅಮೆರಿಕದೊಂದಿಗಿನ ಬಾಂಧವ್ಯಕ್ಕೆ ಆದ್ಯತೆ ನೀಡುವ ಭಾರತದ ನೀತಿಯಿಂದಾಗಿ ಈ ವಲಯದಲ್ಲಿ ಭಾರತ ಒಬ್ಬಂಟಿಯಾಗಿ ಬಿಟ್ಟಿದೆ. ಮೋದಿ ಸರ್ಕಾರ ತನ್ನ ವಿದೇಶಾಂಗ ನೀತಿ ಮತ್ತು ವ್ಯೂಹಾತ್ಮಕ ಧೋರಣೆಯನ್ನು ಸರಿಪಡಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಅದು ಹೆಚ್ಚು ವೈರತ್ವದ ಪ್ರಾದೇಶಿಕ ಸನ್ನಿವೇಶದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ಬೆಳವಣಿಗೆಗಳಿಂದಾಗಿ ದಕ್ಷಿಣ ಏಷ್ಯಾದಲ್ಲಿ ಇಸ್ಲಾಮೀ ಉಗ್ರಗಾಮಿತ್ವ ಬೆಳೆಯುವ ಅಪಾಯ ಎದುರಾಗಿದ್ದು, ಬಿಜೆಪಿ ಸರ್ಕಾರದ ಹಿಂದುತ್ವ ನೀತಿಗಳಿಂದಾಗಿ ನಮ್ಮ ದೇಶವೂ ಈ ಪ್ರಭಾವಗಳಿಗೆ ಒಳಗಾಗಿ ಸಂಕಷ್ಟಕ್ಕೆ ಗುರಿಯಾಗುವ ಸಾಧ್ಯತೆಯಿದೆ.



*** ಪ್ರಕಾಶ್ ಕಾರಟ್**

ಆಫ್ಘಾನಿಸ್ತಾನದಿಂದ ಅಮೆರಿಕದ ಅವಮಾನಕರ ನಿರ್ಗಮನ, ಆಫ್ಘನ್ ರಾಷ್ಟ್ರೀಯ ಸೇನೆಯ ಪತನ, ಅಧ್ಯಕ್ಷ ಅಶ್ರಫ್ ಘನಿ ಪಲಾಯನ ಮತ್ತು ತಾಲಿಬಾನ್‌ನಿಂದ ಕ್ಷಿಪ್ರ ಗ್ರಹಣ– ಈ ಎಲ್ಲವೂ ಬೆರಗುಗೊಳಿಸುವ ಬೆಳವಣಿಗೆಗಳಾಗಿವೆ.

ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತದರ ನಾಟೋ ಮಿತ್ರರು ಆಫ್ಘಾನಿಸ್ತಾನದ ಅತಿಕ್ರಮಣ ಮಾಡಿ ತಾಲಿಬಾನ್ ಆಡಳಿತವನ್ನು ಪದಚ್ಯುತಗೊಳಿಸಿದ 20 ವರ್ಷಗಳ ನಂತರ, ಕಾಬೂಲ್‌ನಲ್ಲಿ ತಾಲಿಬಾನ್ ಮತ್ತೆ ಅಧಿಕಾರಕ್ಕೆ ಬಂದಿದೆ. ಈ ಎರಡು ದಶಕಗಳಲ್ಲಿ ಅಮೆರಿಕ ಎರಡು ಟ್ರಿಲಿಯ ಡಾಲರ್‌ಗಿಂತಲೂ ಹೆಚ್ಚು ಹಣ ವೆಚ್ಚ ಮಾಡಿದೆ. ಅತಿಕ್ರಮಣದ ಉಚ್ಛ್ರಾಯ ಅವಧಿಯಲ್ಲಿ ಆಫ್ಘಾನಿಸ್ತಾನದಲ್ಲಿ 1,30,000 ನಾಟೋ ಸೈನಿಕರು ಇದ್ದರು. ರಾಷ್ಟ್ರೀಯ ಸೇನೆಯನ್ನು ಕಟ್ಟಲು 88 ಬಿಲಿಯ ಡಾಲರ್ ವ್ಯಯಿಸಲಾಗಿತ್ತು. ಇದರಲ್ಲಿ ಬ್ರಿಟನ್ ಮತ್ತು ಇತರ ನಾಟೋ ಮಿತ್ರ ದೇಶಗಳು ಖರ್ಚು ಮಾಡಿದ ಬಿಲಿಯಾಂತರ ಡಾಲರ್‌ಗಳು ಸೇರಿಲ್ಲ.

ಮರೆ ಮಾಚುವ ಸಂಕಥನ

ಅಮೆರಿಕ ಮತ್ತು ಪಾಶ್ಚಿಮಾತ್ಯ ದೇಶಗಳು ಕಳೆದ 20 ವರ್ಷಗಳಲ್ಲಿ ಆಫ್ಘಾನಿಸ್ತಾನದಲ್ಲಿ "ಪ್ರಜಾಸತ್ತಾತ್ಮಕ' ಪ್ರಭುತ್ವವೊಂದನ್ನು ಸೃಷ್ಟಿಸಿವೆ ಎಂದು ಹೇಳಲಾಗುತ್ತದೆ. ಆದರೆ ಈ ಸಂಕಥನದಲ್ಲಿ ಅಮೆರಿಕ ಮತ್ತದರ ಮಿತ್ರರ ವೈಮಾನಿಕ ಬಾಂಬ್ ದಾಳಿಗಳಲ್ಲಿ ಸಾವಿರಾರು ಜನರು ಮೃತಪಟಿರುವುದನ್ನು ಯಾರೂ ಹೇಳುವುದಿಲ್ಲ. ಅಂತಃಕಲಹದ ವೇಳೆ ಮೃತಪಟ್ಟ ನಾಗರಿಕರಲ್ಲಿ ಶೇಕಡ 40ರಷ್ಟು ಮಂದಿ ಇಂಥ ವೈಮಾನಿಕ ಬಾಂಬ್ ದಾಳಿಗಳಿಗೆ ಬಲಿಯಾದವರು ಎನ್ನುವುದು ಗಮನಾರ್ಹ. ಅಶ್ರಫ್ ಘನಿ ಸರ್ಕಾರಕ್ಕೆ ಹೇಳಿಕೊಳ್ಳಬಹುದಾದ ಜನರ ಬೆಂಬಲವೇನೂ ಇರಲಿಲ್ಲ; ಅದು ಭ್ರಷ್ಟಾಚಾರದಲ್ಲಿ ಮುಳುಗಿತ್ತು; ಅದು ಸೇನೆಯ ಮೇಲೂ ದುಷ್ಪರಿಣಾಮ ಬೀರಿತ್ತು ಎಂಬ ವಿಚಾರವನ್ನು ಬಹುತೇಕ ಮಾಧ್ಯಮಗಳ ಸಂಕಥನಗಳು ಉದ್ದೇಶಪೂರ್ವಕವಾಗಿಯೇ ಅಡಗಿಸಿಟ್ಟಿವೆ.



ಮಿಷನ್..... ....ಕೈಗೂಡಿತು

ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

2001 ಸೆಪ್ಟೆಂಬರ್ 11ರ ದಾಳಿಯ ನಂತರ ಅಮೆರಿಕ ಅಧ್ಯಕ್ಷ ಜಾರ್ಜ್ ಬುಷ್ ಮಾಡಿದ್ದ "ಭಯೋತ್ಪಾದನೆಯ ಮೇಲಿನ ಸಮರ' (ವಾರ್ ಆನ್ ಟೆರರ್) ಘೋಷಣೆಯ ಹಿಂದೆ ಇದ್ದುದು ಸಂದೇಹಾಸ್ಪದ ಪೂರ್ವಾಪರಗಳು. ಯಾವ ತಾಲಿಬಾನ್ ಆಡಳಿತ ಮತ್ತು ಒಸಾಮಾ ಬಿನ್ ಲಾಡೆನ್ ಮೇಲೆ ಆಫ್ಘಾನಿಸ್ತಾನದಲ್ಲಿ ಅಮೆರಿಕಗುರಿಯಿಟ್ಟಿತ್ತೋ, ಅವರೆಲ್ಲರೂ 1980ರ ದಶಕದಲ್ಲಿ ಆಫ್ಘಾನಿಸ್ತಾನದಲ್ಲಿ ಸೋವಿಯತ್ ಒಕ್ಕೂಟದ ಹಾಜರಿಯ ವಿರುದ್ಧ ಮುಜಾಹಿದೀನ್‌ಗಳು ಆರಂಭಿಸಿದ್ದ ಜಿಹಾದ್‌ನ ಉತ್ಪನ್ನಗಳು ಎಂಬುದನ್ನು ಮರೆಯುವಂತಿಲ್ಲ. ಜಿಹಾದ್‌ನಲ್ಲಿ ಹಿಂಡುಹಿಂಡಾಗಿ ಸೇರಿಕೊಂಡ ಒಸಾಮಾ ಬಿನ್ ಲಾಡೆನ್ ಮತ್ತು ವಿವಿಧ ಇಸ್ಲಾಮಿ ಉಗ್ರಗಾಮಿ ಶಕ್ತಿಗಳಿಗೆ ಸಿಐಎ ಆರ್ಥಿಕ ನೆರವು ಒದಗಿಸಿತ್ತು. ಪಾಕಿಸ್ತಾನದ ಐಎಸ್‌ಐ ಮೂಲಕ ಶಸ್ತ್ರಾಸ್ತ್ರ ಪೂರೈಸಲಾಗಿತ್ತು. ಇವೆಲ್ಲವೂ ಅಲ್ ಖೈದಾ ಆಗಿ ಪರಿವರ್ತನೆ ಹೊಂದಿದವು. ತಾಲಿಬಾನ್, ಆಫ್ಘಾನಿಸ್ತಾನದ ಮುಜಾಹಿದಿನ್ ಶಕ್ತಿಗಳ, ಅದರಲ್ಲೂ ಮುಖ್ಯವಾಗಿ ಪಶ್ತೂನ್ ರಾಷ್ಟ್ರೀಯತೆಯ, ಸಂತಾನವಾಗಿದೆ.

ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಭಯೋತ್ಪಾದನೆ ನಂಟು

ಅಂದಿನ ಅಧ್ಯಕ್ಷ ಜಾರ್ಜ್ ಬುಷ್ ಮತ್ತವರ ನವಉದಾರವಾದಿ ಸಲಹೆಗಾರರ "ಭಯೋತ್ಪಾದನೆ ಮೇಲಿನ ಯುದ್ಧ'ವು ಬಹಳ ಬೇಗನೆ ಅಮೆರಿಕ ಸಾಮ್ರಾಜ್ಯಶಾಹಿಯ ಪ್ರಾಬಲ್ಯವನ್ನು ಮುಂದುವರಿಸುವುದಕ್ಕೆ ಆಕ್ರಮಣದ ಒಂದು ಸಾಧನವಾಗಿ ಪರಿಣಮಿಸಿತು. ಆಫ್ಘಾನಿಸ್ತಾನದ ನಂತರ ಅದರ ಮುಂದಿನ ಗುರಿ 2003ರ ಮಾರ್ಚ್‌ನಲ್ಲಿ ಇರಾಕ್ ಆಗಿತ್ತು. ಅತ್ಯಂತ ಮೋಸದ ಆಕ್ರಮಣಕ್ಕೂ ಅಮೆರಿಕ ಒಂದು ಕುಯುಕ್ತಿಯ ನೆಪ ಮುಂದೆ ಮಾಡಿತ್ತು. ಅಲ್ ಖೈದಾ ಜೊತೆ ಸದ್ದಾಂ ಹುಸೇನ್ ಸಂಬಂಧ ಹೊಂದಿದ್ದಾರೆ ಎಂಬ ಆರೋಪವನ್ನು ಹೊರಿಸಿತ್ತು. ವಾಸ್ತವವಾಗಿ, ಆ ಹೊತ್ತಿನಲ್ಲಿ, ಸದ್ದಾಂ ಹುಸೇನ್ ಜಾತ್ಯತೀತ ಸರ್ಕಾರ ನಡೆಸುತ್ತಿರುವುದರಿಂದಾಗಿ ಒಬ್ಬ 'ನಾಸ್ತಿಕ' ಎಂದು ಒಸಾಮಾ ಬಿನ್ ಲಾಡೆನ್ ಖಂಡಿಸುತ್ತಿದ್ದ. ಭಯೋತ್ಪಾದನೆ ವಿರುದ್ಧದ ಸಮರ ಲಿಬ್ಯಾ ಮತ್ತು ಸಿರಿಯಾಕ್ಕೆ ವಿಸ್ತರಣೆಗೊಂಡು ವಿನಾಶದ ಅಟ್ಟಹಾಸ ಮುಂದುವರಿಯಿತು.

ಎಲ್ಲೆಲ್ಲಿ ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಅತಿಕ್ರಮಣ ಇರುತ್ತದೋ ಅಲ್ಲೆಲ್ಲ ಭಯೋತ್ಪಾದನೆ ಮತ್ತು ಭಯೋತ್ಪಾದಕ ಸಂಘಟನೆಗಳ ಸಂತಾನ ಹುಟ್ಟುತ್ತವೆ ಎನ್ನುವುದು ಯಾರೂ ನಿರಾಕರಿಸಲಾಗದ ವಾಸ್ತವ. ಇರಾಕ್ ಮತ್ತು ಸಿರಿಯಾದಲ್ಲಿ ಅಲ್ ಖೈದಾ ಮಾತ್ರವಲ್ಲದೆ ಅದಕ್ಕಿಂತಲೂ ಭೀಕರವಾದ ಇಸ್ಲಾಮಿಕ್ ಸ್ಟೇಟ್ ಸಂಘಟನೆ (ಐಎಸ್‌ಐಎಸ್–ಐಸಿಸ್) ಹುಟ್ಟಿಕೊಂಡಿತು. ಲಿಬ್ಯಾದ ವಿನಾಶದ ನಂತರ ಅನೇಕ ಮುಸ್ಲಿಂ ಉಗ್ರವಾದಿ ಸಂಘಟನೆಗಳು ತಲೆಯೆತ್ತಿದವು. ಅವುಗಳು ನಂತರ ವಾಯವ್ಯ ಆಫ್ರಿಕಾಕ್ಕೆ ತಮ್ಮ ಪ್ರಭಾವವನ್ನು ವಿಸ್ತರಿಸಿದವು. ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಭಯೋತ್ಪಾದನೆ ಜೊತೆ ಜೊತೆಯಲ್ಲೇ ಸಾಗಿದವು.

ಭವಿಷ್ಯ ಅಸ್ಪಷ್ಟ ಹಾಗೂ ಅನಿಶ್ಚಿತ

ಆಫ್ಘಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರ ವಹಿಸಿಕೊಂಡಿರುವುದು ತುಂಬಾ ಕಳವಳಕಾರಿ ವಿದ್ಯಮಾನ. ತಾಲಿಬಾನ್‌ನ ಪ್ರತಿಗಾಮಿ ಮೂಲಭೂತವಾದಿ ಧೋರಣೆಯೇ ಈ ಕಳವಳಕ್ಕೆ ಕಾರಣ. ತಾಲಿಬಾನ್ ಆಡಳಿತಕ್ಕೆ ಮರಳಿರುವುದರಿಂದ ಆಫ್ಘಾನಿಸ್ತಾನದ ಭವಿಷ್ಯ ಅಸ್ಪಷ್ಟ ಹಾಗೂ ಅನಿಶ್ಚಿತವಾಗಿದೆ. ಜನಾಂಗೀಯ ವೈವಿಧ್ಯತೆ, ಮಹಿಳೆಯರ ಹಕ್ಕುಗಳು ಮತ್ತು ಅಲ್ಪಸಂಖ್ಯಾತರನ್ನು ಅದು ಹೇಗೆ ನಿರ್ವಹಿಸುತ್ತದೆ ಎನ್ನುವುದರ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ. ಹಿಂದಿನ ತಾಲಿಬಾನ್ ಆಡಳಿತ ಈ ಮೂರೂ ವಿಷಯಗಳಲ್ಲಿ ಬರ್ಬರ ಹಾಗೂ ಪ್ರತಿಗಾಮಿ ಧೋರಣೆ ಹೊಂದಿತ್ತು. ಇಸ್ಲಾಮಿಕ್ ಸ್ಟೇಟ್ (ಐಎಸ್) ಮತ್ತು ಅಲ್ ಖೈದಾದಂಥ ಭಯೋತ್ಪಾದಕ ಸಂಘಟನೆಗಳಿಗೆ ಆಫ್ಘಾನಿಸ್ತಾನ ನೆಲದಲ್ಲಿ ಆಶ್ರಯ ನೀಡಬಾರದು ಎಂಬ ವಿಚಾರದಲ್ಲಿ ಆಗಸ್ಟ್ 16ರಂದು ಈ ಕುರಿತು ನಡೆದ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ತುರ್ತು ಸಭೆಯಲ್ಲಿ ಒಮ್ಮತಾಭಿಪ್ರಾಯ ಮೂಡಿದೆ. ಇದು ಭಾರತಕ್ಕೆ ಮಹತ್ವದ ಕಾಳಜಿಯ ವಿಷಯವಾಗಿದೆ. ಆಫ್ಘಾನಿಸ್ತಾನದಲ್ಲಿ ಭಾರತೀಯ ಯೋಜನೆಗಳ ವಿರುದ್ಧ ತಾಲಿಬಾನ್‌ನ ಸಿರಾಜುದ್ದಿನ್ ಹಕ್ಕಾನಿ ಬಣ ದಾಳಿ ನಡೆಸಿದ್ದನ್ನು ನೆನಪಿಸಿಕೊಳ್ಳಬಹುದು.

ಸಾಮರಿಕ ಸ್ವಾಯತ್ತತೆಗೆ ಧಕ್ಕೆ

ಆಫ್ಘಾನಿಸ್ತಾನದಲ್ಲಿ ಅಮೆರಿಕದ ಪರಾಭವದಲ್ಲಿ ಭಾರತಕ್ಕೂ ಪಾಠಗಳಿವೆ. 2001ರಿಂದಲೂ ಆಗಿನ ವಾಜಪೇಯಿ ಸರ್ಕಾರ, ಆಫ್ಘಾನಿಸ್ತಾನದ ಮೇಲೆ ಅಮೆರಿಕದ ಅತಿಕ್ರಮಣಕ್ಕೆ ಸಂಪೂರ್ಣ ಬೆಂಬಲ ಘೋಷಿಸಿತ್ತು. ಆದರೆ, ಆಗ ಮಿಲಿಟರಿ ಸಾಗಾಟ ಸೌಲಭ್ಯವನ್ನು ಒದಗಿಸಲು ಭಾರತ ಮುಂದೆ ಬಂದರೂ ಅದನ್ನು ಅಮೆರಿಕ ನಿರಾಕರಿಸಿ, ಪಾಕಿಸ್ತಾನವನ್ನು ಅವಲಂಬಿಸಿದ್ದು ವಾಜಪೇಯಿ ಸರಕಾರಕ್ಕೆ ನಿರಾಸೆ ಉಂಟು ಮಾಡಿತ್ತು. ಗಳಿಂದ ಅಮೆರಿಕಾದ ಸಾಲಿನಲ್ಲಿ ನಿಂತುದರಿಂದ ಭಾರತ ಈಗ ಒಂದು ಸಾಮರಿಕ ಮಿತ್ರನಾಗಿ ಬಿಟ್ಟಿದೆ.

ಮೋದಿ ಸರ್ಕಾರ ಅಮೆರಿಕದೊಂದಿಗೆ ಸರಣಿ ಮಿಲಿಟರಿ ಒಪ್ಪಂದಗಳಿಗೆ ಸಹಿ ಹಾಕಿದ್ದು ಅದರೊಂದಿಗಿನ ಮೈತ್ರಿಗೆ ಮಿಲಿಟರಿ ಸ್ವರೂಪವನ್ನು ಕೊಟ್ಟಿದೆ. ಚತುಷ್ಪಕ್ಷ ಮೈತ್ರಿಕೂಟ (ಕ್ವಾಡ್ರಿಲೇಟರಲ್ ಅಲಯನ್ಸ್–ಕ್ವಾಡ್) ಈ ವಿಚಾರದಲ್ಲಿನ ಅಂತಿಮ ಹೆಜ್ಜೆಯಾಗಿದೆ. ಅಮೆರಿಕದೊಂದಿಗಿನ ಸಾಮರಿಕ ಸಂಬಂಧಗಳು ಭಾರತದ ಸಾಮರಿಕ ಸ್ವಾಯತ್ತತೆಗೆ ಪರಿಣಾಮಕಾರಿ ರೀತಿಯಲ್ಲಿ ತಡೆಯೊಡ್ಡಿದೆ ಹಾಗೂ ದೇಶದ ಸ್ವತಂತ್ರ ವಿದೇಶಾಂಗ ನೀತಿಗೆ ಭಂಗ ಬಂದಿದೆ.

ಪಶ್ಚಿಮ ಏಷ್ಯಾದಲ್ಲಿ ತನ್ನ ಯಜಮಾನಿಕೆಯನ್ನು ಬಲಪಡಿಸಲು 'ಭಯೋತ್ಪಾದನೆ ಮೇಲೆ ಸಮರ'ವನ್ನು ಸಾರಿದರೆ, ಚೀನಾವನ್ನು ತಡೆಹಿಡಿದು ಏಕಾಂಗಿಯಾಗಿಸುವುದು ಕ್ವಾಡ್ ಗುರಿಯಾಗಿದೆ.

ಪೂರ್ವದ ವಿಚಾರದಲ್ಲಿ ಅಮೆರಿಕದೊಂದಿಗೆ ಒಮ್ಮತಾಭಿಪ್ರಾಯವಿದ್ದರೂ ಪಶ್ಚಿಮದ ವಿಚಾರದಲ್ಲಿ, ಅದರಲ್ಲೂ ಮುಖ್ಯವಾಗಿ ಆಫ್ಘಾನಿಸ್ತಾನ ಬಗ್ಗೆ ಭಿನ್ನಮತವಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಕಳೆದ ವಾರ ಹೇಳಿದ್ದರು. ಆಫ್ಘಾನಿಸ್ತಾನದಿಂದ ಅಮೆರಿಕ ಅಕಾಲಿಕವಾಗಿ ತೊರೆದದ್ದಕ್ಕೆ ನಿರಾಶೆ ವ್ಯಕ್ತಪಡಿಸುವಾಗಲೇ ಕ್ವಾಡ್‌ಗೆ ಅತುಕೊಂಡಿರುವುದು ಸರ್ಕಾರದ ಇಚ್ಛೆಯಾಗಿದೆ ಎಂಬುದು ಇದರ ಅರ್ಥವಾಗುತ್ತದೆ.

ಭಾರತದ ಮೇಲೆ ದುಷ್ಪರಿಣಾಮ

ಆಫ್ಘಾನಿಸ್ತಾನ ನೀತಿಯಲ್ಲೇ ನೋಡಿದಂತೆ, ಅಮೆರಿಕದೊಂದಿಗಿನ ಬಾಂಧವ್ಯಕ್ಕೆ ಆದ್ಯತೆ ನೀಡುವ ಭಾರತದ ನೀತಿಯಿಂದಾಗಿ ಈ ವಲಯದಲ್ಲಿ ಭಾರತ ಒಬ್ಬಂಟಿಯಾಗಿ ಬಿಟ್ಟಿದೆ. 1996 ಮತ್ತು 2001ರ ನಡುವೆ ತಾಲಿಬಾನ್ ಅಧಿಕಾರದಲ್ಲಿದ್ದಾಗ, ಉತ್ತರದ ಮೈತ್ರಿಕೂಟಕ್ಕೆ (ನಾಟೋ) ಬೆಂಬಲ ನೀಡುವಲ್ಲಿ ಭಾರತದೊಂದಿಗೆ ಕೈ ಜೋಡಿಸಿದ್ದ ರಷ್ಯಾ ಮತ್ತು ಇರಾನ್ ಈಗ ತಾಲಿಬಾನ್‌ನೊಂದಿಗೆ ಸಂಬಂಧ ಏರ್ಪಡಿಸಿಕೊಂಡಿರುವುದು ಗಮನಾರ್ಹ ಬೆಳವಣಿಗೆಯಾಗಿದೆ. ತಾಲಿಬಾನ್ ಇನ್ನೂ ಸಂಪೂರ್ಣ ನಿಯಂತ್ರಣ ಸಾಧಿಸುವುದಕ್ಕೂ ಮುಂಚೆಯೇ ಈ ಎರಡು ದೇಶಗಳು ಹಾಗೂ ಚೀನಾ ತಾಲಿಬಾನ್‌ನೊಂದಿಗೆ ಮಾತುಕತೆ ನಡೆಸಿದ್ದವು. ಪ್ರಸಕ್ತ ಮೋದಿ ಸರ್ಕಾರದ ಸಂಕುಚಿತ ಪಾಕಿಸ್ತಾನ–ವಿರೋಧಿ ಹಾಗೂ ಚೀನಾ–ವಿರೋಧಿ ನೀತಿಯಿಂದಾಗಿ ಭಾರತವು ದಕ್ಷಿಣ ಏಷ್ಯಾದ ಎಲ್ಲ ನೆರೆಹೊರೆ ದೇಶಗಳಿಂದ ಪ್ರತ್ಯೇಕಗೊಳ್ಳುವಂತೆ ಆಗಿದೆ. ಮೋದಿ ಸರ್ಕಾರ ತನ್ನ ವಿದೇಶಾಂಗ ನೀತಿ ಮತ್ತು ವ್ಯೂಹಾತ್ಮಕ ಧೋರಣೆಯನ್ನು ಸರಿಪಡಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಅದು ಹೆಚ್ಚು ವೈರತ್ವದ ಪ್ರಾದೇಶಿಕ ಸನ್ನಿವೇಶದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ.


ಆಫ್ಘಾನಿಸ್ತಾನದ ಬೆಳವಣಿಗೆಗಳಿಂದಾಗಿ ದಕ್ಷಿಣ ಏಷ್ಯಾದಲ್ಲಿ ಇಸ್ಲಾಮೀ ಉಗ್ರಗಾಮಿತ್ವ ಬೆಳೆಯುವ 'ಅಪಾಯ ಎದುರಾಗಿದೆ. ಬಿಜೆಪಿ ಸರ್ಕಾರದ ಹಿಂದುತ್ವ ನೀತಿಗಳಿಂದಾಗಿ ನಮ್ಮ ದೇಶವೂ ಈ ಪ್ರಭಾವಗಳಿಗೆ ಒಳಗಾಗಿ ಸಂಕಷ್ಟಕ್ಕೆ ಗುರಿಯಾಗುವ ಸಾಧ್ಯತೆಯಿದೆ. ಅಲ್ಪಸಂಖ್ಯಾತರನ್ನು ಪೀಡಿಸುವುದು ಇಂಥದ್ದಕ್ಕೆ ಫಲವತ್ತಾದ ಮೈದಾನ ಒದಗಿಸಲಿದೆ. ದೃಢವಾದ ಜಾತ್ಯತೀತ ನೀತಿಗಳನ್ನು ಅನುಸರಿಸುವುದರಿಂದ ಮಾತ್ರವೇ ಇಂಥ ಪ್ರವೃತ್ತಿಯನ್ನು ಎದುರಿಸಬಹುದಾಗಿದೆ.

ತಕ್ಷಣಕ್ಕೆ, ಭಾರತ ಸರ್ಕಾರ ನಮ್ಮ ದೇಶದೊಂದಿಗೆ ನಿಕಟ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುವ ಆಫ್ಘನ್ ಜನರ ತುರ್ತು ಪ್ರಶ್ನೆಗಳಿಗೆ ಸ್ಪಂದಿಸಬೇಕು. ನಿರಾಶ್ರಿತರ ನೆಲೆಯಲ್ಲಿ ಆಶ್ರಯ ಕೋರುವವರು ಆಗಮಿಸಲು ಭಾರತ ವ್ಯವಸ್ಥೆ ಮಾಡಬೇಕು. ಭಾರತದ ನಾನಾ ಭಾಗಗಳಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ನೂರಾರು ಆಫ್ಘನ್ ವಿದ್ಯಾರ್ಥಿಗಳ ವೀಸಾವನ್ನು ನವೀಕರಿಸಬೇಕು ಅಥವಾ ವಿಸ್ತರಿಸಬೇಕು. ಅಗತ್ಯವಿರುವವರಿಗೆ ಸ್ಕಾಲರ್‌ಶಿಪ್ ಮತ್ತು ಅನುದಾನಗಳ ಮೂಲಕ ಆರ್ಥಿಕ ನೆರವನ್ನು ಒದಗಿಸಬೇಕು.

ಆಫ್ಘಾನಿಸ್ತಾನ ಕುರಿತ ನಮ್ಮ ಹೊಸ ನೀತಿ ಆಫ್ಘನ್ ಜನರ ಹಿತ ಮತ್ತು ಕಲ್ಯಾಣ ಕೇಂದ್ರಿತ ಆಗಿರಬೇಕೇ ಹೊರತು ಭೌಗೋಳಿಕ–ರಾಜಕೀಯ ಅಧಿಕಾರದ ಆಟದಿಂದ ಪ್ರೇರಿತವಾಗಿರಬಾರದು.

ಅನು: ವಿಶ್ವ





2018 2019 2020

ಪ್ರಧಾನ ಮಂತ್ರಿಗಳ ಸ್ವಾತಂತ್ರ್ಯ ದಿನದ ಭಾಷಣ

ವಂಚನೆಯ ಒಂದು ಕಸರತ್ತು

ನಮ್ಮ ಭವ್ಯ ಸ್ವಾತಂತ್ರ್ಯ ಹೋರಾಟದ 75ನೇ ವಾರ್ಷಿಕೋತ್ಸವದ ಆಚರಣೆಗಳನ್ನು ಆರಂಭಿಸುತ್ತಿರುವ ಸಂದರ್ಭದ ಪ್ರಧಾನ ಮಂತ್ರಿಗಳ ಭಾಷಣದಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಒಂದು ಮೇಲು-ಮೇಲಿನ ಉಲ್ಲೇಖ ಮಾತ್ರ ಇತ್ತು. ಸಂವಿಧಾನ, ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮಾನತೆ, ಐಕ್ಯತೆ, ಬಹುತ್ವ, ನ್ಯಾಯ, ಕಾರ್ಮಿಕರು, ನಿರುದ್ಯೋಗ, ಹಣದುಬ್ಬರ ಈ ಪದಗಳನ್ನು ಒಮ್ಮೆಯೂ ಉಚ್ಚರಿಸಲಿಲ್ಲ. ಗೆಳೆತನ, ಶಾಂತಿ, ಉತ್ತಮ ಸಂಬಂಧಗಳು ಎಂಬ ಪದಗಳನ್ನು ಕೂಡ. ಈ ಸಂದರ್ಭದಲ್ಲಿ ನಮ್ಮ ದೇಶದ ಪ್ರಸ್ತುತ ಸರಕಾರ ಭಾರತಕ್ಕೆ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟ ಮೌಲ್ಯಗಳಿಗೆ ತದ್ವಿರುದ್ಧವಾದ ಸೈದ್ಧಾಂತಿಕ ನೆಲೆಯ ಪೂರ್ವಿಕರನ್ನು ಹೊಂದಿರುವ ಮುಖಂಡರಿಂದ ಕೂಡಿದೆ ಎಂಬುದು ಭಾರತದ ದುರಂತ. ಪ್ರಧಾನ ಮಂತ್ರಿಗಳ ಭಾಷಣ ಈ ವಾಸ್ತವತೆಯನ್ನು ಬಿಂಬಿಸಿದೆ.

ಬೃಂದಾ ಕಾರಟ್

ಒಂದು ಸ್ವಾತಂತ್ರ್ಯ ದಿನದ ಭಾಷಣ, ಅದರಲ್ಲೂ ಭಾರತದ ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವ ಆರಂಭವಾಗುವ ವರ್ಷದ ಭಾಷಣ, ಖಂಡಿತವಾಗಿಯೂ ನಮಗೆ ಈ ಸ್ವಾತಂತ್ರ್ಯವನ್ನು ಗೆದ್ದು ಕೊಟ್ಟಿರುವ ಮೌಲ್ಯಗಳನ್ನು ಪುನರುಚ್ಚರಿಸುವಂತದ್ದು ಆಗಿರಬೇಕಿತ್ತು. ಆದರೆ ಪ್ರಧಾನ ಮಂತ್ರಿ ಮೋದಿಯವರಿಗೆ ಹಾಗಿಲ್ಲ. 88 ನಿಮಿಷಗಳ ತನ್ನ ಭಾಷಣದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಆ ಹೋರಾಟದ ವೀರರುಗಳ ಬಗ್ಗೆ ಒಂದು ಮೇಲು-ಮೇಲಿನ ಉಲ್ಲೇಖ ಮಾತ್ರ ಇತ್ತು. ಪ್ರಧಾನ ಮಂತ್ರಿಗಳಿಗೆ ಭಾರತದ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳು ಎಷ್ಟೊಂದು ಅಪರಿಚಿತ ಎಂದರೆ, ಬಂಗಾಲದ ಸ್ವಾತಂತ್ರ್ಯ ಹೋರಾಟದ ವೀರ ಮಹಿಳೆ ಮಾತಂಗಿನಿ ಹಾಜ್ರಾ ರವರು ಅಸ್ಸಾಂನವರು ಎಂದು ಉಲ್ಲೇಖಿಸಿದರು.

ಕಾಣೆಯಾದ ಪದಗಳು

ಪ್ರಧಾನ ಮಂತ್ರಿಗಳು ಹೇಳದೇ ಇದ್ದುದರ ದನಿಯೇ ಗಟ್ಟಿಯಾಗಿತ್ತು, ಸ್ಪಷ್ಟವಾಗಿತ್ತು. ಭಾಷಣದ ಆರಂಭದಲ್ಲಿ "ಭಾರತವನ್ನು ಮತ್ತು ಪ್ರಜಾಪ್ರಭುತ್ವವನ್ನು ಪ್ರೀತಿಸುವವರಿಗೆ" ಶುಭಾಶಯಗಳನ್ನು ಕೋರಿರುವುದನ್ನು ಬಿಟ್ಟರೆ, ಅವರ ಭಾಷಣದ ಉಳಿದ ಭಾಗದಲ್ಲಿ ಸಂವಿಧಾನ, ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮಾನತೆ, ಐಕ್ಯತೆ, ಬಹುತ್ವ, ನ್ಯಾಯ, ಕಾರ್ಮಿಕರು, ನಿರುದ್ಯೋಗ, ಹಣದುಬ್ಬರ ಈ ಪದಗಳ ಗೈರುಹಾಜರಿಯೇ ಎದ್ದು ಕಾಣುತ್ತಿತ್ತು. ಒಂದು ಬಾರಿಯೂ ಈ ಪದಗಳನ್ನು ಉಚ್ಚರಿಸಲಿಲ್ಲ. ಗೆಳೆತನ, ಶಾಂತಿ, ಉತ್ತಮ ಸಂಬಂಧಗಳು ಎಂಬ ಪದಗಳನ್ನೂ ಕೂಡ.

ಈ ಪದಗಳು ಕಾಣೆಯಾಗಿರುವುದು, ರಾಷ್ಟ್ರಪತಿ ರಾಮ್‌ನಾಥ ಕೋವಿಂದ್‌ರವರು ಮಾಡಿದ ಸ್ವಾತಂತ್ರ್ಯದ ಮುನ್ನಾದಿನದ ಸಂಕ್ಷಿಪ್ತ ಭಾಷಣಕ್ಕೆ ಹೋಲಿಸಿದಾಗ ಇನ್ನಷ್ಟು ಗೋಚರವಾಗುತ್ತವೆ. ಅವರು ಈ ಕೆಲವು ಪರಿಕಲ್ಪನೆಗಳನ್ನು ಉಲ್ಲೇಖಿಸಿದರು: "ಭಾರತ- ಬಹುತ್ವದ ಪರಂಪರೆಗಳ ನೆಲೆವೀಡು-ಅತ್ಯಂತ ದೊಡ್ಡ ಮತ್ತು ಅತ್ಯಂತ ಚೈತನ್ಯಶಾಲಿ ಪ್ರಜಾಪ್ರಭುತ್ವ-ನಮಗೆ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟವರ ಕನಸುಗಳನ್ನು ಸಾಕಾರಗೊಳಿಸಲು ನಾವು ಇನ್ನೂ ಬಹಳ ದೂರ ಸಾಗಬೇಕು ಎಂದು ನಾವು ಒಪ್ಪಿಕೊಳ್ಳುತ್ತೇವೆ.... ನಮ್ಮ ಸಂವಿಧಾನ ಆ ಕನಸುಗಳ ಸಾರಾಂಶವನ್ನು ನಾಲ್ಕು ಪದಗಳಲ್ಲಿ ನೀಟಾಗಿ ಕೊಡುತ್ತದೆ- ಅವೆಂದರೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವ. ನಾವು ಒಂದು ಅಸಮಾನ ಜಗತ್ತಿನಲ್ಲಿ ಹೆಚ್ಚಿನ ಸಮಾನತೆಗಾಗಿ, ಅನ್ಯಾಯಯುತ ಸನ್ನಿವೇಶಗಳಲ್ಲಿ ಹೆಚ್ಚಿನ ನ್ಯಾಯಕ್ಕಾಗಿ ಶ್ರಮಿಸಬೇಕಾಗಿದೆ... "ವೈವಿಧ್ಯತೆಯಲ್ಲಿ ಏಕತೆ"ಯ ಹುರುಪಿನಲ್ಲಿ, ನಾವು ಒಂದು ದೇಶವಾಗಿ ಸರಿಯಾದ ದಾರಿಯಲ್ಲಿ ಸಾಗುತ್ತಿದ್ದೇವೆ.."

ರಾಷ್ಟ್ರಪತಿಗಳು, "ಜಾಗತಿಕ ಬಂಧುಗಳು" ಮಹಾಸೋಂಕಿನ ಎರಡನೇ ಅಲೆಯ ವೇಳೆಯಲ್ಲಿ ಭಾರತಕ್ಕೆ ಒದಗಿಸಿದ ಸೇವೆಗೆ ಧನ್ಯವಾದ ಅರ್ಪಿಸಿದರು. ಮೋದಿಯವರು ಸೌಜನ್ಯಹೀನರಾಗಿ ಉಪೇಕ್ಷಿಸಿರುವ ಅಂಶವಿದು.

ಈ ಎರಡು ಭಾಷಣಗಳ ಧ್ವನಿಯಲ್ಲಿ ಎದ್ದು ಕಾಣುತ್ತಿರುವ ಈ ವ್ಯತ್ಯಾಸಗಳು ಪ್ರಸಕ್ತ ಸರಕಾರದ ಸರ್ವಾಧಿಕಾರಶಾಹೀ ಲಕ್ಷಣದಿಂದಾಗಿ ಹೆಚ್ಚೇನೂ ರಾಜಕೀಯ ಪರಿಣಾಮಗಳನ್ನು ಹೊಂದಿರಲಿಕ್ಕಿಲ್ಲ. ಆದರೆ, ಪ್ರಧಾನ ಮಂತ್ರಿಗಳು ಸ್ವಾತಂತ್ರ್ಯ ಹೋರಾಟದ ಆದರ್ಶಗಳಿಗೆ ಮತ್ತು ಸ್ವತಂತ್ರ ಭಾರತ ತನ್ನ ದುಡಿಯುವ ಜನಗಳಿಗೆ ಈಡೇರಿಸದೇ ಉಳಿದಿರುವ ಆಶ್ವಾಸನೆಗಳಿಗೆ ಎಷ್ಟೊಂದು ಪರಕೀಯರಾಗಿದ್ದಾರೆ, ಅವೆಲ್ಲವುಗಳಿಂದ ಎಷ್ಟೊಂದು ದೂರದಲ್ಲಿ ಇದ್ದಾರೆ ಎಂಬುದನ್ನು ಅವು ಖಂಡಿತವಾಗಿಯೂ ತೋರಿಸುತ್ತವೆ.

ಕೋಮು ವಿಭಜನೆಯ ಸ್ಮರಣಾರ್ಥ?

ಇದು "ಭಾರತ ಆಗಸ್ಟ್ 14ನ್ನು 'ವಿಭಜನೆಯ ಭೀಷಣತೆಗಳ ಸ್ಮರಣೆಯ ದಿನ' ಎಂದು ವಿಭಜನೆಗೆ ಬಲಿಯಾದ ಎಲ್ಲರನ್ನೂ ಸ್ಮರಿಸಿಕೊಳ್ಳುತ್ತದೆ ಎಂಬ ಅವರ ಪ್ರಕಟಣೆಯಲ್ಲಿ ಎದ್ದು ಕಾಣುತ್ತದೆ. ದೇಶ ವಿಭಜನೆಯು ಬ್ರಿಟಿಷರು, ಧರ್ಮದ ಹೆಸರಿನಲ್ಲಿ, ಅದು ಮುಸ್ಲಿಮ್ ಇರಬಹುದು, ಅಥವ ಹಿಂದೂ ಇರಬಹುದು, ಕಾರ್ಯಾಚರಿಸುವ ಕೋಮುವಾದಿ ಶಕ್ತಿಗಳೊಡಗೂಡಿ ಭಾರತದ ವಿರುದ್ಧ ಎಸಗಿದ ದೊಡ್ಡ ದುರಂತಗಳಲ್ಲಿ ಒಂದು. ಅದು ಒಂದು ದಶಲಕ್ಷಕ್ಕೂ ಹೆಚ್ಚು ಪ್ರಾಣಗಳು ಹೋದ ಭೀಕರ ದುರಂತ ಎಂಬುದರಲ್ಲಿ ಸಂದೇಹವಿಲ್ಲ. ಒಂದು ದೇಶದ ಬದುಕಿನಲ್ಲಿ ಇಂತಹ ಒಂದು ದುರಂತವನ್ನು ನೆನಪಿಸಿಕೊಳ್ಳುವುದು ಎಂದರೆ, ಖಂಡಿತವಾಗಿಯೂ, ದೇಶ ವಿಭಜನೆಯ ವೇಳೆಯಲ್ಲಿ ಹಿಂಸಾಚಾರಕ್ಕೆ ಕಾರಣವಾದವುಗಳು, ಕೋಮುವಾದದ ಮತ್ತು "ಆ ಬೇರೆಯವರ" ಬಗ್ಗೆ ದ್ವೇಷದ ಮೇಲೆ ಕಟ್ಟಿದ ಸಂಕುಚಿತ ಧಾರ್ಮಿಕ ಅಸ್ಮಿತೆಗಳಿಗೆ ಪ್ರೋತ್ಸಾಹದ ರಾಜಕೀಯ, ಮತ್ತೆಂದೂ ತಲೆ ಎತ್ತಲು ಬಿಡುವುದಿಲ್ಲ ಎಂದು ಪ್ರತಿಜ್ಞೆಗೈಯುವುದೇ ಆಗಬೇಕು.


ಆದರೆ ಇದಂತೂ ನಿಜವಾದ ಉದ್ದೇಶ ಅಲ್ಲ ಎಂಬುದು ಬಿಜೆಪಿಯ ಅಧ್ಯಕ್ಷರಿಂದ ಹಿಡಿದು ಪ್ರಧಾನ ಕಾರ್ಯದರ್ಶಿ ಮತ್ತು ಆರೆಸ್ಸೆಸ್ ಪ್ರಚಾರಕ ಸಂತೋಷ್ ಮುಂತಾದ ಬಿಜೆಪಿ ಮುಖಂಡರಿಂದ "ತುಷ್ಟೀಕರಣದ" ರಾಜಕೀಯವೇ ಕಾರಣ ಎಂಬಂತಹ ಹೇಳಿಕೆಗಳ ಸುರಿಮಳೆಯೇ ಸಾಕಷ್ಟು ಸ್ಪಷ್ಟಪಡಿಸುತ್ತದೆ. ಈ ತುಷ್ಟೀಕರಣ ಎಂಬುದು ಅಲ್ಪಸಂಖ್ಯಾತರನ್ನು ಕುರಿತ ಬಿಜೆಪಿ ಸಂಕೇತ ಪದ. ಭಾರತದ ವಿಭಜನೆಗೆ ಕಾರಣವಾದ ವಿಭಜನೆ ಮತ್ತು ದ್ವೇಷ-ಆಧಾರಿತ ರಾಜಕಾರಣದ ಮರುಸೃಷ್ಟಿಗಾಗಿಯೇ ಈ ಸ್ಮರಣೆಯ ಕರೆ ಎಂಬುದು ಸ್ಪಷ್ಟ.

ಎಲ್ಲರಿಗೂ ತಿಳಿದಿರುವಂತೆ, ಆರೆಸ್ಸೆಸ್ ಸ್ಥಾಪನೆಯಾದಂದಿನಿಂದಲೂ, ಒಡೆದು ಆಳುವ ಬ್ರಿಟಿಶ್ ಕಾರ್ಯತಂತ್ರವನ್ನು ಬಲಪಡಿಸುವ ಕೆಲಸ ಮಾಡಿದೆ. ಹಿಂದುತ್ವದ, ಹಿಂದೂರಾಷ್ಟ್ರದ ಮತ್ತು ಹಿಂದೂಗಳು ಮತ್ತು ಮುಸ್ಲಿಮರು ಎರಡು ಭಿನ್ನ ರಾಷ್ಟ್ರೀಯತೆಗಳು ಎಂದು ಧರ್ಮದ ಆಧಾರದಲ್ಲಿ ರಾಷ್ಟ್ರೀಯತ್ವದ ಪರಿಕಲ್ಪನೆಯನ್ನು ಬೆಳೆಸಿದ ವಿ ಡಿ ಸಾವರ್ಕರ್ ಬಿಜೆಪಿಯ ಉತ್ಸವಮೂರ್ತಿ ಮತ್ತು ಗೌರವಾನ್ವಿತ ಸಿದ್ಧಾಂತಿ. 1937ರಲ್ಲಿ ಹಿಂದೂ ಮಹಾಸಭಾದ ಅಹಮದಾಬಾದ್ ಅಧಿವೇಶನದ ತನ್ನ ಅಧ್ಯಕ್ಷೀಯ ಭಾಷಣದಲ್ಲಿ ಅವರು " ಭಾರತವನ್ನು ಇಂದು ಒಂದು ಏಕಘಟಕ ಮತ್ತು ಸಮರೂಪದ ರಾಷ್ಟ್ರ ಎಂದು ಪರಿಗಣಿಸಲು ಆಗುವುದಿಲ್ಲ. ತದ್ವಿರುದ್ಧವಾಗಿ, ಭಾರತದಲ್ಲಿ ಮುಖ್ಯವಾಗಿ ಎರಡು ರಾಷ್ಟ್ರಗಳಿವೆ:ಹಿಂದೂಗಳು ಮತ್ತು ಮುಸ್ಲಿಮರು" ಎಂದರು.

1940ರಲ್ಲಿ ಲಾಹೋರ್ ಅಧಿವೇಶನದಲ್ಲಿ ಜಿನ್ನಾ ಧರ್ಮದ ಆಧಾರದಲ್ಲಿ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಪುನರುಚ್ಚರಿಸುತ್ತ ಭಾರತದ ವಿಭಜನೆಯನ್ನು ಪ್ರತಿಪಾದಿಸಿದರು.

ಸಾವರ್ಕರ್ ಮತ್ತು ಜಿನ್ನಾರ ನಿಲುವುಗಳಲ್ಲಿ ಸಾಮ್ಯತೆಯನ್ನು ಕಂಡವರು ಡಾ. ಅಂಬೇಡ್ಕರ್. "ವಿಚಿತ್ರವಾಗಿ ಕಾಣಬುದು, ಆದರೆ ಮಿ.ಸಾವರ್ಕರ್ ಮತ್ತು ಮಿ.ಜಿನ್ನಾ ಒಂದು ರಾಷ್ಟ್ರವೋ ಎರಡು ರಾಷ್ಟ್ರಗಳೋ ಎಂಬ ಪ್ರಶ್ನೆಯಲ್ಲಿ ಪರಸ್ಪರ ಎದುರುಬದುರಾಗಿರುವ ಬದಲು ಇಬ್ಬರಿಗೂ ಆ ವಿಷಯದಲ್ಲಿ ಸಂಪೂರ್ಣ ಒಮ್ಮತ ಇದೆ. ಇಬ್ಬರೂ ಭಾರತದಲ್ಲಿ ಎರಡು ರಾಷ್ಟ್ರಗಳಿವೆ, ಒಂದು ಹಿಂದೂ ರಾಷ್ಟ್ರ ಮತ್ತು ಇನ್ನೊಂದು ಮುಸ್ಲಿಂ ರಾಷ್ಟ್ರ

ಪುಟ 12 ನೋಡಿ




ಭೀಷಣತೆಗಳ ಬಗ್ಗೆ ಹೇಳುವುದಾದರೆ, ತಮ್ಮನ್ನು ಸ್ಮರಿಸಿಕೊಳ್ಳದೆ ಒಂದು ದಿನವೂ ಸಾಗದು!

ಬ್ರಿಟಿಷರಿಗೆ ಭಾರತವನ್ನು ವಿಭಜಿಸಲು ಅನುವು ಮಾಡಿಕೊಟ್ಟ ಅದೇ ರೀತಿಯ ರಾಜಕಾರಣವನ್ನು ಪ್ರೋತ್ಸಾಹಿಸುವ ಆಳುವ ಪಕ್ಷ ಇಂದು ಆ ದುರಂತವನ್ನು ಸ್ಮರಿಸಿಕೊಳ್ಳ ಬಯಸುತ್ತಿದೆ ಎಂಬುದು ದೇಶವಿಭಜನೆ ಸಂಬಂಧಿತ ಹಿಂಸಾಚಾರದಲ್ಲಿ ಕೊಲ್ಲಲ್ಪಟ್ಟವರ. ಅತ್ಯಾಚಾರಗಳಿಗೆ ಒಳಗಾದವರ, ಅನಾಥರಾದವರ, ನಿರ್ವಸಿತರಾದವರ, ನೆನಪಿಗೆ ಬಗೆಯುವ ಒಂದು ಅಪಚಾರವೇ ಸರಿ


ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಆಶ್ವಾಸನೆಗಳ ಸ್ವರೂಪದಲ್ಲಿ ಅವರು ಹೇಳಿದ್ದು ಹೆಚ್ಚು ಕಡಿಮೆ 2019 ಮತ್ತು 2020ರಲ್ಲಿ ಹೇಳಿದ್ದುದರ ರಿಸೈಕ್ಲಿಂಗ್ ಆಗಿತ್ತು. ಉದಾ: 'ಪ್ರಧಾನ ಮಂತ್ರಿ ಗತಿ ಶಕ್ತಿ' ಎಂಬ ಹೆಸರಿನ 100 ಲಕ್ಷ ಕೋಟಿ ರೂ.ಗಳ ಮೂಲರಚನೆ ಹೂಡಿಕೆ ಪರಿಯೋಜನೆಯ ಆಡಂಬರಪೂರ್ಣ ಪ್ರಕಟಣೆ. ಇದೇ ಮೊತ್ತದ, ಇದೇ ಪರಿಯೋಜನೆಯನ್ನು 2019ರ ಮತ್ತು 2020ರ ಸ್ವಾತಂತ್ರ್ಯ ದಿನದ ಭಾಷಣಗಳಲ್ಲೂ ಪ್ರಕಟಿಸಲಾಗಿತ್ತು.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಈ ವರ್ಷದ ಬೇಸಿಗೆ ಕಾಲದಲ್ಲಿ (ಜೂನ್–ಜುಲೈ) ಜಗತ್ತಿನಾದ್ಯಂತ ವಿಶೇಷವಾಗಿ ಉತ್ತರ ಯುರೋಪಿನಲ್ಲಿ ಅತಿವೃಷ್ಟಿ, ಉತ್ತರ ಅಮೆರಿಕದ ಪಶ್ಚಿಮ ಪ್ರದೇಶ ಮತ್ತು ದಕ್ಷಿಣ ಯುರೋಪುಗಳಲ್ಲಿ ಉಷ್ಣ–ಅಲೆ (ಹೀಟ್ ವೇವ್) ಮುಂತಾದ ಅಭೂತಪೂರ್ವ ಹವಾಮಾನ ವೈಪರೀತ್ಯಗಳು ಕಂಡು ಬಂದಿವೆ. ಅದು ಹವಾಮಾನ ಬದಲಾವಣೆಯ ಭೀಕರತೆಯನ್ನು ಪ್ರಾಯೋಗಿಕವಾಗಿ ತೋರಿಸಿದೆ. ಇತ್ತೀಚೆಗೆ ಐಪಿಸಿಸಿ ಯ ಹವಾಮಾನ ಬದಲಾವಣೆಯ ಕುರಿತ ಆರನೇ ಸುತ್ತಿನ ಮೊದಲ ವರದಿ **(IPCC/AR6/WG-1)** ಹಿಂದೆಂದಿಗಿಂತಲೂ ಖಚಿತವಾಗಿ ಮತ್ತು ನಿಖರವಾಗಿ ವಿಷಮ ಹವಾಮಾನಕ್ಕೂ ದೀರ್ಘಕಾಲೀನ ಮಾನವ–ಕೃತ ಪರಿಸರ ಮಾಲಿನ್ಯದ ಕ್ರಮಗಳಿಗೂ ಇರುವ ಸಂಬಂಧವನ್ನು ಬಿಚ್ಚಿಟ್ಟಿದೆ. ಹಿಂದೆಂದಿಗಿಂತಲೂ ಇದರ ಭವಿಷ್ಯದ ಭೀಕರ ಪರಿಣಾಮಗಳ ಮತ್ತು ಅದನ್ನು ಎದುರಿಸಲು ಪ್ಯಾರೀಸ್ ಒಪ್ಪಂದದ ಕ್ರಮಗಳು ಏನೇನೂ ಸಾಲವು ಎಂಬುದರ ಕುರಿತು ತೀವ್ರ ಎಚ್ಚರಿಕೆಯ ಗಂಟೆ ಬಾರಿಸಿದೆ. ಈ ಎರಡು ಎಚ್ಚರಿಕೆಯ ಗಂಟೆಗಳು ಒಟ್ಟಾಗಿ ಬಂದಿದ್ದು, ಇನ್ನಾದರೂ ಹವಾಮಾನ ಬದಲಾವಣೆಯನ್ನು ಪ್ರಶ್ನಿಸುತ್ತಿರುವವರ ನಿರ್ಲಕ್ಷ ಬದಲಾಗಬಹುದೆ? ಅಭಿವೃದ್ಧ ದೇಶಗಳ ಸರಕಾರಗಳ ಮತ್ತು ಜನತೆಯ ಈ ವರೆಗಿನ ಅಚಾರಿತ್ರಿಕ ಮತ್ತು ಅವೈಜ್ಞಾನಿಕ ಧೋರಣೆ ಬಿಟ್ಟು ತುರ್ತುಕ್ರಮಕ್ಕೆ ತಯಾರಾಗಬಹುದೆ? ಭಾರತದಲ್ಲಿ ಈ ನಿಟ್ಟಿನಲ್ಲಿ ಏನಾಗುತ್ತಿದೆ?


IPCC Climate Change Report 2021

ಹವಾಮಾನ ವೈಪರೀತ್ಯಗಳ ಮತ್ತು ಐಪಿಸಿಸಿ ವರದಿಯ ಎಚ್ಚರಿಕೆಯ ಗಂಟೆ

ಮೂಲ: **ರಘುನಂದನ್** ಸಂಗ್ರಹಾನುವಾದ: **ಶೃಂಶಾನಾ, ವಸಂತರಾಜ ಎನ್.ಕೆ.**



ಈ ವರ್ಷದ ಬೇಸಗೆಯಲ್ಲಿ (ಜೂನ್ ಮತ್ತು ಜುಲೈ 2021 ರಲ್ಲಿ) ವಿಶ್ವದ ಹಲವು ಭಾಗಗಳಲ್ಲಿ ಅತಿವೃಷ್ಟಿ, ಉಷ್ಣ–ಅಲೆ (ಹೀಟ್ ವೇವ್)ಮುಂತಾದ ಅಭೂತಪೂರ್ವ ಪ್ರಮಾಣದಲ್ಲಿ ಹವಾಮಾನ ವೈಪರೀತ್ಯಗಳು ಕಂಡು ಬಂದಿವೆ.

ಇಂಗ್ಲೆಂಡ್

ಆಗ್ನೇಯ ಇಂಗ್ಲೆಂಡ್‌ನಲ್ಲಿ ಒಂದು ತಿಂಗಳಿನಲ್ಲಿ ಸುರಿಯುತ್ತಿದ್ದ 100 ಮಿ.ಮೀ. ಪ್ರಮಾಣದ ಮಳೆ ಕೇವಲ ಒಂದೆರಡು ಗಂಟೆಗಳಲ್ಲಿ ಸುರಿದಿದ್ದರಿಂದಾಗಿ ಜುಲೈ 12–15 ರ ಅವಧಿಯಲ್ಲಿ ಮಿಂಚಿನ ಪ್ರವಾಹ ಬಂದು ಅಪಾರ ಹಾನಿಯಾಯಿತು. ಲಂಡನ್ ಮಹಾನಗರವು, ತನ್ನ ಪ್ರಖ್ಯಾತ ಮೆಟ್ರೋ ರೈಲು ವ್ಯವಸ್ಥೆಯ ಹಲವು ನಿಲ್ದಾಣಗಳು ಒಳಗೊಂಡಂತೆ, ಪ್ರವಾಹಕ್ಕೆ ಸಿಲುಕಿತು. ಥೇಮ್ಸ್ ನದಿಯ ಪ್ರವಾಹ ಪ್ರದೇಶಗಳ ಮೇಲೆ ಲಂಡನ್ ನ ಬಹುಭಾಗ ನಿರ್ಮಾಣಗೊಂಡಿದ್ದು, ಸಿಮೆಂಟ್ ಮತ್ತು ಕಲ್ಲುಗೋಡೆಗಳಿಂದ ಈ ಪ್ರದೇಶದ ಅಂಚು ಮುಚ್ಚಿರುವುದರಿಂದ ನಗರದಲ್ಲಿನ ಹೆಚ್ಚುವರಿ ನೀರು ಹೊರಗೆ ಹೋಗಲು ಮಾರ್ಗವಿಲ್ಲದಂತಾಗಿದೆ. ವಿಕ್ಟೋರಿಯಾ ಕಾಲದ ಒಳಚರಂಡಿ ವ್ಯವಸ್ಥೆಯು ಇಂಗ್ಲೆಂಡ್‌ನಲ್ಲಿ ಈ ಹಿಂದೆ ಬೀಳುತ್ತಿದ್ದ ಸಾಧಾರಣ ಮಳೆ ನಿಭಾಯಿಸುವ ಸಾಮರ್ಥ್ಯ ಮಾತ್ರ ಹೊಂದಿದ್ದು, ಕಳೆದ ಕೆಲವು ವರ್ಷಗಳಿಂದ ಸುರಿಯುತ್ತಿರುವ ಅಗಾಧ ಸುರಿಮಳೆಯನ್ನು ತಡೆಯುವ ಸಾಮರ್ಥ್ಯ ಹೊಂದಿಲ್ಲ. ಮೇಲಾಗಿ ವಿಜ್ಞಾನಿಗಳು ಒಪ್ಪಿಕೊಳ್ಳುತ್ತಿರುವಂತೆ ಹವಾಮಾನ ವೈಪರೀತ್ಯವು ಇದಕ್ಕೆ ಕಾರಣವಾಗಿದ್ದು. ಆ ದೇಶ ಇದನ್ನು ಎದುರಿಸಲು ಯಾವುದೇ ಪೂರ್ವ ತಯಾರಿ ಮಾಡಿಕೊಂಡಿಲ್ಲ. ಈಗ ಹೊಸದಾಗಿ ನಿರ್ಮಿಸಲಾಗುತ್ತಿರುವ ದೊಡ್ಡದಾದ ಸುರಂಗ ಮಾರ್ಗದ ಒಳ ಚರಂಡಿ ವ್ಯವಸ್ಥೆಯೂ ಕೂಡಾ ಅಸಮರ್ಪಕವಾಗಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಉತ್ತರ ಮತ್ತು ಮಧ್ಯ ಯೂರೋಪ್

ಉತ್ತರ ಮತ್ತು ಮಧ್ಯ ಯೂರೋಪ್ ಸಹ ಇದೇ ಚಂಡಮಾರುತದಂತೆ ಬಂದ ಅಗಾಧ ಸುರಿಮಳೆ ತಡೆದುಕೊಳ್ಳಲಾಗದ ಒಳಚರಂಡಿ ವ್ಯವಸ್ಥೆಯಿಂದಾಗಿ ತೀವ್ರ ಘಾಸಿಗೊಳಗಾದವು. ಈ ಅವಧಿಯಲ್ಲಿ, ಕೆಲವೇ ಘಂಟೆಗಳಲ್ಲಿ 100 ಮಿ.ಮೀ. ರಿಂದ 200 ಮಿ.ಮೀ. ವರೆಗಿನ ಪ್ರಮಾಣದ ಮಳೆ ಸುರಿದು, ಜರ್ಮನಿ ಮತ್ತು ನೆರೆಯ ಕೆಳ ಪ್ರದೇಶದ ಬೆಲ್ಜಿಯಂ, ಹಾಲೆಂಡ್ ಮತ್ತು ಲಕ್ಸೆಂಬರ್ಗ್‌ನಲ್ಲಿ ಪ್ರವಾಹ ಬಂದಿತು. ವಿಶ್ವ ಉಷ್ಣಾಂಶದ ಹೆಚ್ಚಳದಿಂದಾಗಿ ಇಂತಹ ಸೂಪರ್ ಚಂಡಮಾರುತಗಳ ಮೂಲಕ ಅಗಾಧ ಮತ್ತು ಅತಿ ತೀವ್ರ ಸುರಿಮಳೆ ಮುಂದುವರೆಯುವ ಸಾಧ್ಯತೆ ಇದೆ. ಈ ಚಂಡಮಾರುತವು ಹೆಚ್ಚು ತೇವಾಂಶವನ್ನು ಮೋಡದೊಳಗೆ ಕೊಂಡೊಯ್ಯುತ್ತವೆ ಮತ್ತು ಕೆಲವೇ ಸಮಯದಲ್ಲಿ ಈ ಮೋಡಗಳು ಅಗಾಧ ನೀರನ್ನು ಹೊರಬಿಡುತ್ತವೆ. ನಂತರದಲ್ಲಿ ಭಾರೀ ಮಳೆ ಮತ್ತು ಪ್ರವಾಹದಿಂದ ಸ್ವಿಟ್ಜರ್ಲೆಂಡ್, ಆಸ್ಟ್ರೀಯಾ, ಉತ್ತರ ಇಟಲಿ, ಹಂಗೆರಿ ಮತ್ತು ಕ್ರೊಯೇಷಿಯಾ ದೇಶಗಳು ತತ್ತರಿಸಿದವು. ಹೆಚ್ಚು ತೊಂದರೆಗೊಳಗಾದ ಜರ್ಮನಿಯಲ್ಲಿ 184 ಜನರ ಸಾವು ಒಳಗೊಂಡಂತೆ, ಈ ದೇಶಗಳಲ್ಲಿ ಸುಮಾರು 224 ಜನ ಜೀವ ಕಳೆದುಕೊಂಡಿದ್ದಾರೆ ಎಂಬ ವರದಿಯಿದೆ. ಜನರಿಗೆ ತಪ್ಪಿಸಿಕೊಳ್ಳಲಾಗಲೀ ಅಥವಾ ಪೂರ್ವ ತಯಾರಿ ಮಾಡಿಕೊಳ್ಳಲಾಗಲೀ ಅವಕಾಶವೇ ನೀಡದಂತೆ ಬಂದ ಪ್ರವಾಹವು ಮೂಲಭೂತ ಸೌಕರ್ಯಗಳು, ಮನೆಗಳು, ತೋಟಗಳು ಮತ್ತು ವಿದ್ಯುತ್ ಸೌಕರ್ಯಗಳು ಎಲ್ಲವನ್ನು ಹಾನಿಗೊಳಿಸಿವೆ. ವಿಮಾ ಸಂಸ್ಥೆಗಳು ಸುಮಾರು 2.5 ಬಿಲಿಯನ್ ಯೂರೋ (ರೂ. 22,000 ಕೋಟಿ) ನಷ್ಟದ ಅಂದಾಜು ಮಾಡಿವೆ. ವಿಮೆ ಮಾಡಿಸಿರದ ನಷ್ಟದ ಪ್ರಮಾಣ ತಿಳಿದಿಲ್ಲ.

ಯುರೋಪ್‌ನ ಪ್ರಸಿದ್ಧ ಪ್ರವಾಹ (ವಿಶೇಷವಾಗಿ ಜರ್ಮನಿ ಹೆಮ್ಮೆ ಪಟ್ಟು ಕೊಳ್ಳುವ) ಮುನ್ನೆಚ್ಚರಿಕಾವ್ಯವಸ್ಥೆಯು ಉಪಯೋಗಕ್ಕೆ ಬರಲಿಲ್ಲ. ಕಾರಣವೆಂದರೆ ಭಾಗಶಃ ಈ ಎಚ್ಚರಿಕೆ ತಡವಾಗಿ ಬಂದಿದ್ದು ಮತ್ತು ಈ ಸೂಚನೆಗಳು ಕೇವಲ ಮಳೆಯ ಪ್ರಮಾಣದ ಬಗ್ಗೆ ಮಾತ್ರ ಹೇಳಿತ್ತೇ ವಿನಃ ಮುಳುಗಡೆಯ ಅಪಾಯ ಹೇಳದಿರುವುದು. ಇದರಿಂದಾಗಿ ಜನರಿಗೆ ಇದು ಅರ್ಥವಾಗಲಿಲ್ಲ ಮತ್ತು ತಯಾರಿ ಮಾಡಿಕೊಳ್ಳಲಾಗಲೀ ಅಥವಾ ಪಾರಾಗಲಾಗಲೀ ಇದು ಸಹಾಯ ಮಾಡಲಿಲ್ಲ.

ಈ ದೇಶಗಳ ಅಧಿಕಾರಿಗಳು ಮತ್ತು ಜನರು ತಯಾರಾಗಿರಲಿಲ್ಲ ಎನ್ನುವುದು ಇನ್ನಿತರ ಕೆಲವು ಅಂಶಗಳಿಂದಲೂ ತಿಳಿಯುತ್ತಿದೆ. ಹವಾಮಾನ ಬದಲಾವಣೆಯಲ್ಲಿ ಬೀಳಬಹುದಾದ ಭಾರೀ ಮಳೆಯ ಮುನ್ಸೂಚನೆಗೆ ಸ್ಪಂದಿಸಲು ಸಮರ್ಪಕ ಒಳಚರಂಡಿ ವ್ಯವಸ್ಥೆ ಮತ್ತು ನಗರ ಯೋಜನೆ ಇಲ್ಲದಿರುವುದು ಬೆಳಕಿಗೆ ಬಂತು. ಜೊತೆಗೆ ಜರ್ಮನಿಯ ಪ್ರವಾಹ ಮುನ್ಸೂಚನಾ ವ್ಯವಸ್ಥೆಯು ದೊಡ್ಡ ನದಿಗಳಲ್ಲಿ ನೀರು ಹರಿವಿನ ಮೇಲೆ ಆಧರಿಸಿವೆ. ಬ್ರಿಟನ್‌ನಂತೆ ಸಣ್ಣ ತೊರೆಗಳು ಮತ್ತು ಝರಿಗಳಲ್ಲಿ ಧಿಡೀರಾಗಿ ಬಂದ ಪ್ರವಾಹವು ಅನಿರೀಕ್ಷಿತವಾಗಿತ್ತು ಮತ್ತು ಅವನ್ನು ಈ ವ್ಯವಸ್ಥೆ ಪತ್ತೆ ಹಚ್ಚಲು ಅಸಮರ್ಥವಾಗಿತ್ತು. ಅದರಿಂದಾಗಿ ಅಪಾರ ಹಾನಿಯಾಯಿತು. ಭಾರತದಲ್ಲಿಯೂ ಈ ರೀತಿ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮೂರನೆಯದಾಗಿ ಯುರೋಪ್ ಖಂಡದಲ್ಲಿ ಈ ವರೆಗೂ ದಿಢೀರ್ ಅಬ್ಬರದ ಮಳೆಗೆ ಕಾರಣವಾಗುವ ಚಂಡಮಾರುತಗಳು ಅಪರೂಪವಾಗಿದ್ದವು. ಆದರೆ ಹೆಚ್ಚುತ್ತಿರುವ ಉಷ್ಣಾಂಶದಿಂದಾಗಿ ಇವುಗಳು ಇನ್ನೂ ಮುಂದೆ ಆಗಾಗ್ಗೆ ಸುಮಾರು 15 ಪಟ್ಟಷ್ಟು ಹೆಚ್ಚು ಸಂಭವಿಸಬಹುದು ಎಂಬ ಮುನ್ಸೂಚನೆ ಇದೆ. ಒಂದು ವೇಳೆ ಉತ್ತರ ಭೂಗೋಳದಲ್ಲಿ ಸುತ್ತುವ ಅತಿ ಎತ್ತರದ ವಾಯು, ಜೆಟ್ ಸ್ಟೀಮ್ ಏನಾದರೂ ಹವಾಮಾನ ಬದಲಾವಣೆಯಿಂದಾಗಿ ಮಂದವಾದರೆ, ಈ ಚಂಡಮಾರುತದ ಮಾದರಿ ಇನ್ನಷ್ಟು ಹಾನಿ ಮಾಡಬಲ್ಲದು.

ತನ್ನ ದೇಶದ ಬಹುಪಾಲು ಭಾಗಗಳನ್ನು ಸಮುದ್ರ ಮಟ್ಟದಿಂದ ಕೆಳಗೆ ಹೊಂದಿರುವ ಮತ್ತು ಪ್ರವಾಹವನ್ನು ನಿಭಾಯಿಸುವಲ್ಲಿ ದೀರ್ಘಕಾಲೀನ ಅನುಭವವಿರುವ ಹಾಲೆಂಡ್ ದೇಶ ಮಾತ್ರ ತನ್ನ ಪೂರ್ವ ತಯಾರಿಯಿಂದಾಗಿ ಈ ಹಾನಿಯಿಂದ ಪಾರಾಗಿದೆ. ಬೆಲ್ಜಿಯಂ ಮೂಲಕವೂ ಹಾದು ಹೋಗುವ ಮೆಯೂಸ್ ನದಿಯು 1993 ರಲ್ಲಿ ದಾಖಲಾಗಿದ್ದ ಪ್ರಮಾಣದ ಪ್ರವಾಹವನ್ನು ಮೀರಿದ ಪ್ರವಾಹ ಮಟ್ಟವನ್ನು ಈ ವರ್ಷ ತಲುಪಿದರೂ, ನಷ್ಟದ ಪ್ರಮಾಣ ಹಿಂದೆ ಆದದ್ದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿದೆ. ಹಾಲೆಂಡ್ ದೇಶವು “ನದಿಗಳಿಗೆ ಜಾಗ” ಎಂಬ ಪರಿಕಲ್ಪನೆಯನ್ನು ಬೆಳೆಸಿದ್ದು, ನದಿಗಳ ಹರಿವನ್ನು ಆಳಗೊಳಿಸಲಾಗಿದೆ ಮತ್ತು ವಿಸ್ತಾರಗೊಳಿಸಲಾಗಿದೆ ಹಾಗೂ ಪ್ರವಾಹ ಬಯಲು ಪ್ರದೇಶಗಳಲ್ಲಿ ಪ್ರವಾಹದ ನೀರು ಹರಿದು ಹೋಗಲು ನೆರವಾಗುವಂತೆ ಭೂಭಾಗಗಳನ್ನು ಮೀಸಲಿಡಲಾಗಿದೆ.

ದಕ್ಷಿಣ ಯೂರೋಪ್

ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ, ದಕ್ಷಿಣ ಯುರೋಪ್ ದೇಶಗಳಿಂದ ಸ್ಪೇನ್, ಮತ್ತು ಪ್ರಮುಖವಾಗಿ ಮೆಡಿಟರೇನಿಯನ್ ಗೆ ತಗುಲಿಕೊಂಡಿರುವ ದೇಶಗಳು ಅಪಾಯಕಾರಿ ಉಷ್ಣ–ಅಲೆಯನ್ನು (ಹೀಟ್ ವೇವ್) ಅನುಭವಿಸುತ್ತಿದ್ದು, ಈ ಒಣ ಹವೆಯು ವ್ಯಾಪಕವಾಗಿ ಕಾಡ್ಗಿಚ್ಚನ್ನು ಹೊತ್ತಿಸುತ್ತಿವೆ.

ಜುಲೈ ಮಧ್ಯದಲ್ಲಿ ಗ್ರೀಸ್‌ನಲ್ಲಿ 40 ಡಿಗ್ರಿ ಸೆಲ್ಸಿಯಸ್ (ಸೆ.) ಇದ್ದ ತಾಪಮಾನವು ಕೆಲವು ದಿನಗಳ ಹಿಂದೆ 47 ಡಿಗ್ರಿ ಸೆ. ಮುಟ್ಟಿತು. 1977 ರಲ್ಲಿ ಯುರೋಪ್‌ನಲ್ಲಿ ದಾಖಲಾಗಿದ್ದ ಅತ್ಯಂತ ಹೆಚ್ಚಿನ ತಾಪಮಾನಕ್ಕಿಂತ ಇದು ಕೇವಲ ಒಂದು ಡಿಗ್ರಿ ಕಡಿಮೆ. ಬೋಸ್ನೀಯಾ ಮತ್ತು ಹರ್ಜಗೋವಿನಾ, ಬಲ್ಗೇರಿಯಾ, ಸಬಿರ್ಯಾ, ದಕ್ಷಿಣ ಇಟಲಿ ಮತ್ತು ರೊಮೇನಿಯಾಗಳಲ್ಲೂ ಉಷ್ಣ–ಅಲೆಯ ಎಚ್ಚರಿಕೆ ನೀಡಲಾಗಿದೆ.

ಅಥೆನ್ಸ್ ನಗರವು ಕಾಡ್ಗಿಚ್ಚಿನಿಂದ ಸುತ್ತುವರೆದಿದ್ದು, ಹಲವು ದಿನಗಳ ಕಾಲ 78 ಕ್ಕೂ ಅಧಿಕ ಕಾಡ್ಗಿಚ್ಚು ವರದಿಯಾಗಿವೆ. ನಗರದ ಹಲವು ಉಪನಗರಗಳಲ್ಲಿ ಜನರನ್ನು ಖಾಲಿ ಮಾಡಿಸಲಾಗುತ್ತಿದೆ. ಆಗ್ನೇಯ ಟರ್ಕಿಯಲ್ಲೂ ಸಹ ಮಾರಕ ಮತ್ತು ತೀವ್ರವಾದ ಕಾಡ್ಗಿಚ್ಚು ಹರಡುತ್ತಿದ್ದು, ಪ್ರವಾಸಿ ರೆಸಾರ್ಟ್‌ಗಳನ್ನು ಖಾಲಿ ಮಾಡಿಸಲಾಗುತ್ತಿದೆ. ಇಟಲಿಯ ದ್ವೀಪವಾದ ಸಾರ್ಡಾನಿಯಾ, ಉತ್ತರ ಮೆಸಡೋನಿಯಾ, ಅಲ್ಬೇನಿಯಾ, ಸೈಪ್ರಸ್ ಮತ್ತು ಇತರ ಸ್ಥಳಗಳಲ್ಲೂ ಕಾಡ್ಗಿಚ್ಚು ಹರಡುತ್ತಿದ್ದು, ಇದರಿಂದ ಹೊಮ್ಮುತ್ತಿರುವ ಕಲುಷಿತ ಹೊಗೆಯು ಹಲವು ನೆರೆ ರಾಷ್ಟ್ರಗಳಾದ ಮೊರಾಕ್ಕೊ, ಅಲ್ಬೇನಿಯಾ ಮತ್ತು ಲೆಬನಾನ್ ಗಳಲ್ಲಿ

ಪುಟ 10 ಕ್ಕೆ


ಲಂಡನ್, ಇಂಗ್ಲೆಂಡ್


ಜರ್ಮನಿ

ಹವಾಮಾನ ವೈಪರೀತ್ಯಗಳ ಮತ್ತು ಐಪಿಸಿಸಿ ವರದಿಯ ಎಚ್ಚರಿಕೆಯ ಗಂಟೆ...........

ಪುಟ 9 ರಿಂದ



ಹಾನಿ ಉಂಟು ಮಾಡಿದೆ.

ಹಲವಾರು ಸಾವುಗಳಾಗಿವೆ ಮತ್ತು ಆಸ್ಪತ್ರೆಗಳಲ್ಲಿ ಉಷ್ಣ–ಅಲೆ ಮತ್ತು ಪರಿಸರ ಮಾಲಿನ್ಯ ಸಂಬಂಧಿಸಿದ ರೋಗಗಳಿಗೆ ಚಿಕಿತ್ಸೆ ಪಡೆಯುವವರ ಸಂಖ್ಯೆ ಹೆಚ್ಚುತ್ತಿದೆ. 2021 ರಲ್ಲಿ ಆಗಿರುವ ಬೆಂಕಿಯ ಹಾವಳಿ ಈ ಶತಮಾನದ ಸರಾಸರಿ ಪ್ರಮಾಣಕ್ಕಿಂತ ಮೂರು ಪಟ್ಟು ಹೆಚ್ಚಿವೆ. ಇದು ಹವಾಮಾನ ಬದಲಾವಣೆಯಿಂದಾಗಿಯೇ ಆಗಿವೆ, ಎಂದು ಕೆಲವು ಯುರೋಪಿಯನ್ ಏಜೆನ್ಸಿಗಳು ಹೇಳುತ್ತಿವೆ.

ಯು.ಎಸ್. ಮತ್ತು ಕೆನಡಾ

ಜೂನ್ ತಿಂಗಳ ಅಂತ್ಯದಿಂದ ಈವರೆಗೆ ಪಶ್ಚಿಮ ಯು.ಎಸ್.ಎ. ಮತ್ತು ಕೆನಡಾ ದೇಶಗಳು ಅತೀವ ಉಷ್ಣ ಹವೆ, ಬರಗಾಲ, ಒಣ ವಾತಾವರಣ ಮತ್ತು ಈ ಸ್ಥಿತಿಯಿಂದ ಉಂಟಾಗಿರುವ ಕಾಡ್ಗಿಚ್ಚುಗಳನ್ನು ಅನುಭವಿಸುತ್ತಿದೆ. ಈ ಉಷ್ಣ–ಅಲೆಯು ಉತ್ತರ ಕ್ಯಾಲಿಪೋರ್ನಿಯಾ ಇದಾಹೋ, ನವಾಡಾ, ಒರೆಗಾವ್ ಮತ್ತು ವಾಷಿಂಗ್ಟನ್ ರಾಜ್ಯಗಳು ಹಾಗೂ ಕೆನಡಾ ಪ್ರಾಂತ್ಯಗಳಾದ ಬ್ರಿಟಿಷ್ ಕೊಲಂಬಿಯಾ ಅಲ್ಬರ್ಟಾ, ಮೆನಿಟೋಬಾ, ವಾಯುವ್ಯ ಪ್ರದೇಶಗಳು ಮತ್ತು ಸಾಸ್ಕಾಚೆವಾನ್ ನಗರಗಳಲ್ಲಿ ಹರಡಿವೆ. ಹವಾಮಾನ ತಜ್ಞರ ಅನುಸಾರ ಈ ಇಡೀ ಪ್ರದೇಶವು ಅತ್ಯಂತ ಉಷ್ಣ–ಅಲೆಯ ಜೂನ್ ಮಾಸವನ್ನು ಎದುರಿಸಿದೆ.

ಲಾಸ್ ವೇಗಾಸ್, ನೆವಾಡಾ ಜುಲೈ ಮಧ್ಯದಲ್ಲಿ 47.2 ಡಿಗ್ರಿ ಸೆ. ತಾಪಮಾನವನ್ನು ಮುಟ್ಟಿವೆ. ಹಲವು ಇತರ ಪ್ರದೇಶಗಳೂ ಸಹ ದಾಖಲೆಯ ತಾಪಮಾನ ತಲುಪಿವೆ. ಕ್ಯಾಲಿಪೋರ್ನಿಯಾದ ಡೆತ್ ವ್ಯಾಲಿ 54.4 ಡಿಗ್ರಿ ಸೆ. ತಾಪಮಾನ ತಲುಪಿತ್ತು. ಇದು ಇಡೀ ಗ್ರಹದಲ್ಲಿಯೇ ದಾಖಲಾದ ಅತ್ಯಂತ ಹೆಚ್ಚಿನ ತಾಪಮಾನ ಎಂದು ಕೆಲವು ವಿಜ್ಞಾನಿಗಳು ಹೇಳಿದ್ದಾರೆ.

ನಿರ್ದಿಷ್ಟ ವಿಪರೀತ ಹವಾಮಾನದ ಘಟನೆಗಳನ್ನು ಹವಾಮಾನ ಬದಲಾವಣೆಗೆ ಹೊಂದಿಸುವುದು ಕಷ್ಟವಾದರೂ, ಯು.ಎಸ್., ಕೆನಡಾ ಮತ್ತು ಯುರೋಪ್‌ನ ಹವಾಮಾನ ಸಂಶೋಧಕರ ತಂಡವೊಂದು, "ಈ ಉಷ್ಣ–ಅಲೆಯನ್ನು ಹವಾಮಾನ ಬದಲಾವಣೆಯನ್ನು ಹೊರತು ಪಡಿಸಿ ವಿವರಿಸಲು ಸಾಧ್ಯವೇ ಇಲ್ಲ" ಎಂದಿದ್ದಾರೆ. ಇಂತಹ ಘಟನೆಗಳು ಸಾವಿರಾರು ವರ್ಷಗಳಲ್ಲಿ ಒಂದು ಬಾರಿ ನಡೆಯುವ ಸಾಧ್ಯತೆ ಇದೆ, ಆದರೆ ಇತ್ತೀಚಿನ ವರ್ಷಗಳಲ್ಲಿನ ಪ್ರವೃತ್ತಿ ನೋಡಿದರೆ ಇಂತಹ ಘಟನೆಗಳು ಈಗಿನ ಕಾಲಘಟ್ಟದಲ್ಲಿ ಆಗಾಗ ಘಟಿಸುವ ಎಲ್ಲಾ ಸಾಧ್ಯತೆಗಳಿವೆ ಎಂದಿದ್ದಾರೆ.

ಬ್ರಿಟಿಷ್ ಕೊಲಂಬಿಯಾದ ಲಿಟ್ಟಾನ್ ಗ್ರಾಮವು ಕೆನಡಾದ ಅತ್ಯಂತ ಗರಿಷ್ಠ ತಾಪಮಾನವಾದ 49.6 ಡಿಗ್ರಿ ಸೆ. ಮುಟ್ಟಿತ್ತು ಮತ್ತು ಕೆಲವು ದಿನಗಳ ನಂತರ ಕಾಡ್ಗಿಚ್ಚಿಗೆ ಸಿಲುಕಿ ಸಂಪೂರ್ಣ ನಾಶವಾಯಿತು. ಹಲವಾರು ಮನೆಗಳು ನಾಶವಾಗಿವೆ ಮತ್ತು ಹಲವು ಗ್ರಾಮಗಳು, ನಗರಗಳನ್ನು ಖಾಲಿ ಮಾಡಿಸಲಾಗಿದೆ. ರಸ್ತೆ, ರೈಲು ಮಾರ್ಗಗಳು, ಬೆಳೆಗಳು ನಾಶವಾಗಿವೆ ಮತ್ತು ಅಸಹಜ ಹಿಮ ಕರಗುವಿಕೆಯಿಂದಾಗಿ ಪ್ರವಾಹಗಳು ಬಂದಿವೆ.

ಈ ಪ್ರದೇಶಗಳಲ್ಲೂ ವ್ಯಾಪಕ ಸಾವು, ನೋವುಗಳಾಗಿವೆ. ಉಷ್ಣ–ಅಲೆ ಸಂಬಂಧ ಕಾಯಿಲೆಗಳಿಗೆ ಆಸ್ಪತ್ರೆಗಳಿಗೆ ಹೋಗುವವರ ಸಂಖ್ಯೆ ಹೆಚ್ಚುತ್ತಿದೆ. ಬ್ರಿಟಿಷ್ ಕೊಲಂಬಿಯಾ ಒಂದರಲ್ಲೇ ಜೂನ್ ಕೊನೆಯ ವಾರದಲ್ಲಿ ಸುಮಾರು 570 ಸಾವುಗಳಾಗಿವೆ. ಹಲವು ಯು.ಎಸ್. ರಾಜ್ಯಗಳಲ್ಲಿ ಉಷ್ಣ–ಅಲೆಯಿಂದಾಗಿ ನೂರಾರು ಸಾವುಗಳಾಗಿವೆ.

ಕೆನಡಾದ ಪ್ರದೇಶಗಳು ಗರಿಷ್ಠ ತಾಪಮಾನದ ಅಭ್ಯಾಸ ಇಲ್ಲದಿರುವುದರಿಂದ, ಹಲವಾರು ಮನೆಗಳಲ್ಲಿ ಹವಾ ನಿಯಂತ್ರಕಗಳು ಇಲ್ಲದಿರುವುದರಿಂದ ಮತ್ತು ಉಷ್ಣ–ಅಲೆ ಅಥವಾ ನಿರ್ಜಲೀಕರಣದ ವಿರುದ್ಧ ಮುನ್ನೆಚ್ಚರಿಕೆತೆಗೆದುಕೊಳ್ಳುವ ಬಗ್ಗೆ ಅರಿವಿಲ್ಲದ ಕಾರಣ, ಕೆನಡಾ ಪ್ರಾಯಶಃ ಅತಿ ಹೆಚ್ಚು ಉಷ್ಣ–ಅಲೆ ಸಂಬಂಧಿ ಸಾವುಗಳು ಮತ್ತು ಅಸ್ವಸ್ಥತೆಯಿಂದ ನರಳಿದೆ. ಕೆಲವು ವರ್ಷಗಳ ಹಿಂದೆ ಫ್ರಾನ್ಸ್‌ನಲ್ಲಿಯೂ ಇದೇ ರೀತಿಯ ಬೆಳವಣಿಗೆ ಆಗಿತ್ತು.

ಏಶ್ಯಾ

ಚೀನಾ ಸಹ ತೀವ್ರವಾದ ಮಳೆ ಮತ್ತು ಬೃಹತ್ ನಗರ ಕೇಂದ್ರಗಳೂ ಒಳಗೊಂಡಂತೆ, ಹಲವೆಡೆ ಪ್ರವಾಹದಿಂದ ತತ್ತರಿಸಿದೆ. ಇದು ಅಲ್ಲಿನ ಬೃಹತ್ ಅಣೆಕಟ್ಟುಗಳಿಗೆ ಅಪಾಯ ಒಡ್ಡಿದೆ. ಭಾರತ ದೇಶದ ತೀವ್ರವಾದ ಮಳೆ ಘಟನೆಗಳು ಮತ್ತು ಇದರಿಂದಾಗಿ ಭೂ ಕುಸಿತ, ಮಣ್ಣು ಕುಸಿತ, ಪ್ರವಾಹ ಮತ್ತು ನಗರ ಪ್ರದೇಶಗಳಲ್ಲಿ ನೀರು ನಿಲ್ಲುವುದು ಎಲ್ಲವನ್ನು, ಯಾವುದೇ ಪೂರ್ವ ತಯಾರಿಯ ಕೊರತೆಯಿಂದಾಗಿ, ಪುನಃ ಅನುಭವಿಸುತ್ತಲೇ ಇದೆ.

ಜೂನ್–ಜುಲೈ ಹವಾಮಾನ ವೈಪರೀತ್ಯಗಳು ಎಚ್ಚರಿಕೆಯ ಗಂಟೆ

ಈ ವರ್ಷದ ಬೇಸಿಗೆಯ ಹವಾಮಾನ ವೈಪರೀತ್ಯಗಳಿಗೆ ಹವಾಮಾನ ಬದಲಾವಣೆಗಳೇ ಕಾರಣವೆಂದು ವಿಜ್ಞಾನಿಗಳು ಬಹುತೇಕ ಒಮ್ಮತದಿಂದ ಹೇಳಿದ್ದಾರೆ. ಇದರೊಳಗೂ, ಎರಡು ಅಂಶಗಳು ಗಮನಿಸತಕ್ಕಂತಹವು. ಮೊದಲನೆಯದು ಹವಾಮಾನ ದುರಂತಗಳು ಮತ್ತದರ ಪರಿಣಾಮಗಳ ತೀವ್ರತೆ ಮತ್ತು ಉಗ್ರತೆ; ಎರಡನೆಯದು ತುಂಬಾ ಅಭಿವೃದ್ಧಿ ಹೊಂದಿದ ದೇಶಗಳಲ್ಲಾದ ನಷ್ಟ. ಈ ದೇಶಗಳು ಪೂರ್ವ ತಯಾರಿ ಮಾಡಿಕೊಳ್ಳದಿರುವುದು ಅಲ್ಲಿನ ಸರ್ಕಾರಗಳು ಅಲ್ಲಿನ ಸರ್ಕಾರಗಳು ಮತ್ತು ಜನತೆ, ಅಂತೆಯೇ ವಿಶ್ವದ ಉಳಿದ ಭಾಗಗಳಲ್ಲಿ ಅಚ್ಚರಿ ಮೂಡಿಸಿದೆ. ಬಹಳ ಕಾಲ ವಿಶೇಷವಾಗಿ ಯುರೋಪ್ ಮತ್ತು ಉತ್ತರ ಅಮೇರಿಕಾದ ಜನತೆ, ಹವಾಮಾನ ಪರಿಣಾಮಗಳು ಏನಿದ್ದರೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಮತ್ತು ಸಣ್ಣ ದ್ವೀಪಗಳ ಮೇಲೆ ಆಗುತ್ತದೆ ಮತ್ತು ತಾವು ಈ ಪರಿಣಾಮ ಎದುರಿಸಲು ಸಂಪೂರ್ಣ ಸಜ್ಜಾಗಿದ್ದೇವೆ ಎಂದು ಭಾವಿಸುತ್ತಿತ್ತು. ಈ ವರ್ಷದ ಜೂನ್–ಜುಲೈ ಹವಾಮಾನ ದುರಂತಗಳು ಇವರಿಗೆ ಒಂದು ಕಠೋರ ದಿಗ್ಭ್ರಮೆ ಮೂಡಿಸಿವೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸೇರಿದಂತ ಇಡೀ ಜಗತ್ತಿನಲ್ಲಿ ಎಚ್ಚರಿಕೆಯ ಗಂಟೆ ಬಾರಿಸಿವೆ. ಹವಾಮಾನ ವೈಪರೀತ್ಯಗಳಿಗೆ ಮಾನವ–ಕೃತ ಪರಿಸರ ಮಾಲಿನ್ಯ ಕಾರಣ ಎಂಬುದನ್ನು ಪ್ರಶ್ನಿಸುತ್ತಿರುವವರ ಬಾಯನ್ನು ಬಹುತೇಕ ಮುಚ್ಚಿಸಿವೆ.

ಐಪಿಸಿಸಿ ವರದಿಯ 'ರೆಡ್ ಅಲರ್ಟ್'

ಇದು ಸಾಲದೆಂಬಂತೆ ಕಳೆದ ವಾರ ವಿಶ್ವಸಂಸ್ಥೆಯ ಐಪಿಸಿಸಿ (Inter-governmental Panel on Climate Change – ಹವಾಮಾನ ಬದಲಾವಣೆಯ ಕುರಿತ ಅಂತರ ಸರಕಾರ ತಜ್ಞರ ತಂಡ) ಯ ಹವಾಮಾನ ಬದಲಾವಣೆಯ ಕುರಿತ ಆರನೇ ಸುತ್ತಿನ ಮೊದಲ ವರದಿ (IPCC/AR6/WG-1) ಹವಾಮಾನ ವೈಪರೀತ್ಯಗಳ ಪರಿಸ್ಥಿತಿಯ ಕುರಿತು ಇನ್ನೊಂದು ಎಚ್ಚರಿಕೆಯ ಗಂಟೆ ಬಾರಿಸಿದೆ. ಜಗತ್ತಿನ ಮಾಧ್ಯಮಗಳು ಇದನ್ನು ಹವಾಮಾನ ವೈಪರೀತ್ಯಗಳ 'ರೆಡ್ ಅಲರ್ಟ್' ಎಂದು ಕರೆಯುವ ಮೂಲಕ 'ಆಘಾತ' ವ್ಯಕ್ತಪಡಿಸಿವೆ. ಇತ್ತೀಚಿನ ಎಲ್ಲ ಐಪಿಸಿಸಿ ವರದಿಗಳು ಈ ಕುರಿತು ಗಂಭೀರ ಆತಂಕ ವ್ಯಕ್ತಪಡಿಸುತ್ತಲೇ ಬಂದಿರುವ ಹಿನ್ನೆಲೆಯಲ್ಲಿ, ಈ ವರದಿಯಲ್ಲಿ ಅಂತಹ 'ಆಘಾತ'ಕಾರಿಯಾದ್ದು ಏನಿದೆ?

ವರದಿಯ ಕೆಲವು ಮುಖ್ಯಾಂಶಗಳು ಹೀಗಿವೆ:

- ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಮತ್ತು ಹಸಿರುಮನೆ ಅನಿಲಗಳ ಹೆಚ್ಚಿದ ಸಾಂದ್ರತೆ ಮಾನವ–ಚಟುವಟಿಕೆಯ (ಅದರಲ್ಲೂ ಕೈಗಾರಿಕಾ ಕ್ರಾಂತಿಯ ನಂತರದ) ನೇರ ಪರಿಣಾಮ.
- ಜಾಗತಿಕ ಸರಾಸರಿ ಉಷ್ಣತೆ 2011–20 ಅವಧಿಯಲ್ಲಿ 1850–1900 ಅವಧಿಗಿಂತ 1.09 ಡಿಗ್ರಿ ಸೆ. ಹೆಚ್ಚಿದೆ. ಭೂ ಉಷ್ಣತೆ ಸಮುದ್ರದ ಉಷ್ಣತೆಗಿಂತ 0.5 ಡಿಗ್ರಿ ಸೆ. ಹೆಚ್ಚಿದೆ. ಇದರ ಪರಿಣಾಮವೇ 2021 ಜೂನ್–ಜುಲೈ ನ ಹವಾಮಾನ ವೈಪರೀತ್ಯಗಳು ಎಂಬುದನ್ನು ನೋಡಿದರೆ, 2 ಡಿಗ್ರಿ ಸೆ. ಹೆಚ್ಚಳ ಏನು ಅನಾಹುತ ಮಾಡಬಹುದು ಎಂಬುದನ್ನು ಊಹಿಸಬಹುದು. 1970–2020 ಅವಧಿಯ ಉಷ್ಣತೆಯ ಹೆಚ್ಚಳ ಹಿಂದಿನ 6 ಸಾವಿರ ವರ್ಷಗಳಲ್ಲಿ ಯಾವುದೇ 50 ವರ್ಷದ ಉಷ್ಣತೆ ಹೆಚ್ಚಳಕ್ಕಿಂತ ಹೆಚ್ಚು. ಪ್ಯಾರೀಸ್ ಒಪ್ಪಂದದ ಈಗಿನ ಎಲ್ಲ ಕ್ರಮಗಳನ್ನು ಕೈಗೊಂಡರೂ 2100ರ ಹೊತ್ತಿಗೆ, 1.5–2 ಡಿಗ್ರಿ ಸೆ ಈ ಎರಡೂ ಯೋಜಿತ ಮಿತಿಗಳನ್ನು ದಾಟಿ 2.1–3.5 ಡಿಗ್ರಿ ಸೆ ಉಷ್ಣತೆ ಹೆಚ್ಚಳವಾಗಲಿದೆ.
- ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಸಾಂದ್ರತೆಯ ಮಟ್ಟ ಅಪಾಯಕಾರಿ ಮಟ್ಟವಾದ 440 ಪಿ.ಪಿ.ಎಂ ದಲ್ಲಿದೆ. ಇದೇ ರೀತಿಯಲ್ಲಿ ಹಸಿರುಮನೆ ಅನಿಲಗಳಾದ ಮೀಥೇನ್ (ಮಾನವ ಮತ್ತು ಪ್ರಾಣಿ ತ್ಯಾಜ್ಯಗಳ ಉತ್ಪನ್ನ) ಮತ್ತು ನೈಟ್ರಸ್ ಆಕ್ಸೈಡ್ (ಕೃಷಿ, ಕಲ್ಲಿದ್ದಲು ಸುಡುವಿಕೆಯ ಉತ್ಪನ್ನ) ಸಹ ಕಳೆದ 20 ಲಕ್ಷ ವರ್ಷಗಳಲ್ಲಿ ಅತಿ ಹೆಚ್ಚು ಮಟ್ಟದಲ್ಲಿವೆ. ಈ ಅನಿಲಗಳನ್ನು ಕಂತಿಸುವ ಭೂಮಿ, ಅರಣ್ಯ ಮತ್ತು ಸಮುದ್ರ ಗಳ ಸಾಮರ್ಥ್ಯಗಳು ಸಹ ಕಡಿಮೆಯಾಗಲಿದ್ದು ಇವು ಇನ್ನಷ್ಟು ಅಪಾಯಕಾರಿ ಮಟ್ಟ ಮುಟ್ಟಲಿವೆ.
- ಉತ್ತರ ಧ್ರುವದ ಹಿಮನದಿಗಳು, ಹಿಮಗಡ್ಡೆಗಳ ಸತತ ಕರಗುವಿಕೆಯು ಮುಂದುವರೆದಿದೆ. ಸರಾಸರಿ ಸಮುದ್ರ ಮಟ್ಟ 1900ರಿಂದ ವಾರ್ಷಿಕ 0.2 ಮೀಟರ್ ನಷ್ಟು ಏರುತ್ತಿದ್ದು, ಅದು 1970ರ ಹೊತ್ತಿಗೆ 1.3 ಮೀಟರ್ ಮಟ್ಟ ಮುಟ್ಟಿದ್ದು, 1970–2006 ಅವಧಿಯಲ್ಲಿ 1.9 ಮೀಟರ್ ಮತ್ತು ಈಗ 3.7 ಮೀಟರ್ ವಾರ್ಷಿಕ ಮಟ್ಟ ಮುಟ್ಟಿದೆ.
- 1950ರಿಂದ ಉಷ್ಣ–ಅಲೆ ಮತ್ತು ಉಷ್ಣತೆಯಲ್ಲಿ ಭಾರೀ ವ್ಯತ್ಯಯಗಳು ಮತ್ತು ಬರಗಾಲಗಳು (ವ್ಯಾಪಕ ನಗರೀಕರಣದಿಂದಲೂ ಉಲ್ಬಣಗೊಂಡು)ಹೆಚ್ಚು ಆಗಾಗ್ಗೆ ಮತ್ತು ತೀವ್ರತೆಯೊಂದಿಗೆ ಬರುತ್ತಿವೆ. ಅದೇ ರೀತಿಯಲ್ಲಿ ಅತಿವೃಷ್ಟಿ ಸಹ ಹೆಚ್ಚು ಆಗಾಗ್ಗೆ ಮತ್ತು ತೀವ್ರತೆಯೊಂದಿಗೆ ಬರುತ್ತಿವೆ. ಉಷ್ಣವಲಯದ ಚಂಡಮಾರುಗಳ ಸಂಖ್ಯೆ ಮತ್ತು ತೀವ್ರತೆ ಸಹ ಹೆಚ್ಚುತ್ತಿವೆ. ಸಮುದ್ರ ಮಟ್ಟದ ಏರಿಕೆಯಿಂದಾಗಿ ಹಲವು ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರತೆ ಹೆಚ್ಚಿವೆ. ಮುಂದೆ ಹಲವು ಸಣ್ಣ ದ್ವೀಪಗಳು ಮತ್ತು ಕರಾವಳಿ ಪ್ರದೇಶಗಳಲ್ಲಿ ಜೀವ ಮತ್ತು ಜೀವನೋಪಾಯಗಳಿಗೆ ತೀವ್ರ ಅಪಾಯ ಕಾದಿದೆ.
- ಒಟ್ಟು ಸೊನ್ನೆ ಹೊರಸೂಸುವಿಕೆಯನ್ನು (ಅಂದರೆ ಒಟ್ಟು ಅನಿಲ ಹೊರಸೂಸುವಿಕೆಯು ಅರಣ್ಯ–ಸಮುದ್ರ ಮುಂತಾದ ಭೂಭಾಗಗಳ ಕಂತುವಿಕೆಯ ಸಾಮರ್ಥ್ಯಕ್ಕೆ ಸಮನಾದಾಗ) ಮತ್ತು ಸೊನ್ನೆ ಉಷ್ಣತೆ ಹೆಚ್ಚಳವನ್ನು ಸಾಧಿಸಿದ (ಈಗ ಇದಕ್ಕೆ ಜಾಗತಿಕ ಗುರಿ 2050ರ ಹೊತ್ತಿಗೆ ಇದೆ) ಮೇಲೂ, ಈಗಾಗಲೇ ಇರುವ ಹೆಚ್ಚಿದ ಉಷ್ಣತೆಯ ಪರಿಣಾಮಗಳು ಇನ್ನೂ 100 ವರ್ಷ ಮುಂದುವರೆಯುತ್ತವೆ. ಇದನ್ನು ತಡೆಯಬೇಕಾದರೆ ತಂತ್ರಜ್ಞಾನದ ಮೂಲಕ ನಕಾರಾತ್ಮಕ ಹೊರಸೂಸುವಿಕೆಯನ್ನು (ಅಂದರೆ ಕಂತುವಿಕೆಯ ಸಾಮರ್ಥ್ಯ ಹೊರಸೂಸುವಿಕೆಯ ಮಟ್ಟಕ್ಕಿಂತ ಹೆಚ್ಚಿದ್ದು ಈಗಿನ ಹೊರಸೂಸುವಿಕೆಯ ಒಂದು ಭಾಗವನ್ನು ಕಂತಿಸುತ್ತಾ ಹೋಗಬೇಕು) ಸಾಧಿಸಬೇಕು. ಅಂದರೆ 1.5 ಮತ್ತು 2 ಡಿಗ್ರಿ ಸೆ ಮಿತಿಯನ್ನು ಒಂದು ಬಾರಿ ಮೀರಿದರೆ ಸರಿಪಡಿಸಲಾಗದ ಹಲವು ಪ್ರಾಕೃತಿಕ ದುಷ್ಪರಿಣಾಮಗಳು ಉಂಟಾಗುತ್ತವೆ.

ಇವುಗಳಲ್ಲಿ ಹೆಚ್ಚಿನವು ಹಿಂದಿನ ವರದಿಗಳಲ್ಲಿ ಸ್ಥೂಲ ರೂಪದಲ್ಲಿ ಬಂದಿವೆ. ಆದರೆ ಈ ಬಾರಿಯ ವರದಿಯ ವಿಶೇಷತೆ ಎಂದರೆ ಇವೆಲ್ಲವನ್ನು ಇನ್ನಷ್ಟು ಖಚಿತವಾಗಿ ನಿಖರವಾಗಿ, ಆತ್ಮವಿಶ್ವಾಸದಿಂದ ಹೇಳಲಾಗಿದೆ. ಇವು ಹೆಚ್ಚೆಚ್ಚಾಗಿ ಲಭ್ಯವಾಗುತ್ತಿರುವ ಪುರಾವೆಗಳು, ವಿಶ್ಲೇಷಣಾ ಉಪಕರಣಗಳು ಮತ್ತು ಹೆಚ್ಚು ಉತ್ತಮಪಡಿಸಿದ ನಿಖರವಾದ ಗಣಿತಾತ್ಮಕ ಮಾದರಿಗಳ ಮೇಲೆ ಆಧರಿತವಾಗಿವೆ. ಐಪಿಸಿಸಿ ವರದಿಗಳು ಮೂಲತಃ ವೈಜ್ಞಾನಿಕ ವರದಿಗಳಾಗಿದ್ದರಿಂದ ಹಲವು ಅಭಿಪ್ರಾಯಗಳಲ್ಲಿ ಒಮ್ಮತ ಮೂಡದೆ ಅಥವಾ ಖಚಿತ, ನಿಖರ ಆಧಾರ ಇಲ್ಲದ ಯಾವುದನ್ನೂ ಹೇಳಲಾಗುವುದಿಲ್ಲ ಅಥವಾ ಮುಂದಣ ಆತಂಕಕಾರಿ ಸಾಧ್ಯತೆಗಳನ್ನು ಹೇಳಿದಾಗಲೂ ಅದರ ನಿಖರತೆ, ಖಚಿತತೆಗಳ ಮಟ್ಟವನ್ನು ಹೇಳಲಾಗುತ್ತದೆ. ಇದು (ಸರಕಾರಗಳು, ರಾಜಕೀಯ ನಾಯಕರು ಸೇರಿದಂತೆ) ಹಲವರು ಈ ವರದಿಗಳನ್ನು ಅಲಕ್ಷಿಸಲು ಅಥವಾ ನಿರಾಕರಿಸಲು ಆಸ್ಪದ ಮಾಡಿಕೊಟ್ಟಿತ್ತು. ಆದರೆ ಈ ವರದಿಯ ನಿಖರತೆ, ಖಚಿತತೆಗಳ ಮಟ್ಟ ಗಮನಾರ್ಹವಾಗಿ ಹೆಚ್ಚಿರುವುದು ಮತ್ತು ಇತ್ತೀಚೆಗೆ ಪ್ರಾಯೋಗಿಕವಾಗಿ ಕಂಡು ಬಂದಿರುವ ಭೀಕರ ಹವಾಮಾನ ವೈಪರೀತ್ಯಗಳು, ಹಿಂದಿನ ಐಪಿಸಿಸಿ ವರದಿಗಳು ಯಾವಾಗಲೂ ಹೇಳುತ್ತಿದ್ದ 'ಗಂಭೀರ ಆತಂಕ'ದಿಂದ ಬಹುಶಃ ಈ ವರದಿಯನ್ನು "ಆಘಾತ"ಕಾರಿ 'ರೆಡ್ ಅಲರ್ಟ್' ಮಟ್ಟಕ್ಕೆ ಏರಿಸಿವೆ.

ಗ್ಲಾಸ್ಗೋ ಶೃಂಗಸಭೆಯಲ್ಲಿ ಏನು ನಿರೀಕ್ಷಿಸಬಹುದು?

ಇನ್ನೊಂದು ಆಯಾಮದಲ್ಲಿ ಈ ಐಪಿಸಿಸಿ ವರದಿಯು ಸ್ಪಷ್ಟತೆಯನ್ನು ಕೊಟ್ಟಿದೆ. ಈ ವರದಿಯಲ್ಲಿ ಈಗಾಗಲೇ ವಾತಾವರಣದಲ್ಲಿರುವ ಅನಿಲಗಳ ಸಾಂದ್ರತೆಯ ಮಟ್ಟ ಮತ್ತು ಒಂದು ನಿಗದಿತ ಉಷ್ಣತೆ ದಾಟದಂತೆ ಜಾಗತಿಕ ಹೊರಸೂಸುವಿಕೆಗೆ ಮಿತಿ ಹಾಕುವ ಬಜೆಟ್ ಗಳ ಅಳೆಯುವಿಕೆಯ ಬಗ್ಗೆ ಹೆಚ್ಚಿನ ಸ್ಪಷ್ಟತೆ ಹೊಂದಿದೆ. ಇದರಿಂದಾಗಿ ದೇಶಗಳ ಹೊರಸೂಸುವಿಕೆಯ ವಾರ್ಷಿಕ ಬಜೆಟ್ ಗಳನ್ನು ನಿರ್ಧರಿಸುವಾಗ ಈಗಿನ ವಾತಾವರಣದಲ್ಲಿ ಅನಿಲಗಳ ಸಾಂದ್ರತೆಗೆ ಆ ದೇಶದ ಕೊಡುಗೆಯನ್ನೂ ತೆಗೆದುಕೊಳ್ಳಬೇಕೆಂದು ಎಂಬುದು ಹೊಮ್ಮುತ್ತದೆ. ಈ ವರೆಗೆ ಈ ವಿಧಾನವನ್ನು ಅನುಸರಿಸಬೇಕೆಂದು ವಾದ ಮಾಡುತ್ತಿದ್ದ ಮೂರನೇ ಜಗತ್ತಿನ ವಿಜ್ಞಾನಿಗಳು, ಜಾಗತಿಕವಾಗಿಯೂ ಮೂರನೇ ಜಗತ್ತಿನ ಜನವಿಜ್ಞಾನ ಚಳುವಳಿಯ ತಜ್ಞರುಗಳ ಅಭಿಪ್ರಾಯವನ್ನು ವರದಿಯು ಅನುಮೋದಿಸಿದೆ.

ಅಭಿವೃದ್ಧ ದೇಶಗಳ ಹಿತಾಸಕ್ತಿಗಳು ಈ ವೈಜ್ಞಾನಿಕವಾದ ನ್ಯಾಯಯುತವಾದ ವಿಧಾನವನ್ನು ಈ ವರೆಗೆ ನಿರಾಕರಿಸಿದ್ದವು. ಕೈಗಾರಿಕಾ ಕ್ರಾಂತಿಯಿಂದ ಈವರೆಗಿನ ಒಟ್ಟು ಜಾಗತಿಕ ಹೊರಸೂಸುವಿಕೆಯಲ್ಲಿ ಶೇ. 70 ಪಾಲು ಅಭಿವೃದ್ಧ ದೇಶಗಳ ಪಾಲು ಎಂದು ಒಪ್ಪಿಕೊಳ್ಳಲಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಅಭಿವೃದ್ಧಿಯ ಮಟ್ಟದಲ್ಲಿ ಕೆಳಹಂತಗಳಲ್ಲಿರುವ ದೇಶಗಳ ಮೇಲೆ ಸಮಾನತೆಯ ಹೆಸರಲ್ಲಿ ಹೊರಸೂಸುವಿಕೆಯ ಕಡಿತದ ಹೆಚ್ಚಿನ ಹೊರೆ ಹಾಕುವುದು ಪ್ರಾಯೋಗಿಕವಲ್ಲ ಎಂದು ವರದಿಯಿಂದ ಹೊಮ್ಮುತ್ತದೆ. ಆದ್ದರಿಂದ ಪ್ಯಾರೀಸ್ ಒಪ್ಪಂದದಲ್ಲಿ 2050ರ ಹೊತ್ತಿಗೆ ಎಲ್ಲ ದೇಶಗಳು ಸೊನ್ನೆ ಒಟ್ಟು ಹೊರಸೂಸುವಿಕೆಯನ್ನು ಸಾಧಿಸಬೇಕೆಂಬ ಷರತ್ತನ್ನು ಬದಲಾಯಿಸಬೇಕು. ಬದಲಾಗಿ, ಅಭಿವೃದ್ಧ ದೇಶಗಳು 2035ರ ಹೊತ್ತಿಗೆ ಸೊನ್ನೆ ಒಟ್ಟು ಹೊರಸೂಸುವಿಕೆಯನ್ನು ಸಾಧಿಸಬೇಕು. ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ತಾಂತ್ರಿಕ ಮತ್ತು ಆರ್ಥಿಕ ನೆರವಿನೊಂದಿಗೆ 2050ರ ವರೆಗೆ ಸಮಯಾವಕಾಶ ನೀಡಬೇಕು, ಎಂಬ ವಾದಕ್ಕೆ ಸಹ ಇದು ಪುಷ್ಟಿ ನೀಡುತ್ತದೆ. ಅಭಿವೃದ್ಧ ದೇಶಗಳ ಸರಕಾರಗಳು ಮತ್ತು ಜನತೆ ಈ ಎರಡು ಎಚ್ಚರಿಕೆ ಗಂಟೆಗಳ ಹಿನ್ನೆಲೆಯಲ್ಲಿ ಈ ವಾದಕ್ಕೆ ಕಿವಿಕೊಟ್ಟು ಮುಂಬರುವ ಗ್ಲಾಸ್ಗೋ ಹವಾಮಾನ ಬದಲಾವಣೆ (UNFCCS) ಶೃಂಗಸಭೆಯಲ್ಲಿ ಪ್ರಾಯೋಗಿಕವಾದ ವೈಜ್ಞಾನಿಕವಾದ ನ್ಯಾಯಯುತವಾದ ಹೊರಸೂಸುವಿಕೆ ಕಡಿತ ನೀತಿ ಕುರಿತು ಒಪ್ಪಂದಕ್ಕೆ ಹಾದಿ ಮಾಡಿಕೊಡಬಹುದೆ?

ಭಾರತದಲ್ಲಿ ಮುಂದೇನು?

ಭಾರತದಲ್ಲಿ ಹೆಚ್ಚು ಆಗಾಗ್ಗೆ ಮತ್ತು ತೀವ್ರತೆಯೊಂದಿಗೆ ಅತಿವೃಷ್ಟಿಯ ಘಟನೆಗಳು ನಡೆಯುತ್ತಲೇ ಇವೆ. ಆದರೆ ಅಂತರರಾಷ್ಟ್ರೀಯ ಸಂವಾದಕರೊಂದಿಗೆ ಹವಮಾನ ಶೃಂಗ ಸಭೆಗಳಲ್ಲಿ ಅಪರೂಪಕ್ಕೆಂಬಂತೆ ಹೊರಸೂಸುವಿಕೆಯನ್ನು ನಿಯಂತ್ರಿಸುವ ಕುರಿತು ಮಾತನಾಡುವುದನ್ನು ಹೊರತುಪಡಿಸಿ ಕೇಂದ್ರ ಸರ್ಕಾರವು ನಮ್ಮ ದೇಶದಲ್ಲಿ ಹವಾಮಾನಬದಲಾವಣೆಗೆ ತಯರಾಗಲು ಮತ್ತು ಇದರ ವಿರುದ್ಧ ಸೆಣಸಲು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಗ್ಲಾಸ್ಗೋದಲ್ಲಿ ನಡೆಯುವ ಗಿಓಈಅಅಖ ಶೃಂಗಸಭೆಗೆ ಪೂರ್ವ ತಯಾರಿಯಾಗಿ ಯು.ಕೆ. ಆಯೋಜಿಸಿದ್ದ ಅತ್ಯಂತ ಪ್ರಮುಖ ಭೌತಿಕ ಸಭೆಯಲ್ಲಿ ಕೇಂದ್ರ ಸರ್ಕಾರ ಭಾಗವಹಿಸಲಿಲ್ಲ. ನಮ್ಮ ಸರ್ಕಾರವು ಅತ್ತ, ಹೆಚ್ಚುತ್ತಿರುವ ತಾಪಮಾನ ತಡೆಯಲು ನಡೆಯುತ್ತಿರುವ ಜಾಗತಿಕ ಪ್ರಯತ್ನಗಳ ಬಗ್ಗೆ ಕಾಳಜಿ ಹೊಂದಿಲ್ಲ ಮತ್ತು ಇತ್ತ ನಮ್ಮ ದೇಶದಲ್ಲಿ ಆಗಿರುವ ವಿನಾಶಕಾರಿ ಪರಿಣಾಮಗಳ ಬಗ್ಗೆಯೂ ಕಾಳಜಿ ಹೊಂದಿಲ್ಲದಿರುವಂತಿದೆ. ಹವಮಾನ ಪರಿಣಾಮಗಳಿಂದ ಯೂರೋಪ ಮತ್ತು ಉತ್ತರ ಅಮೇರಿಕಾ ವನ್ನು ನಿಷ್ಕ್ರಿಯತೆಯಿಂದ ಹೊರ ಬರುವಂತೆ ಅಲುಗಾಡಿಸಲಾಯಿತು. ಮೋದಿ ಸರ್ಕಾರ ಏಳುವುದು ಯಾವಾಗ? •

ಕಾರ್ಮಿಕ ಆಂದೋಲನದ ಮುಂದಿರುವ ಐತಿಹಾಸಿಕ ಜವಾಬ್ದಾರಿ



ಭಾರತದ ಟ್ರೇಡ್ ಯೂನಿಯನ್ ಆಂದೋಲನವು ಎಲ್ಲಾ ವಿಧಗಳ ಕಾರ್ಮಿಕರನ್ನು, ಅವರ ನಂಬಿಕೆಗಳೇನೇ ಇದ್ದರೂ, ಒಂದುಗೂಡಿಸುವ ಮತ್ತು ಸಜ್ಜುಗೊಳಿಸುವ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ ಮತ್ತು ಅವರನ್ನು ಶೋಷಿಸುವ ವ್ಯವಸ್ಥೆಯನ್ನೇ ಪರಿವರ್ತಿಸುವ ಹೋರಾಟದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ವರ್ಗವನ್ನು ಸೇರಿಕೊಳ್ಳಬೇಕಿದೆ.

ಮಾರ್ಕ್ಸ್ ಹೇಳಿರುವಂತೆ, "ವರ್ಗ ವೈಷಮ್ಯವನ್ನು ಶಮನಗೊಳಿಸುವುದಲ್ಲ, ವರ್ಗವನ್ನೇ ನಿರ್ಮೂಲನೆ ಮಾಡುವುದು; ಅಸ್ತಿತ್ವದಲ್ಲಿರುವ ಸಮಾಜವನ್ನು ಸುಧಾರಿಸುವುದಲ್ಲ, ಹೊಸದೊಂದರ ಅಡಿಪಾಯ ಹಾಕುವುದು"!

ಮೂಲ ಲೇಖಕರು: **ಸುಕೋಮಲ್ ಸೇನ್**
ಸಂಗ್ರಹ-ಅನುವಾದ: ಸಿ.ಆರ್ ಶಾನಭಾಗ

ಕಾರ್ಮಿಕ ಸಂಘಗಳ ಜಂಟಿ ಸಮಾವೇಶ 15 ಜುಲೈ, 2010 ರಂದು ನವದೆಹಲಿಯ ಮಾವಲಂಕರ ಹಾಲ್ ನಲ್ಲಿ ನಡೆದು, 5-ಅಂಶಗಳ ಬೇಡಿಕೆಗಳ ಸನ್ನದಿನ ಮೇಲೆ ರಾಷ್ಟ್ರವ್ಯಾಪಿ ಐಕ್ಯ ಮುಷ್ಕರಕ್ಕೆ ಕರೆ ನೀಡಿತು.

ಐಎನ್‌ಟಿಯುಸಿಯ ಅಧ್ಯಕ್ಷ ಸಂಜೀವ್ ರೆಡ್ಡಿ ಅವರು ಸಮಾವೇಶ ಅಂಗೀಕರಿಸಬೇಕಾದ ಘೋಷಣೆಯನ್ನು ಮಂಡಿಸಿ, ಸರ್ಕಾರದ ಆರ್ಥಿಕ ಮತ್ತು ಕಾರ್ಮಿಕ ನೀತಿಗಳು ಎಲ್ಲಾ ಕ್ಷೇತ್ರಗಳ ಕಾರ್ಮಿಕರು ಮತ್ತು ನೌಕರರಿಗೆ ತೀವ್ರವಾಗಿ ನೋವುಂಟು ಮಾಡುತ್ತಿವೆ ಎಂದು ವಿವರಿಸಿದರು. ಐಎನ್‌ಟಿಯುಸಿ ನಾಯಕತ್ವವು ಪದೇ ಪದೇ ಪ್ರಧಾನಿಯವರನ್ನು ಮತ್ತು ಅವರ ಸಂಪುಟದ ಇತರ ಮಂತ್ರಿಗಳನ್ನು ಭೇಟಿಯಾಗಿ ಕೆಲಸಗಾರರ ಹಿತಾಸಕ್ತಿಗೆ ವಿರುದ್ಧವಾಗಿರುವ ನೀತಿಗಳನ್ನು ಬದಲಾಯಿಸುವಂತೆ ವಿನಂತಿಸಿಕೊಂಡಿದ್ದನ್ನು, ಆದರೆ ಅದು ವ್ಯರ್ಥವಾಗಿದ್ದನ್ನು ವಿವರಿಸಿದರು. ಆದ್ದರಿಂದ, ಕಾರ್ಮಿಕರು ಮತ್ತು ಬಡ ಜನರಿಗೆ ಆರ್ಥಿಕ ಪರಿಹಾರ ದೊರಕಿಸಲು ಮತ್ತು ಕಾರ್ಮಿಕರ ಹಕ್ಕುಗಳನ್ನು ನಿಗ್ರಹಿಸದಂತೆ ಸರ್ಕಾರವನ್ನು ಪ್ರಜ್ಞೆಗೆ ತರಲು, ಈ ಪರಿಸ್ಥಿತಿಯಲ್ಲಿ ಕಾರ್ಮಿಕ ಸಂಘಗಳಿಗೆ ಉಳಿದಿರುವ ಏಕೈಕ ಮಾರ್ಗವೆಂದರೆ ದೇಶಾದ್ಯಂತ ಐಕ್ಯ ಮುಷ್ಕರವನ್ನು ಆಯೋಜಿಸುವುದು ಎನ್ನುತ್ತ, ಈ ಮುಷ್ಕರಕ್ಕೆ ಸೇರಲು ಅವರು ರಾಜ್ಯ, ಕೇಂದ್ರ, ಬ್ಯಾಂಕಿಂಗ್, ವಿಮೆ, ಟೆಲಿ-ಕಮ್ಯುನಿಕೇಷನ್ಸ್ ಮತ್ತು ಇತರ ವಲಯದ ನೌಕರರಿಗೆ ವಿಶೇಷವಾಗಿ ಮನವಿ ಮಾಡಿದರು.

ನಂತರ, ಎಲ್ಲಾ ನಾಯಕರು ಘೋಷಣೆಯನ್ನು ಬೆಂಬಲಿಸಿ ಮಾತನಾಡಿದರು. ಸಿಐಟಿಯುನಿಂದ ಎಂ.ಕೆ.ಫಂದೆ, ಎಐಟಿಯುಸಿಯಿಂದ ಗುರುದಾಸ್ ದಾಸ್ ಗುಪ್ತಾ, ಎಚ್‌ಎಂಎಸ್ ಉಮ್ರಾವಾಲ್ ಪುರೋಹಿತ್ ಮತ್ತು ಎಐಆರ್‌ಎಫ್ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಇತರ ಕಾರ್ಮಿಕ ಸಂಘಗಳ ಮುಖಂಡರು ಮುಷ್ಕರ ಮತ್ತು ಘೋಷಣೆಯನ್ನು ಬೆಂಬಲಿಸಿದರು.

ಸಮಾವೇಶದಲ್ಲಿ ಅಂಗೀಕರಿಸಿದ ಘೋಷಣೆ ಹೀಗೆ ಹೇಳಿತು:

ಸಮಾವೇಶ ಸರ್ವಾನುಮತದಿಂದ ರೂಪಿಸಿದ ಬೇಡಿಕೆಗಳನ್ನು ಮತ್ತೊಮ್ಮೆ ಈ ಕೆಳಗಿನಂತೆ ಪುನರುಚ್ಚರಿಸುತ್ತದೆ:

* ಸಾರ್ವತ್ರಿಕ ಪಿ.ಡಿ.ಎಸ್. ನಂತಹ ಸೂಕ್ತ, ಸರಿಪಡಿಸುವ ಮತ್ತು ವಿತರಣಾ ಕ್ರಮಗಳ ಮೂಲಕ ಮತ್ತು ಸರಕು ಮಾರುಕಟ್ಟೆಯಲ್ಲಿ ಊಹಾಪೋಹಗಳನ್ನು ಒಳಗೊಂಡಿರುವ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು..
* ಹಿಂಜರಿತ ಪೀಡಿತ ಕ್ಷೇತ್ರಗಳಲ್ಲಿ ಸಂಬಂಧಪಟ್ಟ ಉದ್ಯಮಿಗಳಿಗೆ ನೀಡಲಾಗುವ ಉತ್ತೇಜನ ಪ್ಯಾಕೇಜ್‌ಗಳಲ್ಲಿ ಉದ್ಯೋಗ ರಕ್ಷಣೆಯನ್ನು ಖಚಿತಪಡಿಸುವ ಅಂಶಗಳನ್ನು ಜೋಡಿಸುವ ಮತ್ತು ಮೂಲಸೌಕರ್ಯದಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಲು ನಿರ್ದಿಷ್ಟ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಬೇಕು.
* ಯಾವುದೇ ಮೂಲಭೂತ ಕಾರ್ಮಿಕ ಕಾನೂನುಗಳನ್ನು ಯಾವುದೇ ವಿನಾಯಿತಿ ಅಥವಾ ರಿಯಾಯತಿಯಿಲ್ಲದೆ ಮತ್ತು ಕಾರ್ಮಿಕ ಕಾನೂನುಗಳ ಉಲ್ಲಂಘನೆಗಾಗಿ ಕಠಿಣ ಶಿಕ್ಷೆಯ ಕ್ರಮಗಳೊಂದಿಗೆ ಕಟ್ಟುನಿಟ್ಟಾಗಿ ಜಾರಿಗೊಳಿಸುವುದು.
* ಬಡತನ ರೇಖೆಯ ಆಧಾರದ ಮೇಲೆವಾದ ನಿರ್ಬಂಧಿತವಾದ ಎಲ್ಲ ನಿಬಂಧನೆಗಳನ್ನು ತೆಗೆದುಹಾಕಬೇಕು. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ರ ಅಡಿಯಲ್ಲಿ ಯೋಜನೆಗಳ ವ್ಯಾಪ್ತಿಯ ಅರ್ಹತೆಗೆ ಸಂಬಂಧಿಸಿದಂತೆ ಮತ್ತು ಅಸಂಘಟಿತ ವಲಯದಲ್ಲಿನ ಉದ್ಯಮಗಳ ರಾಷ್ಟ್ರೀಯ ಆಯೋಗ ಮತ್ತು ಕಾರ್ಮಿಕರ ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ಗುತ್ತಿಗೆ/ ಪ್ರಾಸಂಗಿಕ ಕಾರ್ಮಿಕರು ಸೇರಿದಂತೆ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ, ರಾಷ್ಟ್ರೀಯ ನೆಲ-ಮಟ್ಟದ ಸಾಮಾಜಿಕ ಭದ್ರತೆಗಾಗಿ ಅಸಂಘಟಿತ ವಲಯಕ್ಕೆ ರಾಷ್ಟ್ರೀಯ ನಿಧಿಯನ್ನು ರಚಿಸುವುದು.
* ಬಜೆಟ್ ಕೊರತೆಯನ್ನು ಪೂರೈಸಲು ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳ (ಸಿಪಿಎಸ್‌ಇ) ಷೇರುಗಳ ಹೂಡಿಕೆಯನ್ನು ಮಾರಾಟಮಾಡಬಾರದು ಮತ್ತು ಅದಕ್ಕೆ ಬದಲಾಗಿ ಅವುಗಳ ಬೆಳೆಯುತ್ತಿರುವ ಮೀಸಲು ಮತ್ತು ಹೆಚ್ಚುವರಿವನ್ನು ವಿಸ್ತರಣೆ ಮತ್ತು ಆಧುನೀಕರಣದ ಉದ್ದೇಶಕ್ಕಾಗಿ ಮತ್ತು ರೋಗಗ್ರಸ್ತ ಸಾರ್ವಜನಿಕ ವಲಯದ ಪುನರುಜ್ಜೀವನಕ್ಕಾಗಿ ಬಳಸಬೇಕು.

ಕಾರ್ಮಿಕರ ಈ ರಾಷ್ಟ್ರೀಯ ಸಮಾವೇಶವು ತನ್ನ ಸಾಂವಿಧಾನಿಕ ಮತ್ತು ಪ್ರಜಾಪ್ರಭುತ್ವದ ಹಕ್ಕನ್ನು ಚಲಾಯಿಸುವಾಗ ದುಡಿಯುವ ಜನರ ಮತ್ತು ಒಟ್ಟಾರೆ ಸಮಾಜದ ಹಿತಾಸಕ್ತಿಗಳನ್ನು ಅಪಾಯಕಾರಿಯಾಗಿ ಬಾಧಿಸುವಂತಹ ತಪ್ಪುನೀತಿಗಳನ್ನು ತಕ್ಷಣ ಸರಿಪಡಿಸಲು ಕರೆ ನೀಡುತ್ತದೆ ಮತ್ತು. ದುಡಿಯುವ ಜನರ ಹೆಚ್ಚುತ್ತಿರುವ ಕೋಪದ ಭಾವನೆ ವ್ಯಕ್ತಪಡಿಸಲು ಅದರ ನ್ಯಾಯಸಮ್ಮತ ಪ್ರತಿಭಟನೆಯನ್ನು ಮತ್ತಷ್ಟು ಹೆಚ್ಚಿಸಲು ಪ್ರಯತ್ನಿಸುತ್ತದೆ.

ಆದ್ದರಿಂದ ಸೆಪ್ಟೆಂಬರ್ 7, 2010 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲು ಸಮಾವೇಶ ನಿರ್ಧರಿಸುತ್ತದೆ.

ದೇಶಾದ್ಯಂತದ ಸಾರ್ವತ್ರಿಕ ಮುಷ್ಕರದ ಯಶಸ್ಸಿಗಾಗಿ, ಸಂಯೋಜನೆಗಳ ಹೊರತಾಗಿಯೂ ಎಲ್ಲರೂ ಒಟ್ಟಾಗಿ ಅಣಿನೆರೆಯಲು ದೇಶದ ಸಂಪೂರ್ಣ ದುಡಿಯುವ ಜನರನ್ನು ಸಮಾವೇಶವು ಕೋರುತ್ತದೆ. ಸರ್ಕಾರವು ಬೇಡಿಕೆಗಳನ್ನು ಒಪ್ಪಿಕೊಳ್ಳದಿದ್ದರೆ, ಕಾರ್ಮಿಕ ಸಂಘಗಳು ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುತ್ತವೆ ಮತ್ತು ಸಂಸತ್ತಿಗೆ ನಡೆ ಮಾಡಲು ಸಿದ್ಧವಾಗುತ್ತವೆ.

ಅಭೂತಪೂರ್ವ ಆಯಾಮದ ಸಾರ್ವತ್ರಿಕ ಮುಷ್ಕರ

ಸೆಪ್ಟೆಂಬರ್ 7, 2010 ರಂದು ಭಾರತದಲ್ಲಿ ನಡೆದ ಅತಿದೊಡ್ಡ ಸಾರ್ವತ್ರಿಕ ಮುಷ್ಕರವು ದೇಶದ ಕಾರ್ಮಿಕ ವರ್ಗದ ಚಳವಳಿಯಲ್ಲಿ ಬಹಳ ಅದ್ಭುತವಾದ ದಾಖಲೆಯನ್ನು ಮಾಡಿತು ಮತ್ತು ಅದು ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ನವ-ಉದಾರವಾದದ ನೀತಿಯನ್ನು ಅನುಸರಿಸುವುದರ ವಿರುದ್ಧ ಆಳುವ-ವರ್ಗದ ಶಕ್ತಿಗಳಿಗೆ ಗಂಭೀರ ಎಚ್ಚರಿಕೆ ನೀಡಿತು.

ತಕ್ಷಣ, ಸಂಘಟಿತ ಮತ್ತು ಅಸಂಘಟಿತ ವಲಯಗಳು, ರಾಜ್ಯ ಸರ್ಕಾರಿ ನೌಕರರು ಮತ್ತು ಶಿಕ್ಷಕರು, ಕೇಂದ್ರ ನೌಕರರು ಮತ್ತು ಮುಷ್ಕರಕ್ಕೆ ಸೇರಿದ ವಿವಿಧ ವಲಯಗಳ ಇತರ ನೌಕರರ ಸಂಖ್ಯೆಯನ್ನು ನಿಖರವಾಗಿ ಅಂದಾಜು ಮಾಡುವುದು ಕಷ್ಟ. ಎಲೆಕ್ಟ್ರಾನಿಕ್ ಮಾಧ್ಯಮಗಳು, ಕೆಲವು ವ್ಯಕ್ತಿಗಳ, ಪ್ರೇರಿತ ಕಾರ್ಮಿಕ-ವಿರೋಧಿ ತುತ್ತೂರಿ ಗುಂಪಿನ ಮಾಧ್ಯಮಗಳೂ ಸೇರಿ, ಸುಮಾರು 10 ಕೋಟಿ (100 ಮಿಲಿಯನ್) ಕಾರ್ಮಿಕರು ಮತ್ತು ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದು, ಮುಷ್ಕರಕ್ಕೆ ಕರೆ ನೀಡಿದ್ದ ಕಾರ್ಮಿಕ ಸಂಘಗಳಿಂದ ಯಾವುದೇ ಬಲಾತ್ಕಾರದ ದೂರುಗಳನ್ನು ಯಾರೊಬ್ಬರೂ ನೀಡಲಿಲ್ಲವೆಂದು ವರದಿಮಾಡಿದವು.

ಸೆಪ್ಟೆಂಬರ್ 7, 2010 ರ ಈ ಅಭೂತಪೂರ್ವ ಮತ್ತು ಐಕ್ಯ ಸಾರ್ವತ್ರಿಕ ಮುಷ್ಕರವು 1991 ರಲ್ಲಿ ಭಾರತದ ಆರ್ಥಿಕತೆಯಲ್ಲಿ ಜಾಗತೀಕರಣದ ನೀತಿಯನ್ನು ಔಪಚಾರಿಕವಾಗಿ ಅಂಗೀಕರಿಸಿದಾಗಿನಿಂದ ಭಾರತ ಸರ್ಕಾರವು ಅನುಸರಿಸುತ್ತಿರುವ ಬಂಡವಾಳಶಾಹಿ ಜಾಗತೀಕರಣ ಮತ್ತು ನವ-ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧದ 13 ನೇ ಸಾರ್ವತ್ರಿಕ ಮುಷ್ಕರವಾಗಿತ್ತು. ಈ 13 ನೇ ಸಾರ್ವತ್ರಿಕ ಮುಷ್ಕರಕ್ಕೆ ಮೊದಲು, 1991 ರಿಂದೀಚೆಗೆ ನಡೆದ 12 ಸಾರ್ವತ್ರಿಕ ಮುಷ್ಕರಗಳಲ್ಲಿ, ಕಾರ್ಮಿಕರ ಭಾಗವಹಿಸುವಿಕೆಯು ವೇಗವನ್ನು ಪಡೆದಿತ್ತು, ಈ ಬಾರಿ ಅದು ಉತ್ತುಂಗಕ್ಕೇರಿತ್ತು

ಆಳುವ ವರ್ಗದ ಪಕ್ಷದ ನೇತೃತ್ವದ ಕೇಂದ್ರ ಕಾರ್ಮಿಕ ಸಂಘ ಐಎನ್‌ಟಿಯುಸಿ ಮುಷ್ಕರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ ಈ ಬಾರಿ ಮುಷ್ಕರ ಹೆಚ್ಚಿನ ಐಕ್ಯತೆಯನ್ನು ಸಾಧಿಸಿತು ಎಂಬುದು ಭಾರತದ ಟ್ರೇಡ್ ಯೂನಿಯನ್ ಆಂದೋಲನಕ್ಕೆ ಹೆಮ್ಮೆಯ ದಾಖಲೆಯಾಗಿದೆ. ಮತ್ತೊಂದು ಆಳುವ-ವರ್ಗದ ಪಕ್ಷದ ಕೇಂದ್ರ ಟ್ರೇಡ್ ಯೂನಿಯನ್, ಬಿಎಂಎಸ್, ಇತರರೊಂದಿಗೆ ಅದೇ 5-ಅಂಶಗಳ ಬೇಡಿಕೆಯ ಮೇರೆಗೆ ಕೊನೆಯ 2 ತಿಂಗಳಿನಿಂದ ಕಾರ್ಮಿಕ ಸಂಘಗಳ ಐಕ್ಯ ವೇದಿಕೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರೂ, ಅಂತಿಮವಾಗಿ ಅದೇ ಬೇಡಿಕೆಗಳ ಮೇಲೆ ನಡೆದ 7 ಸೆಪ್ಟೆಂಬರ್ 2010 ರ ಮುಷ್ಕರದಿಂದ ದೂರ ಉಳಿಯಿತು.

ಕಾರ್ಮಿಕರ ವರ್ಗ-ಐಕ್ಯತೆಯು ಭಾರತದ ಟ್ರೇಡ್ ಯೂನಿಯನ್ ಚಳವಳಿಯ ಅತ್ಯಂತ ಶ್ರದ್ಧೆಯಿಂದ ಕಾಯ್ದುಕೊಳ್ಳಬೇಕಾದ ನಿಧಿಯಾಗಿದೆ ಮತ್ತು' ಬಂಡವಾಳಶಾಹಿಯ ಗಂಭೀರ ಬಿಕ್ಕಟ್ಟುಗಳು ಪ್ರಾರಂಭವಾದ ನಂತರ ಮತ್ತು ಸೆಪ್ಟೆಂಬರ್ 15, 2008 ರಂದು ವಿಶ್ವ ಬಂಡವಾಳಶಾಹಿಯ ಆರ್ಥಿಕ ನರವಾದ ವಾಲ್ ಸ್ಟ್ರೀಟ್‌ನ ಕುಸಿತದ ನಂತರ ನವ-ಉದಾರವಾದವು ಹೆಚ್ಚು ಅಪಖ್ಯಾತಿಗೆ ಒಳಗಾಗಿದೆ, ಆದರೂ, ಐಎಂಎಫ್-ವರ್ಲ್ಡ್ ಬ್ಯಾಂಕ್ ಮತ್ತು ಡಬ್ಲ್ಯುಟಿಒ ಮತ್ತು ಜಿ 7 ರ ನವ-ಉದಾರವಾದಿ ನೀತಿಗಳ ಯಜಮಾನರ, ಆಜ್ಞೆಗಳಿಗೆ ನಿಷ್ಠೆಯಿಂದ ಬದ್ಧರಾಗಿರುವ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮತ್ತು ಭಾರತದ ಬಂಡವಾಳಶಾಹಿ ವರ್ಗಕ್ಕೆ ಕಾರ್ಮಿಕ-ವರ್ಗವು ಒಂದು ದೊಡ್ಡ ಸಂದೇಶವನ್ನು ನೀಡಿತು.

ಬಿಹಾರದಲ್ಲಿ ಅನಿರ್ದಿಷ್ಟ ಮುಷ್ಕರ

ಬಿಹಾರ ರಾಜ್ಯ ನಾನ್ ಗೆಜೆಟೆಡ್ ಎಂಪ್ಲಾಯೀಸ್ ಫೆಡರೇಶನ್ ಸೇರಿದಂತೆ ಹಲವಾರು ನೌಕರರ ಸಂಘಟನೆಗಳನ್ನು ಒಳಗೊಂಡ ಜಂಟಿ ಹೋರಾಟ ವೇದಿಕೆ ತಮ್ಮ 7 ಅಂಶಗಳ ಚಾರ್ಟರ್ ಅನ್ನು ಬೆಂಬಲಿಸಿ 2010 ರ ಆಗಸ್ಟ್ 23 ರಿಂದ ಅನಿರ್ದಿಷ್ಟ ಮುಷ್ಕರವನ್ನು ಪ್ರಾರಂಭಿಸಿತು. ಈ ಬೇಡಿಕೆಗಳ ಅಗತ್ಯ ಪರಿಗಣನೆಗೆ 2010 ರ ಜನವರಿ 7 ರಿಂದ ಫೆಬ್ರವರಿ 2010 ರವರೆಗೆ 34 ದಿನಗಳ ಮುಷ್ಕರ ನಡೆಸಿದ ಹಿನ್ನೆಲೆಯಲ್ಲಿ 2010 ರ ಫೆಬ್ರವರಿ 9 ರಂದು ನಿತೀಶ್ ಕುಮಾರ್ ಸರ್ಕಾರ ಹೈಕೋರ್ಟ್‌ಗೆ ಒಪ್ಪಿಗೆ ನೀಡಿತ್ತು. ಕೇಂದ್ರ ಸರ್ಕಾರಿ ನೌಕರರಿಗೆ ಸಮನಾಗಿ ಸಂಬಳ, ಪಿಂಚಣಿ ಮತ್ತು ತುಟ್ಟಿಭತ್ಯೆ, ದೈನಂದಿನ ಮತ್ತು ಪ್ರಾಸಂಗಿಕ ಕಾರ್ಮಿಕರ ಕ್ರಮಬದ್ಧಗೊಳಿಸುವಿಕೆ, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಇತ್ಯಾದಿ ಬೇಡಿಕೆಗಳಲ್ಲಿ ಸೇರಿದ್ದವು. 2010 ರ ಆಗಸ್ಟ್ 4 ರಂದು ಜಂಟಿ ಹೋರಾಟ ವೇದಿಕೆ ರಾಜ್ಯ ಸರ್ಕಾರಕ್ಕೆ ಮುಷ್ಕರ ನೋಟಿಸ್ ನೀಡಲು ನಿರ್ಧರಿಸಿತು. ಆಗಸ್ಟ್ 11 ರಂದು ಪಾಟ್ನಾದ ಡಾಕ್‌ಬಂಗ್ಲಾ ಚೌರಾಹಾ ಎದುರು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪ್ರತಿಕೃತಿಯನ್ನು ಪ್ರತಿಭಟನಾನಿರತ ನೌಕರರು ಸುಟ್ಟುಹಾಕಿದರು.

ಆದಾಯ ತೆರಿಗೆ ನೌಕರರ ಮುಷ್ಕರ

ಆದಾಯ ತೆರಿಗೆ ನೌಕರರು ಜುಲೈ 15, 2010 ರಂದು 12 ಅಂಶಗಳ ಬೇಡಿಕೆಗಳ ಸನ್ನದಿನ ಮೇಲೆ ರಾಷ್ಟ್ರವ್ಯಾಪಿ ಮುಷ್ಕರ ನಡೆಸಿದರು, ಅದರಲ್ಲಿ ಬೆಂಗಳೂರಿನ ಕೇಂದ್ರ ಸಂಸ್ಕರಣಾ ಕೇಂದ್ರದಲ್ಲಿ (ಸಿಪಿಜಿ) ವಿಭಾಗೀಯ ಕಾರ್ಯಗಳನ್ನು ಹೊರಗುತ್ತಿಗೆ ನೀಡುವುದನ್ನು ನಿಲ್ಲಿಸಬೇಕು ಎನ್ನುವುದು ಸೇರಿತ್ತು. ಜಂಟಿ ಕಾರ್ಯಾಚರಣೆ ಮಂಡಳಿ (ಜೆಸಿಎ) ಮುಷ್ಕರಕ್ಕೆ ಕರೆ ನೀಡಿತ್ತು. ಮಾಧ್ಯಮ ವರದಿಗಳ ಪ್ರಕಾರ, ಇಲಾಖೆಯ ವಾಡಿಕೆಯ ಕಾರ್ಯಗಳನ್ನು ಸ್ಥಗಿತಗೊಳಿಸಿದ ಈ ಮುಷ್ಕರದಲ್ಲಿ 50,000 ಕ್ಕೂ ಹೆಚ್ಚು ಉದ್ಯೋಗಿಗಳು ಭಾಗವಹಿಸಿದ್ದರು.

ವೈದ್ಯಕೀಯ ಪ್ರತಿನಿಧಿಗಳಿಂದ ಮುಷ್ಕರ

2010 ಆಗಸ್ಟ್ 17 ಮತ್ತು 18 ರಂದು ನಡೆದ ಎರಡು ದಿನಗಳ ಯಶಸ್ವಿ ದೇಶವ್ಯಾಪಿ ಮುಷ್ಕರ ಕ್ರಮದಲ್ಲಿ ದೇಶದ ಎರಡು ಲಕ್ಷಕ್ಕೂ ಹೆಚ್ಚು ವೈದ್ಯಕೀಯ ಮತ್ತು ಮಾರಾಟ ಪ್ರತಿನಿಧಿಗಳು ಭಾಗವಹಿಸಿದ್ದರು, ತಮ್ಮ 25-ಅಂಶಗಳ ತುರ್ತು ಬೇಡಿಕೆಗಳಿಗೆ ಒತ್ತಾಯಿಸಿದರು. ಜನರ ಬೇಡಿಕೆಗಳಾದ ಬೆಲೆಗಳ ಮೇಲೆ ಸರ್ಕಾರದ ನಿಯಂತ್ರಣ, ಪ್ರಮುಖ ಮತ್ತು ಜೀವ ಉಳಿಸುವ ಮದ್ದುಗಳು ಮತ್ತು ಔಷಧಿಗಳ ಬೆಲೆಗಳ ನಿಯಂತ್ರಣ, ಸಾರ್ವಜನಿಕ ವಲಯದ ಔಷಧ ಕಂಪನಿಗಳ ಪುನರುಜ್ಜೀವನ, ನಕಲಿ ಔಷಧಿಗಳ ತಯಾರಕರ ವಿರುದ್ಧ ಬಲವಾದ ಕ್ರಮ, ಔಷಧಿಗಳ ಮೇಲಿನ ಅಬಕಾರಿ ತೆರಿಗೆಯನ್ನು ಹಿಂತೆಗೆದುಕೊಳ್ಳುವುದು ಇತ್ಯಾದಿಗಳು ಮತ್ತು ತರ್ಕಬದ್ಧ ಕನಿಷ್ಠ ವೇತನ, ಔಪಚಾರಿಕ ನೇಮಕಾತಿ ಪತ್ರಗಳ ವಿತರಣೆ, ಇ.ಎಸ್.ಐ. ಪ್ರಯೋಜನಗಳ ಪರಿಚಯ, ಭವಿಷ್ಯ ನಿಧಿ ಮತ್ತು ಗ್ರ್ಯಾಚುಟಿ ಪಾವತಿ ಇತ್ಯಾದಿ ಕಾರ್ಮಿಕರ ಪರ ಬೇಡಿಕೆಗಳು ಪ್ರಮುಖವಾಗಿದ್ದವು. ಮುಷ್ಕರವನ್ನು ಭಾರತದ ವೈದ್ಯಕೀಯ ಪ್ರತಿನಿಧಿಗಳ ಒಕ್ಕೂಟ ಆಯೋಜಿಸಿತ್ತು.

ಉನ್ನತ ಮಟ್ಟದಲ್ಲಿ ವ್ಯಾಪಕ ಭ್ರಷ್ಟಾಚಾರ

ಉನ್ನತ ಮಟ್ಟದ ಭ್ರಷ್ಟಾಚಾರವು ಸುದ್ದಿ ಮುಖ್ಯಾಂಶಗಳನ್ನು ಆಕ್ರಮಿಸುತ್ತಿತ್ತು. ನವದೆಹಲಿಯಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಆಯೋಜಿಸುವಲ್ಲಿ ಅಸಮರ್ಪಕತೆ, ಆದರ್ಶ್ ಹೌಸಿಂಗ್ ಸೊಸೈಟಿಯಲ್ಲಿ ಭೂ ಕಬಳಿಕೆ, ಕರ್ನಾಟಕದಲ್ಲಿ ಯಡಿಯೂರಪ್ಪ ಸರ್ಕಾರದ ಜವುಗು ಭೂ ವ್ಯವಹಾರಗಳು ಮತ್ತು ಎಲ್ಲಕ್ಕಿಂತ ದೊಡ್ಡದಾಗಿ, 2 ಜಿ ಸ್ಪೆಕ್ಟ್ರಮ್‌ನ ಹಂಚಿಕೆಯಲ್ಲಿ ಕೋಟಿಗಟ್ಟಲೆ ನಷ್ಟ ಇತ್ಯಾದಿ. ಪಿ.ಜೆ.ಥಾಮಸ್ ಅವರನ್ನು ಕೇಂದ್ರ ವಿಜಿಲೆನ್ಸ್ ಆಯುಕ್ತರನ್ನಾಗಿ ನೇಮಕ ಮಾಡಿರುವುದನ್ನು ಸಹ ದೇಶದ ಉನ್ನತ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. 2 ಜಿ ಸ್ಪೆಕ್ಟ್ರಮ್ ಹಗರಣದ ಬಗ್ಗೆ ಸಿಬಿಐ ತನಿಖೆಯನ್ನು ಮೇಲ್ವಿಚಾರಣೆ ಮಾಡಬೇಕಾದರೆ ಕೇಂದ್ರ ವಿಜಿಲೆನ್ಸ್ ಆಯುಕ್ತರ ನ್ಯಾಯ ನಿಷ್ಠತೆಯ ಬಗ್ಗೆ ಸುಪ್ರೀಂ ಕೋರ್ಟ್ ಸಂದೇಹ ವ್ಯಕ್ತಪಡಿಸಿತು.

ಭಾರತದ ಪರಿಸ್ಥಿತಿಯ ವಿಶೇಷ ಸಂದರ್ಭ

ಭಾರತದ ಸನ್ನಿವೇಶದ ಸಂದರ್ಭದಲ್ಲಿ ಕಾರ್ಮಿಕ ವರ್ಗದ ರಚನೆಯಲ್ಲಿನ ಬದಲಾವಣೆಯು

ಪುಟ 14 ನೋಡಿ

ಪ್ರಧಾನ ಮಂತ್ರಿಗಳ ಸ್ವಾತಂತ್ರ್ಯ ದಿನದ ಭಾಷಣ

ಪುಟ 8 ರಿಂದ

ಎಂಬುದನ್ನು ಒಪ್ಪುತ್ತಾರೆ, ಮಾತ್ರವಲ್ಲ, ಹಾಗೆಂದು ಆಗ್ರಹಪೂರ್ವಕವಾಗಿ ಹೇಳುತ್ತಾರೆ" ಎಂದು ಅವರು 1940ರಲ್ಲೇ ಬರೆದಿದ್ದರು.

ಆಗ ಬ್ರಿಟಿಷರಿಗೆ ಭಾರತವನ್ನು ವಿಭಜಿಸಲು ಅನುವು ಮಾಡಿಕೊಟ್ಟ ಅದೇ ರೀತಿಯ ರಾಜಕಾರಣವನ್ನು ಪ್ರೋತ್ಸಾಹಿಸುವ ಆಳುವ ಪಕ್ಷ ಇಂದು ಆ ದುರಂತವನ್ನು ಸ್ಮರಿಸಿಕೊಳ್ಳ ಬಯಸುತ್ತಿದೆ ಎಂಬುದು ದೇಶವಿಭಜನೆ ಸಂಬಂಧಿತ ಹಿಂಸಾಚಾರದಲ್ಲಿ ಕೊಲ್ಲಲ್ಪಟ್ಟವರ. ಅತ್ಯಾಚಾರಗಳಿಗೆ ಒಳಗಾದವರ, ಅನಾಥರಾದವರ, ನಿರ್ವಸಿತರಾದವರ, ದರಿದ್ರರಾಗಿ ಬಿಟ್ಟವರ ನೆನಪಿಗೆ ಬಗೆಯುವ ಒಂದು ಅಪಚಾರವೇ ಸರಿ.

ಕಾಶ್ಮೀರ: ಗಾಯದ ಮೇಲೆ ಉಪ್ಪು

ದೇಶ ವಿಭಜನೆಯಾದಾಗ, ಮುಸ್ಲಿಂ ಬಹುಮತದ ಕಾಶ್ಮೀರವು ಪಾಕಿಸ್ತಾನದ ಬದಲು, ಭಾರತವನ್ನು ಸೇರಲು ನಿರ್ಧರಿಸಿದ್ದು, ಜಾತ್ಯತೀತ ಭಾರತದ ಒಂದು ಸಂಕೇತ. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ಕೊಟ್ಟ ಕಲಮು 370ನ್ನು ಸಂಸತ್ತಿನಲ್ಲಿರುವ ತನ್ನ ಹಿಂಸ್ರ ಬಹುಮತವನ್ನು ಬಳಸಿಕೊಂಡು ನಿರ್ಮೂಲಗೊಳಿಸಿದ ಮೇಲೆ ಪ್ರಧಾನ ಮಂತ್ರಿಗಳು ತಮ್ಮ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಆ ಗಾಯಕ್ಕೆ ಉಪ್ಪು ಸವರುವುದೇ ಸರಿಯೆಂದು ಭಾವಿಸಿದ್ದಾರೆ. ಈ ಭಾಷಣದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣಾ "ಕ್ಷೇತ್ರ ಮರುವಿಂಗಡಣೆ"ಯ ಉಲ್ಲೇಖ ಮಾಡಿದ್ದಾರೆ. ಇದು ಮುಸ್ಲಿಮೇತರರು ಹೆಚ್ಚಿರುವ ಕ್ಷೇತ್ರಗಳು ಮತ್ತು ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸುವ, ಆಮೂಲಕ ಈ ರಾಜ್ಯದ ಜನಸಂಖ್ಯಾ ಸಂಯೋಜನೆಯನ್ನು ಬದಲಿಸುವ ಒಂದು ವಿಧಾನ.

ಜನಗಳ ನೋವುಗಳಿಗೆ ತಿರಸ್ಕಾರ

ಈ ಭಾಷಣದಲ್ಲಿ ಜನಗಳ ಹಿತಗಳು ಮತ್ತು ಕಲ್ಯಾಣವನ್ನು ಕುರಿತಂತೆ ಬಿಂಬಿತವಾದ ಪ್ರಧಾನ ಮಂತ್ರಿಗಳ ಕಣ್ಣೋಟವಾದರೂ ಏನು? ಪ್ರತಿಯೊಂದು ಪ್ರಶ್ನೆಯ ಮೇಲೂ ಅವರು ವಾಸ್ತವವನ್ನು ಉಪೇಕ್ಷಿಸಿ, ಅತ್ಯಂತ ವಿಸ್ಮಯಕಾರೀ ದಾವೆಗಳನ್ನು ಮುಂದಿಟ್ಟಿದ್ದಾರೆ, ಈ ಮೂಲಕ ಕೊವಿಡ್ ಕಾಲದಲ್ಲಿ ಉಲ್ಬಣಗೊಂಡ ಜನಗಳ ಸಂಕಟಗಳ ಬಗ್ಗೆ ಉಪೇಕ್ಷೆಯನ್ನೇ ಪ್ರದರ್ಶಿಸಿದ್ದಾರೆ. ಉದಾಹರಣೆಗೆ, "ಸಮಾಜದ ಅಭಿವೃದ್ಧಿ ಪ್ರಯಾಣದಲ್ಲಿ ಯಾವ ವ್ಯಕ್ತಿಯನ್ನೂ, ಯಾವ ವರ್ಗವನ್ನೂ ಹಿಂದಕ್ಕೆ ಬಿಡದಂತೆ ನಾವು ಖಾತ್ರಿಗೊಳಿಸುತ್ತಿದ್ದೇವೆ" ಎಂದು ಅವರು ಹೇಳಿದರು–ಇದು ಅಸಮಾನತೆಯೆಂಬುದು ಹೊಲಸು ಮಟ್ಟಕ್ಕೆ ತಲುಪಿರುವಾಗ, ಮತ್ತು ಕೊವಿಡ್ ಕಾಲದಲ್ಲಿ ಅದು ಮತ್ತಷ್ಟು ತೀಕ್ಷ್ಣಗೊಂಡಿರುವಾಗ! ಆಕ್ಸ್‌ಫಾಮ್‌ನ "ಅಸಮಾನತೆಯ ವೈರಾಣು ವರದಿ" ತೋರಿಸುವಂತೆ "ಮಾರ್ಚ್ 2020ರಿಂದ ಭಾರತದ 100 ಬಿಲಿಯಾಧಿಪತಿಗಳು ತಮ್ಮ ಸಂಪತ್ತುಗಳಲ್ಲಿ ರೂ.12,97,822 ಕೋಟಿ ಹೆಚ್ಚಳ ಕಂಡಿದ್ದಾರೆ. ಇದು 138 ಕೋಟಿ ಜನ ಅತ್ಯಂತ ಬಡ ಭಾರತೀಯರಿಗೆ ಪ್ರತಿಯೊಬ್ಬರಿಗೂ ರೂ. 94,045 ಚೆಕ್ ಅನ್ನು ಕೊಡಲು ಸಾಕಾಗುತ್ತದೆ".

ಭಾರತದ ದುಡಿಯುವ ಜನಗಳು ಹೊತ್ತುಕೊಂಡಿರುವ ಅಪಾರ ಹೊರೆಯ ಬಗ್ಗೆ ಪ್ರಧಾನ ಮಂತ್ರಿಗಳು ಎಷ್ಟೊಂದು ಸ್ಪಂದನಾಶೂನ್ಯರಾಗಿದ್ದಾರೆ ಎಂಬುದು ಅವರ ಪ್ರಿಯ ಘೋಷಣೆಯಾದ "ಸಬ್ ಕಾ ಸಾಥ್ ಸಬ್ ಕಾ ವಿಕಾಸ್"ಗೆ "ಸಬ್ ಕಾ ಪ್ರಯಾಸ್"(ಎಲ್ಲರ ಪ್ರಯತ್ನ)ವನ್ನು ಸೇರಿಸುವ ಆಡಂಬರದ ಮಾತಿನಲ್ಲಿ ವ್ಯಕ್ತವಾಗುತ್ತದೆ. ಪ್ರಧಾನ ಮಂತ್ರಿಗಳು ದೇಶದ ಅಭಿವೃದ್ಧಿಗೆ ಬಾಧಕವಾಗಿರುವುದು 'ಪ್ರಯಾಸ'ದ ಅಂದರೆ 'ಪ್ರಯತ್ನ'ದ ಕೊರತೆ ಎಂದು ಭಾವಿಸುವ ಧೈರ್ಯ ತೋರುವಷ್ಟು ಅವರಿಗೆ ವಿಶಾಲ ಜನಸ್ತೋಮದ ಬದುಕಿನ ವಾಸ್ತವತೆಗಳ ಬಗ್ಗೆ ಮರೆವು ಉಂಟಾಗಿದೆಯೇ? ಪ್ರಧಾನ ಮಂತ್ರಿಗಳು ಎಂದಾದರೂ ಒಂದು ಮನರೇಗ ಕೆಲಸದ ಜಾಗಕ್ಕೆ ಭೇಟಿ ನೀಡಿದ್ದಾರೆಯೇ? ಮಣ್ಣಿನ ಕೆಲಸದ ಒಂದು ಪ್ರಾಜೆಕ್ಟಿನಲ್ಲಿ ಕನಿಷ್ಟ ಕೂಲಿ ಗಳಿಸಲು, ಕ್ರೂರ ಎನ್ನುವಷ್ಟು ಹೆಚ್ಚಿನ ಉತ್ಪಾದಕತಾ ನಿಯಮಾವಳಿ ಮತ್ತು ಪೀಸ್ ರೇಟ್ ಕೂಲಿಯಿಂದಾಗಿ ಒಬ್ಬ ಮಹಿಳಾ ಕೆಲಸಗಾರಳು ದಿನವೊಂದಕ್ಕೆ ಸರಾಸರಿ 2000 ಕೆಜಿಯಷ್ಟು ಮಣ್ಣು ಎತ್ತಬೇಕಾಗಿದೆ. ಭಾರತದ ಕೆಲಸಗಾರರಲ್ಲಿ ಸುಮಾರು 43ಶೇ.ದಷ್ಟು ಕೃಷಿಯ ದೈಹಿಕ ಕೆಲಸಗಳಲ್ಲಿ ತೊಡಗಿದ್ದಾರೆ. ಕೂಲಿಕಾರ ಅಥವ ಕಾರ್ಮಿಕ ಎಂಬ ಪದ ಪ್ರಧಾನ ಮಂತ್ರಿಗಳ ಶಬ್ದಕೋಶದಿಂದಲೇ ಹೊರ ಹೋಗಿರುವತೆ ಕಾಣುತ್ತದೆ. ಆದರೂ ಅವರು "ಸಂಪತ್ತಿನ ಸೃಷ್ಟಿಕರ್ತರ" ಬಗ್ಗೆ ಮಾತಾಡಿದರು. ಸಂಪತ್ತಿನ ಸೃಷ್ಟಿಕರ್ತರು ಭಾರತದ ಕಾರ್ಮಿಕರು, ಆದರೆ ಪ್ರಧಾನಿಗಳ ಭಾಷಣದಲ್ಲಿ ಅವರ ಪ್ರಸ್ತಾಪವೇ ಕಾಣಲಿಲ್ಲ.

ಪ್ರಧಾನಿಗಳ ಹೊಸ ಶೋಧನೆ

ಮೂರು ರೈತ–ವಿರೋಧಿ ಕಾಯ್ದೆಗಳ ರದ್ದತಿಗಾಗಿ ಐತಿಹಾಸಿಕ ರೈತ ಹೋರಾಟದ ರೈತ ಮುಖಂಡರು "ಸಣ್ಣ ರೈತರ" ಬಗ್ಗೆ ಪ್ರಧಾನಿಗಳಲ್ಲಿ ಹೊಸದಾಗಿ ಕಂಡಿರುವ ಕಾಳಜಿಯನ್ನು ಖಂಡಿತವಾಗಿಯೂ ಗಮನಿಸಿರುತ್ತಾರೆ. ಭಾರತದಲ್ಲಿ 80ಶೇ.ದಷ್ಟು ರೈತರ ಬಳಿ ಎರಡು ಹೆಕ್ಟೇರುಗಳಿಗಿಂತ ಕಡಿಮೆ ಭೂಮಿ ಇದೆ ಎಂಬೊಂದು ಹೊಸ ಶೋಧನೆಯನ್ನು ಪ್ರಧಾನಿಗಳು ಮಾಡಿ, "ಈಗ ಸಣ್ಣ ರೈತರು ನಮ್ಮ ದೃಢನಿರ್ಧಾರ ನಮಗೆ ಮಂತ್ರ. ಸಣ್ಣ ರೈತರು ದೇಶದ ಗೌರವ ಆಗುತ್ತಾರೆ" ಎಂಬ ಘೋಷಣೆಯನ್ನು ಕೊಟ್ಟಿದ್ದಾರೆ. ವಾಸ್ತವವಾಗಿ, ಮೋದಿ ಆಳ್ವಿಕೆ ಆಕ್ರಾಮಕ ರೀತಿಯಲ್ಲಿ ಪ್ರೋತ್ಸಾಹಿಸುತ್ತಿರುವ ದ್ರೋಹಿ ಕಾನೂನುಗಳ ಮೂಲಕ ಕೃಷಿಯ ಕಾರ್ಪೊರೇಟೀಕರಣದ ಅತ್ಯಂತ ಕೆಟ್ಟ ಪರಿಣಾಮಗಳನ್ನು ಎದುರಿಸಬೇಕಾದವರು ಸಣ್ಣ ರೈತರೇ. ರೈತರ ಹೋರಾಟ ಆಗ್ರಹಿಸುತ್ತಿರುವ ಕನಿಷ್ಟ ಬೆಂಬಲ ಬೆಲೆಗಳನ್ನು ಖಾತ್ರಿ ಪಡಿಸುವ ಕಾಯ್ದೆಯಿಂದ ಹೆಚ್ಚು ಪ್ರಯೋಜನವಾಗುವುದು ಕೂಡ ಸಣ್ಣ ರೈತರಿಗೇ. ಏಕೆಂದರೆ ಹೆಚ್ಚಾಗಿ ಅವರೇ ಕಡಿಮೆ ಬೆಲೆಗಳಲ್ಲಿ ಹತಾಶ ಮಾರಾಟಕ್ಕೆ ಇಳಿಯಬೇಕಾದ ಒತ್ತಡಕ್ಕೆ ಒಳಗಾಗುವವರು. ಆದರೆ ಪ್ರಧಾನಿಗಳ ಭಾಷಣದಲ್ಲಿ ಬಿಂಬಿತವಾಗಿರುವ ಕೇಂದ್ರ ಸರಕಾರದ ಪ್ರಯತ್ನವೆಂದರೆ ಕೃಷಿ ಕಾಯ್ದೆಗಳ ವಿರುದ್ಧ ಐಕ್ಯ ಹೋರಾಟದಲ್ಲಿ ರೈತರ ನಡುವೆ ಒಡಕು ಸೃಷ್ಟಿಸುವುದು.

ಪ್ರಧಾನ ಮಂತ್ರಿಗಳು ದೇಶದ ಅಭಿವೃದ್ಧಿಗೆ ಬಾಧಕವಾಗಿರುವುದು 'ಪ್ರಯಾಸ'ದ ಅಂದರೆ 'ಪ್ರಯತ್ನ'ದ ಕೊರತೆ ಎಂದು ಭಾವಿಸುವ ಧೈರ್ಯ ತೋರುವಷ್ಟು ಅವರಿಗೆ ವಿಶಾಲ ಜನಸ್ತೋಮದ ಬದುಕಿನ ವಾಸ್ತವತೆಗಳ ಬಗ್ಗೆ ಮರೆವು ಉಂಟಾಗಿದೆಯೇ? ಪ್ರಧಾನ ಮಂತ್ರಿಗಳು ಎಂದಾದರೂ ಒಂದು ಮನರೇಗ ಕೆಲಸದ ಜಾಗಕ್ಕೆ ಭೇಟಿ ನೀಡಿದ್ದಾರೆಯೇ?



ಸಬ್ ಕಾ ಪ್ರಯಾಸ್!! ಬೆಲೆಯೇರಿಕೆ ಇಳಿಸಿ! ಕೃಷಿ ಕಾಯ್ದೆಗಳು ವಾಪಾಸಾಗಲಿ! ಉದ್ಯೋಗ ಬೇಕು!–ಇದು ಎಲ್ಲರ ನಿರೀಕ್ಷೆ! ವ್ಯಂಗ್ಯಚಿತ್ರ: ಇರ್ಫಾನ್, ನ್ಯುಸ್‌ಕ್ಲಿಕ್

ಮಹಿಳೆಯರ ವಿರುದ್ಧ ಹಿಂಸಾಚಾರದ ಬಗ್ಗೆ ಮೌನ

ಮಹಿಳೆಯರ ಬಗ್ಗೆ ಉಲ್ಲೇಖಗಳಿದ್ದವು. ಆದರೆ ಅವರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರದ ವಿರುದ್ಧ, ಇಂತಹ ಕ್ರಿಮಿನಲ್‌ಗಳನ್ನು ಅವರದ್ದೇ ಪಕ್ಷದ ನೇತೃತ್ವದ ಸರಕಾರಗಳು ಬೆಂಬಲಿಸುತ್ತಿರುವ ಭೀಕರ ಪ್ರಕರಣಗಳ ಬಗ್ಗೆ, ಈ ಹಿಂದೆ ಹಾಥ್ರಸ್‌ನಲ್ಲಿ, ಇತ್ತೀಚೆಗೆ ದೇಶದ ರಾಜಧಾನಿಯಲ್ಲೇ ಪೋಲೀಸರು ಹಿಂಸಾಚಾರಕ್ಕೆ ಒಳಗಾದ ದಲಿತ ಮಗುವಿನ ತಂದೆ –ತಾಯಿಯನ್ನು ಅವರು ತಮ್ಮ ದೂರನ್ನು ಹಿಂದಕ್ಕೆ ಪಡೆಯುವಂತೆ ಬಲವಂತಪಡಿಸಲು ಲಾಕಪ್ಪಿನಲ್ಲಿ ಇಟ್ಟಂತಹ ಪ್ರಕರಣಗಳ ಬಗ್ಗೆ, ಒಂದೇ ಒಂದು ಮಾತಿಲ್ಲ. ಇದು ಮಹಿಳೆಯರ ವಿರುದ್ಧ ಹಿಂಸಾಚಾರವನ್ನು ಬಲವಾಗಿ ಖಂಡಿಸುವ ಮತ್ತು ಮಹಿಳೆಯರಿಗೆ ನ್ಯಾಯವನ್ನು ಖಾತ್ರಿಪಡಿಸುವ ಬಗ್ಗೆ ಹೇಳಬೇಕಾದ ಸಂದರ್ಭವಾಗಿತ್ತು. ಆದರೆ ಪ್ರಧಾನಿಗಳು ಮೌನವಾಗುಳಿದರು.

ಇದು ಮಹಿಳೆಯರ ವಿರುದ್ಧ ಹಿಂಸಾಚಾರವನ್ನು ಬಲವಾಗಿ ಖಂಡಿಸುವ ಮತ್ತು ಮಹಿಳೆಯರಿಗೆ ನ್ಯಾಯವನ್ನು ಖಾತ್ರಿಪಡಿಸುವ ಬಗ್ಗೆ ಹೇಳಬೇಕಾದ ಸಂದರ್ಭವಾಗಿತ್ತು. ಆದರೆ ಪ್ರಧಾನಿಗಳು ಮೌನವಾಗುಳಿದರು.



ಸ್ಕೀಮುಗಳ ಮರುಬಳಕೆ

ಆಶ್ವಾಸನೆಗಳ ಸ್ವರೂಪದಲ್ಲಿ ಅವರು ಹೇಳಿದ್ದು ಹೆಚ್ಚು ಕಡಿಮೆ 2019 ಮತ್ತು 2020ರಲ್ಲಿ ಹೇಳಿದ್ದುದರ ಮರುಬಳಕೆಯೇ ಆಗಿತ್ತು.

ಕೆಲವು ಉದಾಹರಣೆಗಳು ಇಲ್ಲಿವೆ:

'ಪ್ರಧಾನ ಮಂತ್ರಿ ಗತಿ ಶಕ್ತಿ' ಎಂಬ ಹೆಸರಿನ 100 ಲಕ್ಷ ಕೋಟಿ ರೂ.ಗಳ ಮೂಲರಚನೆ ಹೂಡಿಕೆ ಪರಿಯೋಜನೆಯ ಆಡಂಬರ ಪೂರ್ಣ ಪ್ರಕಟಣೆ. ಇದೇ ಮೊತ್ತದ, ಇದೇ ಪರಿಯೋಜನೆಯನ್ನು 2019ರ ಮತ್ತು 2020ರ ಸ್ವಾತಂತ್ರ್ಯ ದಿನದ ಭಾಷಣಗಳಲ್ಲೂ ಪ್ರಕಟಿಸಲಾಗಿತ್ತು.

ಪ್ರಧಾನಿಗಳು "ಇಂದು ಹಂಚಿಕೊಳ್ಳುವ ಒಳ್ಳೆಯ ಸುದ್ದಿ"ಯಾಗಿ ರಕ್ಷಣಾ ಇಲಾಖೆ ನಡೆಸುವ ಸೈನಿಕ ಶಾಲೆಗಳು ಇನ್ನು ಮುಂದೆ ಹೆಣ್ಣು ಮಕ್ಕಳನ್ನೂ ಸೇರಿಸಿಕೊಳ್ಳುತ್ತವೆ ಎಂದು ಹೇಳಿದರು. ನಿಜ ಸಂಗತಿಯೆಂದರೆ, ಅಕ್ಟೋಬರ್ 2019ರಲ್ಲೇ 2021–22ರಿಂದ ಎಲ್ಲ ಸೈನಿಕ ಶಾಲೆಗಳಲ್ಲಿ ಸಹ–ಶಿಕ್ಷಣ ಜಾರಿಗೆ ತರಲಾಗುವುದು ಎಂಬ ಪ್ರಕಟಣೆಯನ್ನು ರಕ್ಷಣಾ ಮಂತ್ರಾಲಯ ಮಾಡಿತ್ತು.

"ನಾನಿಂದು ಈ ತ್ರಿವರ್ಣದ ಸಾಕ್ಷಿಯಾಗಿ ರಾಷ್ಟ್ರೀಯ ಜಲಜನಕ ಮಿಷನ್ ಪ್ರಕಟಿಸುತ್ತಿದ್ದೇನೆ" ಎಂದರು ಪ್ರಧಾನ ಮಂತ್ರಿಗಳು. ಆದರೆ ಫೆಬ್ರುವರಿಯಲ್ಲೇ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಇದನ್ನು ತಮ್ಮ ಬಜೆಟ್ ಭಾಷಣದಲ್ಲಿ ಪ್ರಕಟಿಸಿದ್ದರು.

ಪ್ರಧಾನಿಗಳು ಪ್ರಕಟಿಸಿದ, ಅಕ್ಕಿಯನ್ನು ರೇಷನ್ ಅಂಗಡಿಗಳಿಗೆ ಮತ್ತು ಶಾಲೆಗಳಲ್ಲಿ ಮಧ್ಯಾಹ್ನದ ಊಟಕ್ಕಾಗಿ ವಿತರಿಸುವ ಮೊದಲು ಕಬ್ಬಿಣಾಂಶ ಮತ್ತು ವಿಟಮಿನ್‌ಗಳಿಂದ ಗಟ್ಟಿಗೊಳಿಸುವ ಯೋಜನೆ ಕೂಡ 2019ರಲ್ಲಿ ಆಗ ಆಹಾರ ಮಂತ್ರಿಗಳಾಗಿದ್ದ ರಾಮ್ ವಿಲಾಸ್ ಪಾಸ್ವಾನ್ ಪ್ರಕಟಿಸಿದ್ದ ಯೋಜನೆಯೇ. ಇದು ಕಳೆದ ಒಂದು ವರ್ಷದಿಂದ ಒಂದು ಪ್ರಾಯೋಗಿಕ ಪರಿಯೋಜನೆಯಾಗಿ ನಡೆಯುತ್ತಿದೆ.

ಪೆಗಸಸ್ –ಎಂತಹ ಅದ್ಭುತ ಬೂಟಾಟಿಕೆ!

ಆದರೆ, ಬಹುಶಃ ಅತ್ಯಂತ ದೊಡ್ಡ ವಿಡಂಬನೆ ಅಥವ ನಾಚಿಕೆಗೆಟ್ಟದ್ದು ಎನ್ನಬಹುದಾದ ಹೇಳಿಕೆಯೆಂದರೆ ಪ್ರಧಾನ ಮಂತ್ರಿಗಳು ಆಳ್ವಿಕೆಯ ಬಗ್ಗೆ ಹೇಳಿದ್ದು. "ನಾವು ಸರಕಾರಗಳು ನಾಗರಿಕರ ಬದುಕುಗಳಲ್ಲಿ ಹಸ್ತಕ್ಷೇಪ ಮಾಡದ ಒಂದು ಭಾರತವನ್ನು ಬಯಸುತ್ತೇವೆ... ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಜನಗಳ ಬದುಕುಗಳಲ್ಲಿ ಸರಕಾರದ ಮತ್ತು ಸರಕಾರೀ ವಿಧಿ–ವಿಧಾನಗಳ ಅನಗತ್ಯ ಹಸ್ತಕ್ಷೇಪವನ್ನು ಕೊನೆಗೊಳಿಸುವುದು ಅಗತ್ಯವಾಗಿದೆ" ಎಂದು ಅವರು ಹೇಳಿದರು. ಹಾಗಿದ್ದರೆ ಪೆಗಸಸ್ ಕತೆಯೇನು ಪ್ರಧಾನ ಮಂತ್ರಿಗಳೇ? ನಿಮ್ಮ ವಿರೋಧಿಗಳ ವಿರುದ್ಧ ಕೇಡುಕಾರಕ ಮಿಲಿಟರಿ ದರ್ಜೆಯ ಗೂಢಚರ್ಯೆ ತಂತ್ರಾಂಶದ ಬಳಕೆಯೇನು? ಈ ಸರಕಾರ ಸುಪ್ರಿಂ ಕೋರ್ಟ್ ನ್ಯಾಯಾಧೀಶರು ಮತ್ತು ಪ್ರತಿಪಕ್ಷಗಳ ರಾಜಕಾರಣಿಗಳು ಸೇರಿದಂತೆ 161 ವ್ಯಕ್ತಿಗಳನ್ನು ಗೂಢಚರ್ಯೆಗೆ ಗುರಿಪಡಿಸಿದೆ. ಸರಕಾರದ ಯಾವುದಾದರು ಸಂಸ್ಥೆ ಪೆಗಸಸ್ ನ್ನು ಖರೀದಿಸಿದೆಯೇ ಮತ್ತು ಬಳಸಿದೆಯೇ ಎಂಬ ಸರಳ ಪ್ರಶ್ನೆಗೆ ಉತ್ತರ ನೀಡಲು ಪಟ್ಟುಹಿಡಿದು ನಿರಾಕರಿಸಿದ್ದರಿಂದ ಒಂದಿಡೀ ಸಂಸತ್ತು ಅಧಿವೇಶನ ಕೊಚ್ಚಿಕೊಂಡು ಹೋಯಿತು. ಆದರೂ ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ "ಅನಗತ್ಯ ಹಸ್ತಕ್ಷೇಪ"ವನ್ನು ನಿಲ್ಲಿಸುವ ಬಗ್ಗೆ ಮಾತಾಡುತ್ತಾರೆ. ಎಂತಹ ಅದ್ಭುತ ಬೂಟಾಟಿಕೆ!

ನಮ್ಮ ಭವ್ಯ ಸ್ವಾತಂತ್ರ್ಯ ಹೋರಾಟದ ವಜ್ರಮಹೋತ್ಸವದ ಆಚರಣೆಗಳನ್ನು ಆರಂಭಿಸುತ್ತಿರುವಾಗ, ನಮ್ಮ ಸರಕಾರ ಭಾರತಕ್ಕೆ ಈ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟ ಮೌಲ್ಯಗಳಿಗೆ, ಐಕ್ಯತೆ, ಬಹುತ್ವ, ಜಾತ್ಯಾತೀತತೆ ಮತ್ತು ಆರ್ಥಿಕ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದ ಮೌಲ್ಯಗಳಿಗೆ, ತದ್ವಿರುದ್ಧವಾದ ಸೈದ್ಧಾಂತಿಕ ನೆಲೆಯ ಪೂರ್ವಿಕರನ್ನು ಹೊಂದಿರುವ ಮುಖಂಡರಿಂದ ಕೂಡಿದೆ ಎಂಬುದು ಭಾರತದ ದುರಂತ. ಪ್ರಧಾನ ಮಂತ್ರಿಗಳ ಭಾಷಣ ಈ ವಾಸ್ತವತೆಯನ್ನು ಬಿಂಬಿಸಿದೆ. ○



ಸಂಸತ್ತಿನ ಮುಂಗಾರು ಅಧಿವೇಶನ
ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಬಹುಶಃ ಅತ್ಯಂತ ದೊಡ್ಡ ವಿಡಂಬನೆ ಅಥವ ನಾಚಿಕೆಗೆಟ್ಟದ್ದು ಎನ್ನಬಹುದಾದ ಹೇಳಿಕೆಯೆಂದರೆ ಪ್ರಧಾನ ಮಂತ್ರಿಗಳು ಆಳ್ವಿಕೆಯ ಬಗ್ಗೆ ಹೇಳಿದ್ದು. ಸರಕಾರದ ಯಾವುದಾದರು ಸಂಸ್ಥೆ ಪೆಗಸಸ್ ನ್ನು ಖರೀದಿಸಿದೆಯೇ ಮತ್ತು ಬಳಸಿದೆಯೇ ಎಂಬ ಸರಳ ಪ್ರಶ್ನೆಗೆ ಉತ್ತರ ನೀಡಲು ಪಟ್ಟುಹಿಡಿದು ನಿರಾಕರಿಸಿದ್ದರಿಂದ ಒಂದಿಡೀ ಸಂಸತ್ತು ಅಧಿವೇಶನ ಕೊಚ್ಚಿಕೊಂಡು ಹೋಯಿತು. ಆದರೂ ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ "ಅನಗತ್ಯ ಹಸ್ತಕ್ಷೇಪ"ವನ್ನು ನಿಲ್ಲಿಸುವ ಬಗ್ಗೆ ಮಾತಾಡುತ್ತಾರೆ. ಎಂತಹ ಅದ್ಭುತ ಬೂಟಾಟಿಕೆ!



ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸರಕಾರೀ ಪೋಸ್ಟರ್ ಹೀಗಿರಬಹುದೇ?
ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್

ವಿದ್ಯುತ್ ಮಸೂದೆ 2021 ಸಂಸತ್ತಿನಲ್ಲಿ ಮಂಡನೆಯಾಗುವ ದಿನ ಇಡೀ ದೇಶದಾದ್ಯಂತ ವಿದ್ಯುತ್ ಕಾರ್ಮಿಕರು ಮುಷ್ಕರಕ್ಕೆ ತಯಾರಿ ನಡೆಸಿದ್ದರು. ದೇಶದೆಲ್ಲೆಡೆ ರೈತರ ಆಕ್ರೋಶ ಭುಗಿಲೇಳುವ ಸ್ಪಷ್ಟ ಸೂಚನೆಯಿಂದಾಗಿ ಈ ಮಸೂದೆ ಮಂಡನೆ ಮುಂದೂಡಲ್ಪಟ್ಟಿದೆ. ವಿದ್ಯುತ್ ಮಸೂದೆಯನ್ನು ವಾಪಸ್ಸು ಪಡೆಯುವುದಾಗಿ ಪ್ರತಿಭಟನಾ ರೈತರಿಗೆ ಇದೇ ಕೇಂದ್ರ ಸರ್ಕಾರ ವಾಗ್ದಾನ ಮಾಡಿತ್ತು. ಈ ಮಾತನ್ನೂ ಸಹ ಉಳಿಸಿಕೊಳ್ಳಲಿಲ್ಲ. ಚಿಲ್ಲರೆ ವಹಿವಾಟಿನ ಮೇಲೆ ನಿಯಂತ್ರಣ ಮತ್ತು ಏಕಸ್ವಾಮ್ಯ ಸಾಧಿಸಲು ಅಂಬಾನಿಯ ಹಿತಾಸಕ್ತಿ ಹೇಗೆ ಕೃಷಿ ಕಾನೂನುಗಳ ಜಾರಿಯ ಹಿಂದೆ ಕೆಲಸ ಮಾಡಿದೆಯೋ ಅದೇ ರೀತಿ ವಿದ್ಯುತ್ ರಂಗದ ಮೇಲೆ ನಿಯಂತ್ರಣ ಮತ್ತು ಏಕಸ್ವಾಮ್ಯ ಸಾಧಿಸುವ ಅದಾನಿಯ ಹಿತಾಸಕ್ತಿ ಈ ಪ್ರಸ್ತಾಪಿತ ಕಾಯ್ದೆಯ ಹಿಂದೆ ಅಡಗಿದೆ.





ವಿದ್ಯುತ್ ಮಸೂದೆ ಮಂಡಿಸಿಲ್ಲ, ವಾಪಸು ಪಡೆಯಲೂ ಇಲ್ಲ

– ಟಿ ಯಶವಂತ

ಕೃಷಿ ಕಾಯ್ದೆಗಳ ರದ್ದತಿ, ವಿದ್ಯುತ್ ಮಸೂದೆ ವಾಪಾಸ್ಸಾತಿ ಹಾಗೂ ರೈತರ ಉತ್ಪನ್ನಗಳಿಗೆ ಶಾಸನ ಬದ್ದ ಕನಿಷ್ಠ ಬೆಂಬಲ ಬೆಲೆ ಬೇಡಿಕೆಗಳಿಗೆ ಆಗ್ರಹಿಸಿ ಕಳೆದ ಒಂಬತ್ತು ತಿಂಗಳಿಂದಲೂ ದೆಹಲಿ ಗಡಿಗಳಲ್ಲಿ ರೈತ ಹೋರಾಟ ನಡೆಯುತ್ತಿದೆ. ಈ ಬಗ್ಗೆ ಸಂಸತ್ತಿನಲ್ಲಿ ಚರ್ಚೆಗೆ ಸಿದ್ದವಿಲ್ಲದ ಇದೇ ಕೇಂದ್ರ ಸರ್ಕಾರದ ರೈತ ಕಲ್ಯಾಣ ಮತ್ತು ಕೃಷಿ ಸಚಿವೆ ಶ್ರೀಮತಿ ಶೋಭಾ ಕರಂದ್ಲಾಜೆ ರವರು ಸ್ವತಃ ಗದ್ದೆಗಿಳಿದು ನಾಟಿ ಕೆಲಸದಲ್ಲಿ ಭಾಗಿಯಾಗಿ ಮಾಧ್ಯಮಗಳಿಗೆ ಪೋಟೋ ಪೋಸ್ ನೀಡಿದ್ದಾರೆ.

ಆದರೆ ತಾನೂ ಇರುವ ಸಂಪುಟ ಅನುಮೋದನೆ ನೀಡಿರುವ ವಿದ್ಯುತ್ ಮಸೂದೆ 2021 ರ ಬಗ್ಗೆ ಅಪ್ಪಿ ತಪ್ಪಿಯೂ ಮಾತಾಡಿಲ್ಲ. ಈಗಷ್ಟೇ ಮೊಟುಕುಗೊಂಡು ಮುಕ್ತಾಯವಾದ ಸಂಸತ್ತಿನಲ್ಲಿ ಮಂಡನೆಯಾಗದೇ ಈ ಮಸೂದೆ ಉಳಿದುಕೊಂಡಿದೆ.! ಈ ವಿದ್ಯುತ್ ಮಸ್ರದೆಯನ್ನು ವಾಪಸ್ಸು ಪಡೆಯುವುದಾಗಿ ಪ್ರತಿಭಟನಾ ರೈತರಿಗೆ ಇದೇ ಕೇಂದ್ರ ಸರ್ಕಾರ ವಾಗ್ದಾನ ಮಾಡಿತ್ತು. ಈ ಮಾತನ್ನೂ ಸಹ ಉಳಿಸಿಕೊಳ್ಳಲಿಲ್ಲ.

ಈ ವಿದ್ಯುತ್ ಮಸೂದೆ 2021 ಸಂಸತ್ತಿನಲ್ಲಿ ಮಂಡನೆಯಾಗುವ ದಿನ ಇಡೀ ದೇಶದಾದ್ಯಂತ ವಿದ್ಯುತ್ ಕಾರ್ಮಿಕರು ಮುಷ್ಕರಕ್ಕೆ ತಯಾರಿ ನಡೆಸಿದ್ದರು. ದೇಶದೆಲ್ಲೆಡೆ ರೈತರ ಆಕ್ರೋಶ ಭುಗಿಲೇಳುವ ಸ್ಪಷ್ಟ ಸೂಚನೆಯಿಚಿದಾಗಿ ಈ ಮಸೂದೆ ಮಂಡನೆ ಮುಂದೂಡಲ್ಪಟ್ಟಿದೆ.

ಮೋದಿ ಸರ್ಕಾರ ಅಂಗೀಕರಿಸಿರುವ ಕೃಷಿ ಕಾಯ್ದೆಗಳಿಂದ ವಿದ್ಯುತ್ ಮಸೂದೆ 2021 ಅನ್ನು ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ದೇಶದ ರೈತರಲ್ಲಿ ಶೇಕಡಾ 70 ಕ್ಕೂ ಹೆಚ್ಚು ಇರುವ ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರನ್ನು ಕೃಷಿ ರಂಗದಿಂದಲೇ ಒಕ್ಕಲೆಬ್ಬಿಸುವ ಉದ್ದೇಶದ ಕೃಷಿ ಕಾಯ್ದೆಗಳ ವೇಗವರ್ಧಕವಾಗಿ ಈ ಪ್ರಸ್ತಾಪಿತ ವಿದ್ಯುತ್ ಕಾಯ್ದೆ ಕೆಲಸ ಮಾಡಲಿದೆ.

ನವ ಉದಾರೀಕರಣ ಆರ್ಥಿಕ ನೀತಿಗಳು ಜಾರಿಗೆ ಬಂದ ನಂತರ ದೇಶದ ಪ್ರತಿಯೊಂದು ರಂಗವನ್ನು ಖಾಸಗಿ ಕಾರ್ಪೊರೇಟ್ ದೈತ್ಯರಿಗೆ ವಹಿಸಲು ಮತ್ತು ಅನುಕೂಲ ಕಲ್ಪಿಸಲು ಕಾಯ್ದೆಗಳು ರೂಪುಗೊಂಡಿವೆ.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಆಂದೋಲನ

ವಿದ್ಯುತ್ ರಂಗದ ಇಂತಹ ಒಂದು ಕಾಯ್ದೆಯಾಗಿ ವಿದ್ಯುತ್ ಕಾಯ್ದೆ 2003 ಜಾರಿಗೆ ಬಂತು. ಈ ಕಾಯ್ದೆಯ ಮುಂದಿನ ಅವತರಣಿಕೆಯೇ ವಿದ್ಯುತ್ ಮಸೂದೆ 2021 ಆಗಿದೆ.

ಹಲವಾರು ದಶಕಗಳಿಂದ ರಾಜ್ಯ ಸರ್ಕಾರಗಳಿಂದ ಸ್ಥಾಪಿಸಲ್ಪಟ್ಟು ಅವುಗಳ ಮಾಲೀಕತ್ವದಲ್ಲಿರುವ ವಿದ್ಯುತ್ ಶಕ್ತಿ ಸರಬರಾಜು ಜಾಲವನ್ನು ಖಾಸಗೀಕರಣಗೊಳಿಸುವುದೇ ಈ ಕಾಯ್ದೆಯ ಗುರಿಯಾಗಿದೆ. ಇದನ್ನು ಈ ಮಸೂದೆ ಬಹಳ ಸ್ಪಷ್ಟವಾಗಿ ಹೇಳುತ್ತಿದೆ.

ವಿದ್ಯುತ್ ಶಕ್ತಿಯು ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿ ಇರುವುದನ್ನು ನಿರ್ಲಕ್ಷ್ಯಿಸಿ ಹಲವಾರು ವಿಷಯಗಳ ಮೇಲೆ ರಾಜ್ಯಕ್ಕೆ ಇರುವ ಹಕ್ಕುಗಳನ್ನು ಈ ಮಸೂದೆ ಸಂಪೂರ್ಣವಾಗಿ ತೆಗೆದುಹಾಕುತ್ತದೆ. ಆದರೆ ಜನತೆಯನ್ನು ವಿದ್ಯುತ್ ಶ್ವಕ್ತಿ ದರ ಹೆಚ್ಚಳದ ಅಪಘಾತದಿಂದ ಪಾರು ಮಾಡಲು ಇರುವ ಸಬ್ಸಿಡಿ ಯನ್ನು ನೀಡಲು ಬೇಕಾದ ಹಣಕಾಸಿನ ಭಾರವನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ರಾಜ್ಯಗಳ ಮೇಲೆ ಹಾಕಿದೆ.

ರಾಜ್ಯ ನಿಗಮಗಳಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಕ ಮಾಡುವ ಅಧಿಕಾರವನ್ನು ಈ ಮಸೂದೆ ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ಇಂತಹ ಕ್ರೂರ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರಗಳ ಮೇಲೆ ದಬ್ಬಾಳಿಕೆ ನಡೆಸಲು ಅನುವು ಮಾಡಿಕೊಡುತ್ತದೆ. ಇದು ದೇಶದ ಒಕ್ಕೂಟ ಪದ್ಧತಿಯ ಮೇಲೆ ಮಾಡುವ ಸರ್ವಾಧಿಕಾರಿ ದಾಳಿಯಲ್ಲದೇ ಬೇರೇನಲ್ಲ.

ರಾಜ್ಯಗಳಿಗೆ ತಮ್ಮದೇ ಆದ ಅಭಿವೃದ್ಧಿ ಕಣ್ಣೋಟವನ್ನು ಯೋಜಿಸಲು, ಅಂದಾಜಿಸಲು ಹಾಗೂ ಜಾರಿ ಮಾಡಲು ಅಧಿಕಾರವಿದೆ. ಆದರೆ ಈ ಕಾಯ್ದೆ ಇಂತಹ ಅಧಿಕಾರವನ್ನು ಕಿತ್ತುಕೊಳ್ಳುತ್ತದೆ. ಇದರಿಂದ ಪ್ರತಿಯಾಗಿ ರಾಜ್ಯಗಳ ಅಧಿಕಾರ ನಾಶವಾಗಲಿದೆ. ಈ ಕಾಯ್ದೆ ಸಂಪೂರ್ಣವಾಗಿ ಸಂವಿಧಾನದ ಮೂಲಭೂತ ತತ್ವ ಫೆಡರಲಿಸಂ (ಒಕ್ಕೂಟವಾದ) ಕ್ಕೆ ವಿರುದ್ದವಾಗಿದೆ.

ಈ ಕಾಯ್ದೆಯು ವಿದ್ಯುತ್ ವ್ಯಾಪಾರದ ರಾಷ್ಟ್ರೀಯ ಗಡಿಗಳನ್ನು ಕೂಡ ತೆಗೆದುಹಾಕುತ್ತದೆ ಅಂದರೆ ಮುಕ್ತವಾಗಿ ಯಾವುದೇ ಗಡಿಗಳ ಹಂಗಿಲ್ಲದೇ ಅಫ್ಘಾನಿಸ್ತಾನದ ತಾಲಿಬಾನ್ ಗಳಿಗೆ, ಪಾಕಿಸ್ತಾನ ಗಳಿಗೂ ವಿದ್ಯುತ್ ಪೂರೈಸಬಹುದು. ಇದು ದೇಶದ ಭದ್ರತೆಗೆ ಭಾರೀ ಅಪಾಯವನ್ನು ತಂದೊಡ್ಡುವ ದೇಶದ್ರೋಹಿ ಕ್ರಮ ಕೂಡ ಆಗಿದೆ.

ಈ ಕಾಯ್ದೆಯ ಕಾರಣದಿಂದ ವಿದ್ಯುತ್ ಬೇಡಿಕೆ ಹಾಗೂ ಪೂರೈಕೆಗಳ ನಡುವಿನ ಸಮನ್ವಯ ಹಾಗೂ ನಿಯಂತ್ರಣ ವ್ಯವಸ್ಥೆ ಸಂಪೂರ್ಣವಾಗಿ ಧ್ವಂಸವಾಗುತ್ತದೆ. ಖಾಸಗಿ ಕಂಪನಿಗಳ ಲಾಭಕೋರತನ ಮತ್ತು ವ್ಯಾಪಕವಾದ ಭ್ರಷ್ಟಾಚಾರಕ್ಕೂ ದೊಡ್ಡ ಪ್ರಮಾಣದಲ್ಲಿ ಅವಕಾಶವನ್ನು ಮಾಡಿಕೊಡಲಿದೆ.

ವಿದ್ಯುತ್ ರಂಗದಲ್ಲಿ ಖಾಸಗೀಕರಣ ಕ್ಕೆ ಅವಕಾಶ ಮಾಡಿಕೊಟ್ಟ ವಿದ್ಯುತ್ ಕಾಯ್ದೆ 2003 ರ ನಂತರ ವೇ ವಿದ್ಯುತ್ ಖರೀದಿ ಹಗರಣಗಳು ನಡೆದಿರುವುದನ್ನು ನಾವು ಗಮನಿಸಬಹುದು.

ಉತ್ಪಾದನಾ ಸಾಮರ್ಥ್ಯವನ್ನು ದಕ್ಷವಾಗಿ ಪರಿಸರ ಸ್ನೇಹಿಯಾಗಿ ಬಳಸಿಕೊಳ್ಳುವುದಕ್ಕೆ ಈ ಕಾಯ್ದೆ ಅಡ್ಡಿಯಾಗುತ್ತದೆ. ಖಾಸಗಿ ಕಂಪನಿಗಳಿಗೆ ಲಾಭ ಮಾತ್ರವೇ ಮುಖ್ಯವಾಗುವ್ಯದರಿಂದ ಈ ಕಾಯ್ದೆಯಿಂದ ಪರಿಸರ ನಾಶಕ್ಕೆ ಅತಿ ಹೆಚ್ಚಿನ ಉತ್ತೇಜನ ಸಿಗಲಿದೆ.

ವಿದ್ಯುತ್ ದರ ಏರಿಕೆಯ ಪ್ರಸ್ತಾಪಕ್ಕೆ ಸಾರ್ವಜನಿಕ ಅಹವಾಲು ಆಲಿಸಿ, ಪರಿಣಾಮಗಳನ್ನು ಅಂದಾಜಿಸುವ ಕರ್ನಾಟಕ ವಿದ್ಯುತ್ ಚ್ವಕ್ತಿ ನಿಯಂತ್ರಣ ಆಯೋಗ **(KERC)** ದಂತಹ ನಿಯಂತ್ರಕ ವ್ಯವಸ್ಥೆ ರದ್ದಾಗಿ ಕೃಷಿಕರು, ನೇಕಾರರು, ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಅಹವಾಲಿಗೆ ಈ ಕಾಯ್ದೆಯಿಂದ ಅವಕಾಶವೇ ಇರುವುದಿಲ್ಲ.

ಈ ಕಾಯ್ದೆಯಿಂದ ನಿಗಮಗಳ ನಡುವೆ ಅಂದರೆ ನಗರ ಪ್ರದೇಶದ ವಿದ್ಯುತ್ ನಿಗಮಗಳು ಹಾಗೂ ಗ್ರಾಮೀಣ ಪ್ರದೇಶದ ನಿಗಮಗಳ ನಡುವೆ ಇದ್ದ ಕ್ರಾಸ್ ಸಬ್ಸಿಡಿ ಮತ್ತು ಗೃಹ ಬಳಕೆ ಹಾಗೂ ವಾಣಿಜ್ಯ ಬಳಕೆ ಗ್ರಾಹಕರುಗಳ ನಡುವೆ ಇದ್ದ ಕ್ರಾಸ್ ಸಬ್ಸಿಡಿಗಳು ರದ್ದಾಗಲಿವೆ. ಇದರಿಂದಾಗಿ ನಿರುದ್ಯೋಗ ಬಹಳಷ್ಟು ಹೆಚ್ಚಲಿದೆ. ನೀರಾವರಿ ಪಂಪ್ ಸೆಟ್ ಗಾಗಲಿ, ಕುಟೀರ ಜ್ಯೋತಿ – ಭಾಗ್ಯಜ್ಯೋತಿ ಬಳಕೆದಾರರಿಗಾಗಲಿ ರಿಯಾಯಿತಿ ವಿದ್ಯುತ್ ಸೌಲಭ್ಯ ವಿದ್ಯುತ್ ಕಂಪನಿಗಳಿಂದ ಸಿಗುವುದಿಲ್ಲ.

ವಿದ್ಯುತ್ ವಿತರಣೆಯಲ್ಲಿ ಫ್ರಾಂಚೈಸಿಗಳು, ಗುತ್ತಿಗೆ, ಹೊರಗುತ್ತಿಗೆ, ಏಜೆಂಟ್–ದಲ್ಲಾಳಿಗಳ ವ್ಯವಸ್ಥೆ ಜಾರಿಗೆ ಈ ಕಾಯ್ದೆ ಅವಕಾಶ ಮಾಡಿ ಕೊಡಲಿದೆ.

ಚಿಲ್ಲರೆ ವಹಿವಾಟಿನ ಮೇಲೆ ನಿಯಂತ್ರಣ ಮತ್ತು ಏಕಸ್ವಾಮ್ಯ ಸಾಧಿಸಲು ಅಂಬಾನಿಯ ಹಿತಾಸಕ್ತಿ ಹೇಗೆ ಕೃಷಿ ಕಾನೂನುಗಳ ಜಾರಿಯ ಹಿಂದೆ ಕೆಲಸ ಮಾಡಿದೆಯೋ ಅದೇ ರೀತಿ ವಿದ್ಯುತ್ ರಂಗದ ಮೇಲೆ ನಿಯಂತ್ರಣ ಮತ್ತು ಏಕಸ್ವಾಮ್ಯ ಸಾಧಿಸುವ ಅದಾನಿಯ ಹಿತಾಸಕ್ತಿ ಈ ಪ್ರಸ್ತಾಪಿತ ಕಾಯ್ದೆಯ ಹಿಂದೆ ಅಡಗಿದೆ. ವಿದ್ಯುತ್ ಆಟೋ ಮೊಬೈಲ್ ಇಂಡಸ್ಟ್ರೀಯ ವಹಿವಾಟಿನ ಮೇಲೆ ಏಕಸ್ವಾಮ್ಯ ಸಾಧಿಸಲು ವಿದ್ಯುತ್ ಉತ್ಪಾದನೆ, ಸರಬರಾಜು, ವಿತರಣೆ ಮೇಲೆ ಏಕಸ್ವಾಮ್ಯ ಸಾಧಿಸಲು ಅದಾನಿಯಂತಹ ಕಾರ್ಪೊರೇಟ್ ದೈತ್ಯರಿಗೆ ನೆರವಾಗುವುದು ಈ ಮಸೂದೆಯ ಗುಪ್ತ ಕಾರ್ಯಸೂಚಿಯಾಗಿದೆ.

ಕೃಷಿ ಆರ್ಥಿಕತೆ ಮೇಲೆ ಈ ಕಾಯ್ದೆ ಅತ್ಯಂತ ಕೆಟ್ಟ ಪರಿಣಾಮಗಳನ್ನು ಉಂಟುಮಾಡುತ್ತದೆ. ರಾಜ್ಯದಲ್ಲಿ ಸುಮಾರು 25 ಲಕ್ಷ ಸಕ್ರಮ ಪಂಪ್ ಸೆಟ್ ಗಳು ಸೇರಿ ಸುಮಾರು 40 ಲಕ್ಷ ನೀರಾವರಿ ಪಂಪ್ ಸೆಟ್ ಗಳು ಇವೆ. ದುಬಾರಿ ವಿದ್ಯುತ್ ದರಗಳಿಂದಾಗಿ ದೇಶದೆಲ್ಲೆಡೆ ಕೋಟ್ಯಾಂತರ ಕೃಷಿಕರು ದಿವಾಳಿಯಾಗಲಿದ್ದಾರೆ. ಇದರಿಂದ ಆಹಾರದ ಬೆಲೆಗಳ ತೀವ್ರ ಏರಿಕೆ ಜೊತೆಗೆ ದೇಶದ ಆಹಾರ ಭದ್ರತೆಗೆ ಭಾರೀ ದೊಡ್ಡ ಅಪತ್ತು ಬರಲಿದೆ.

ಸಾರ್ವಜನಿಕ ತೆರಿಗೆ ಹಣದಿಂದ ನಿರ್ಮಿಸಿರುವ ಸರ್ಕಾರಿ ಪವರ್ ಗ್ರಿಡ್ ಮುಂತಾದ ಮೂಲಭೂತ ಸೌಕರ್ಯಗಳು ಪೂರ್ತಿಯಾಗಿ ಖಾಸಗಿ ಕೈಗಳಿಗೆ ಹಸ್ತಾಂತರ ವಾಗುವುದರಿಂದ ಗ್ರಿಡ್ ಚಾನಲ್ ಗಳನ್ನು ಮರು ಜೋಡಿಸಿಕೊಳ್ಳುತ್ತಾರೆ ಮತ್ತು ಪ್ರತ್ಯೇಕ ಗ್ರಿಡ್ ಗಳನ್ನು ಸ್ಥಾಪಿಸಿಕೊಳ್ಳುತ್ತಾರೆ. ಇದರಿಂದ ಮೀಟರ್ ಕಿತ್ತು ಹಾಕಿದರೂ ಪಂಪ್ ಸೆಟ್ ಗಳಿಗೆ ವಿದ್ಯುತ್ ಪೂರೈಕೆ ಯ ಜಾಲವೇ ಇಲ್ಲದಂತಾಗುತ್ತದೆ.

ಈಗ ಇರುವ ದುಬಾರಿ ವಿದ್ಯುತ್ ದರದಿಂದ ದೇಶದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ನರಳುತ್ತಿವೆ. ಖಾಸಗೀಕರಣಗೊಂಡ ಮೇಲೆ ಈ ವಿದ್ಯುತ್ ದರಗಳು ಮತ್ತಷ್ಟು ದುಬಾರಿಯಾಗುವ್ಯದರಿಂದ ಈ ಕ್ಷೇತ್ರಗಳ ಉತ್ಪಾದನೆ ಮತ್ತು ಉದ್ಯೋಗದ ಪರಿಸ್ಥಿತಿ ಸಂಪೂರ್ಣ ನಾಶವಾಗಲಿದೆ.

ಇತ್ತೀಚೆಗೆ ಕರ್ನಾಟಕದ ನೂತನ ವಿದ್ಯುತ್ ಮಂತ್ರಿ ಸುನೀಲ್ ಕುಮಾರ್, ಪಂಪ್ ಸೆಟ್ ಗಳಿಗೆ ವಿದ್ಯುತ್ ಮೀಟರ್ ಅಳವಡಿಸುವುದಿಲ್ಲ, ಇವೆಲ್ಲಾ ಊಹಾಪೋಹ ಎಂದು ಹೇಳಿಕೆ ನೀಡಿದ್ದಾರೆ. ಇದೇ ರೀತಿ ಕಳೆದ ವರ್ಷ ಕೂಡ ಎ.ಪಿ.ಎಂ.ಸಿ ಕಾಯ್ದೆ ತಿದ್ದುಪಡಿಯಿಂದ ಎ.ಪಿ.ಎಂ.ಸಿ ಗಳು ಮುಚ್ಚುವುದಿಲ್ಲ ಎಂದು ಹೇಳಿದ್ದರು. ಆದರೆ ಕೇವಲ ಒಂದೇ ವರ್ಷದಲ್ಲಿ ರಾಜ್ಯದ ಎಪಿಎಂಸಿ ಗಳು ಮುಚ್ಚುವ ಹಂತಕ್ಕೆ ಬಂದಿವೆ. ಪಂಪ್ ಸೆಟ್ ಗಳಿಗೆ ಮೀಟರ್ ಹಾಕಲಿಲ್ಲ ಅಂದರೆ ವಿದ್ಯುತ್ ಸಂಪರ್ಕವೇ ಇರುವುದಿಲ್ಲ!

ನೋಟು ರದ್ದು, ಜಿಎಸ್ ಟಿ ಮುಂತಾದ ಕ್ರಮಗಳಿಂದ ಈಗಾಗಲೇ ಭಾರೀ ಸಂಕಟದಲ್ಲಿರುವ ರೈತರು, ಸಣ್ಣ ಕೈಗಾರಿಕೆಗಳು ಈ ವಿದ್ಯುತ್ ಕಾಯ್ದೆಯಿಂದ ಮೇಲೆ ಏಳಲಾರದ ಹೊಡೆತ ಅನುಭವಿಸಲಿದ್ದಾರೆ.

ವಿದ್ಯುತ್ ಕ್ಷೇತ್ರದ ಕಾರ್ಮಿಕರು ಅತ್ಯಂತ ಕೆಟ್ಟ ರೀತಿಯಲ್ಲಿ ಬಲಿಪಶುಗಳಾಗಲಿದ್ದಾರೆ. ಬಹುಸಂಖ್ಯಾತ ಖಾಯಂ ನೌಕರರು ಹಂಗಾಮಿ ನೌಕರರಾಗಿ ಪರಿವರ್ತಿತರಾಗಲಿದ್ದಾರೆ. ಹೊರಗುತ್ತಿಗೆ, ಗುತ್ತಿಗೆ ಆಧಾರದ ನೇಮಕಾತಿ ಹಾಗೂ ಫ್ರಾಂಚೈಸಿ ಗಳನ್ನು ತೊಡಗಿಸಿಕೊಳ್ಳುವುದು ಸರ್ವೆ ಸಾಮಾನ್ಯವಾಗಲಿದೆ. ವೇತನ, ಸಾಮಾಜಿಕ ಭದ್ರತೆಯೂ ಸೇರಿದಂತೆ ಎಲ್ಲಾ ಕಾನೂನಾತ್ಮಕ ಸೌಲಭ್ಯ ಮತ್ತು ಪರಿಹಾರ–ಸವಲತ್ತುಗಳಲ್ಲಿ ತೀವ್ರ ಕಡಿತ ಉಂಟಾಗುತ್ತದೆ. ಇದರಿಂದ ವಿದ್ಯುತ್ ರಂಗದ ಕಾರ್ಮಿಕರು ಬೀದಿಗೆ ಬೀಳುತ್ತಾರೆ.

ಇಂದಿನ ಆಧುನಿಕ ಆರ್ಥಿಕತೆಯಲ್ಲಿ ವಿದ್ಯುತ್ ಮತ್ತು ಸಾರಿಗೆ ಅತ್ಯಂತ ಆಯಕಟ್ಟಿನ ಕ್ಷೇತ್ರಗಳಾಗಿವೆ. ಈ ಕ್ಷೇತ್ರಗಳ ಖಾಸಗೀಕರಣವು ಇಡೀ ದೇಶವನ್ನೇ ದಿವಾಳಿಯಂಚಿಗೆ ಕೊಂಡೊಯ್ಯಲಿದೆ. ಎನ್ರೋನ್ ನಂತಹ ವಿದ್ಯುತ್ ಹಗರಣಗಳು ಇನ್ನು ಮುಂದೆ ಸರಣಿಯೋಪಾದಿಯಲ್ಲಿ ಬರಲಿವೆ. ಅದ್ದರಿಂದ ಈ ಕಾಯ್ದೆ ಕುರಿತು ಜಾಗೃತಿ ಬೆಳೆಸಿಕೊಂಡು ವಿದ್ಯುತ್ ಖಾಸಗೀಕರಣದ ವಿರುದ್ಧ ನಡೆಯುತ್ತಿರುವ ಪ್ರತಿರೋಧದಲ್ಲಿ ಎಲ್ಲರೂ ಭಾಗವಹಿಸಬೇಕಾಗಿದೆ. ಬೆಂಬಲಕ್ಕೆ ನಿಲ್ಲಬೇಕಿದೆ.

ಭಾಷಾ ನೀತಿ ಅರ್ಥಮಾಡಿಕೊಳ್ಳಿ-ಪತ್ರ ಬರೆದ ಭಾಷೆಯಲ್ಲೇ ಉತ್ತರಿಸಿ: ಕೇಂದ್ರಕ್ಕೆ ಮದ್ರಾಸ್ ಹೈಕೋರ್ಟ್ ಪೀಠದ ನಿರ್ದೇಶನ



'ಕೇಂದ್ರ ಸರ್ಕಾರವು ದೇಶದ ಪ್ರತಿ ಭಾಷೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅದರ ಮಹತ್ವ ಮತ್ತು ಬೆಳವಣಿಗೆಗೆ ಅಗತ್ಯ ಕ್ರಮಗಳನ್ನು ವಹಿಸಬೇಕು ಎಂದು ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿದೆ.

ತಮಿಳುನಾಡು ಹಾಗೂ ಪುದುಚೇರಿಗಳಲ್ಲಿ ಸಿಆರ್‌ಪಿಎಫ್ ಅರೆ ವೈದ್ಯಕೀಯ ಸಿಬ್ಬಂದಿ ನೇಮಕಕ್ಕೆ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಮಧುರೈ ಲೋಕಸಭಾ ಕ್ಷೇತ್ರದ ಸಿಪಿಐ(ಎಂ)ನ ಸಂಸದ ವೆಂಕಟೇಶನ್ ಅವರು ಕೇಂದ್ರ ಗೃಹ ಖಾತೆ ರಾಜ್ಯ ಸಚಿವರಿಗೆ ಪತ್ರವನ್ನು ಬರೆದಿದ್ದರು.

"ಗ್ರೂಪ್ ಬಿ ಹಾಗೂ ಗ್ರೂಪ್ ಸಿ ನಲ್ಲಿರುವ ಖಾಲಿ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಬರೆಯಲು ಸರ್ಕಾರ ಪರೀಕ್ಷಾ ಕೇಂದ್ರವನ್ನು ನಿರ್ಮಿಸಿಲ್ಲ. ಹೀಗಾಗಿ ಗೃಹ ವ್ಯವಹಾರಗಳ ಸಚಿವಾಲಯಕ್ಕೆ ನಾನು ಅಕ್ಟೋಬರ್ 9ರಂದು ಪತ್ರ ಬರೆದಿದ್ದೆ. ಈ ಪ್ರದೇಶದಲ್ಲಿ ಒಂದು ಪರೀಕ್ಷಾ ಕೇಂದ್ರವನ್ನಾದರೂ ನಿರ್ಮಿಸಬೇಕು ಎಂದು ಕೇಳಿದ್ದೆ. ನನಗೆ ನವೆಂಬರ್ 9ರಂದು ಕೇಂದ್ರ ಗೃಹ ಸಚಿವಾಲಯದಿಂದ ಹಿಂದಿಯಲ್ಲಿ ಪತ್ರ ಬಂತು. ಆದರೆ ಅವರು ಏನು ಹೇಳುತ್ತಿದ್ದಾರೆ ಎಂಬುದು ನನಗೆ ಅರ್ಥವಾಗಿಲ್ಲ' ಎಂದು ವೆಂಕಟೇಷನ್ ಪತ್ರದಲ್ಲಿ ಉಲ್ಲೇಖಿಸಿದ್ದರು.

ಆದರೆ, ಸಂಸದ ವೆಂಕಟೇಶನ್ ಅವರು ಇಂಗ್ಲೀಷಿನಲ್ಲಿ ಪತ್ರವನ್ನು ಬರೆದರೆ ಕೇಂದ್ರದಿಂದ ಹಿಂದಿಯಲ್ಲಿ ಉತ್ತರ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ಸಂಸದರು ನ್ಯಾಯಾಲಯದ ಮೊರೆಹೋದರು.

ನ್ಯಾಯಮೂರ್ತಿ ಎನ್ ಕಿರುಬಾಕರನ್ ಹಾಗೂ ಎಂ ದೊರೈಸ್ವಾಮಿ ಅವರಿದ್ದ ವಿಭಾಗೀಯ ಪೀಠ, ಮಧುರೈ ಸಂಸದ ವೆಂಕಟೇಶನ್ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಸಂವಿಧಾನದ ಕಲಮು 350 ಅನ್ನು ಉಲ್ಲೇಖಿಸಿ, ಕೇಂದ್ರ ಅಥವಾ ರಾಜ್ಯಗಳಲ್ಲಿ ಬಳಸುವ ಯಾವುದೇ ಭಾಷೆಯಲ್ಲಿ ಕೇಂದ್ರಕ್ಕೆ ಪತ್ರ ಬರೆಯಬಹುದಾಗಿದೆ. ಇಂಗ್ಲಿಷ್‌ನಲ್ಲಿ ಪತ್ರ ಬರೆದರೆ ಕೇಂದ್ರ ಸರ್ಕಾರ ಅದಕ್ಕೆ ಇಂಗ್ಲಿಷ್ ಭಾಷೆಯಲ್ಲಿಯೇ ಉತ್ತರಿಸಬೇಕು. ಇದು ಅಧಿಕೃತ ಭಾಷೆಗಳ ಕಾಯ್ದೆಗೆ ಅನ್ವಯ ಎಂದು ನ್ಯಾಯಪೀಠ ಸ್ಪಷ್ಟವಾಗಿ ತಿಳಿಸಿದೆ.

ನ್ಯಾಯಪೀಠವು ರಾಜ್ಯದ ಅಧಿಕಾರಿಗಳಾಗಲಿ, ಜನತೆ, ಸಂಸದರು ಹಾಗೂ ಜನಪ್ರತಿನಿಧಿಗಳು ಯಾವ ಭಾಷೆಯಲ್ಲಿ ಕೇಂದ್ರ ಸರ್ಕಾರದೊಂದಿಗೆ ನಡೆಸುವ ಪತ್ರ ವ್ಯವಹಾರದಲ್ಲಿ ಅವರಿಗೆ ಅದೇ ಭಾಷೆಯಲ್ಲಿಯೇ ಪ್ರತಿಕ್ರಿಯೆ ನೀಡಬೇಕು ಎಂದು ತಿಳಿಸಿದೆ. ಕೇಂದ್ರ ಸರಕಾರಕ್ಕೆ ಸಂಸದರು ಇಂಗ್ಲಿಷ್‌ನಲ್ಲಿ ಪತ್ರವನ್ನು ಬರೆದರು, ಆದರೆ ಅವರಿಗೆ ಹಿಂದಿಯಲ್ಲಿ ಉತ್ತರ ನೀಡಿರುವುದು ಸರಿಯಲ್ಲ ಎಂದು ನ್ಯಾಯಾಲಯ ಹೇಳಿದ್ದು, 1963ರ ಅಧಿಕೃತ ಭಾಷಾ ಕಾಯ್ದೆಯನ್ನು, ಅದರಲ್ಲೂ ಮುಖ್ಯವಾಗಿ ಸೆಕ್ಷನ್ 3 ಅನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಇದನ್ನು ಉಲ್ಲೇಖಿಸಿದ್ದ ನ್ಯಾಯಪೀಠ, 'ಈ ಪ್ರಕರಣದಲ್ಲಿ, ಹಿಂದಿಯಲ್ಲಿ ಉತ್ತರ ನೀಡುವುದು ಕಾನೂನು ಉಲ್ಲಂಘನೆ' ಎಂದು ತಿಳಿಸಿದೆ.

ಕೇಂದ್ರ ಸರ್ಕಾರ ಈ ಕುರಿತು ಅರ್ಥ ಮಾಡಿಕೊಳ್ಳಬೇಕು ಹಾಗೂ ಇದನ್ನು ಉಲ್ಲಂಘನೆ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ದಿಲ್ಲಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲೂ ಜಾತಿನಿಂದನೆ, ಹಿಂಸಾಚಾರ

ಸ್ವಾತಂತ್ರ್ಯ ದಿನಾಚರಣೆಯಂದು (ಆಗಸ್ಟ್ 15, 2021) ರಾಜಧಾನಿ ದಿಲ್ಲಿಯ ಬಳಿಯಿರುವ ತುಘಲಕಾಬಾದ್ ಗ್ರಾಮದ ಜಾಟವ್ ಮೊಹಲ್ಲಾದಲ್ಲಿ ವಾಸಿಸುತ್ತಿರುವ ದಲಿತ ಕುಟುಂಬಗಳು ಸ್ವಾತಂತ್ರ್ಯೋತ್ಸವ ನಡೆಸುವ ಸಮಯದಲ್ಲಿ ಅವರ ಮೇಲೆ ಬರ್ಬರ ದಾಳಿ ನಡೆದಿದೆ ಎಂದು ವರದಿಯಾಗಿದೆ. ಈ ಕುರಿತು ತಕ್ಷಣವೇ ಕ್ರಮ ಕೈಗೊಳ್ಳಬೇಕು. ಜಾತಿನಿಂದನೆ ಮಾಡಿದ ತಪ್ಪಿತಸ್ಥರನ್ನು ಕೂಡಲೇ ಬಂಧಿಸಬೇಕು ಎಂದು

ಸಿಪಿಐ (ಎಂ) ನ ದೆಹಲಿ ರಾಜ್ಯ ಸಮಿತಿ ಕಾರ್ಯದರ್ಶಿ ಕೆಎಂ ತಿವಾರಿ ದಿಲ್ಲಿ ಪೋಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಆ ಪ್ರದೇಶದ ಸುಮಾರು 50 ದಲಿತರು ಅಂಬೇಡ್ಕರ್ ಪ್ರತಿಮೆ ಬಳಿ ಖಾಲಿ ಜಾಗದಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸುವ ಮೂಲಕ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ಪ್ರಯತ್ನಿಸಿದಾಗ ಅದೇ ಪ್ರದೇಶದ ಸುಮಾರು 30–35 ಗುಜ್ಜಾರರು ಮೊದಲು ಜಾತಿವಾದಿ ನಿಂದನೆಯನ್ನು ಬಳಸಿದರು. ಅವರನ್ನು ಪ್ರಚೋದಿಸಲು ಪ್ರಯತ್ನಿಸಿದರು ಮತ್ತು ನಂತರ ಅವರ ಆಚರಣೆಯನ್ನು ನಿಲ್ಲಿಸಲು ಇಟ್ಟಿಗೆಗಳಿಂದ ದಾಳಿ ಮಾಡಿದರು.

ಈ ಬಗ್ಗೆ ದೆಹಲಿ ಪೋಲೀಸರಿಗೆ ಮಾಹಿತಿ ನೀಡಲಾಗಿತ್ತು. ಪೋಲೀಸರು ಅಲ್ಲಿದ್ದರು, ಆದರೆ ಅವರು ದಲಿತ ಕುಟುಂಬಗಳ ಮೇಲೆ ಈ ದಾಳಿಯ ಮೂಕಪ್ರೇಕ್ಷಕರಂತಿದ್ದರು. ಈ ಘಟನೆಯಲ್ಲಿ ಗಾಯಗೊಂಡ ಎಲ್ಲ 6 ಮಂದಿ ದಲಿತ ಕುಟುಂಬಗಳಿಂದ ಬಂದವರು ಮತ್ತು ಅಪರಾಧಿಗಳು ಯಾರೆಂದು ಗುರುತಿಸಲಾಗಿದೆ. ಆದರೆ ಇವರೆಲ್ಲ ಇನ್ನೂ ಆ ಪ್ರದೇಶದಲ್ಲಿಯೇ ನಿರ್ಭಯವಾಗಿ ಅಡ್ಡಾಡಿಕೊಂಡಿದ್ದಾರೆ ಎಂದು ಸಿಪಿಐ (ಎಂ) ನಿಯೋಗ ಈ ದಲಿತ ಕುಟುಂಬಗಳನನು ಭೇಟಿ ಮಾಡಿದಾಗ ಹೇಳಿದರು. ತಮ್ಮ ಹಿಂದಿನ ತಲೆಮಾರುಗಳು ಈಗ ಎ.ಎಸ್.ಐ. ಅಡಿಯಲ್ಲಿರುವ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದವು. ಭೂ ಮಾಫಿಯಾ ಈಗಾಗಲೇ ಈ ಭೂಮಿಯ ಬಹುಭಾಗವನ್ನು ಆಕ್ರಮಿಸಿಕೊಂಡಿದೆ ಮತ್ತು ಈಗ ಅವರು ಅಂಬೇಡ್ಕರ್ ಪ್ರತಿಮೆಯ ಪಕ್ಕದಲ್ಲಿರುವ ಖಾಲಿ ಜಾಗವನ್ನು ಸಹ ಆಕ್ರಮಿಸಿಕೊಳ್ಳಲು ಬಯಸುತ್ತಾರೆ ಎಂದು ಅವರು ಹೇಳಿದರು.

ಸಿಪಿಐ (ಎಂ) ದೆಹಲಿ ರಾಜ್ಯ ಸಮಿತಿಯು ಜಾತಿವಾದಿ ಹಿಂಸಾಚಾರದ ಅಪರಾಧಿಗಳನ್ನು ತಕ್ಷಣವೇ ಬಂಧಿಸಬೇಕು ಮತ್ತು ಭೂ ಮಾಫಿಯಾದಿಂದ ಜಾಟವ್ ಮೊಹಲ್ಲಾದ ಅತಿಕ್ರಮಣವನ್ನು ತಡೆಯಲು ಮೂರ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಕಾರ್ಮಿಕ ಆಂದೋಲನದ ಮುಂದಿರುವ ಐತಿಹಾಸಿಕ ಜವಾಬ್ದಾರಿ

ಪುಟ 11 ರಿಂದ

ವೈರುಧ್ಯಮಯ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಭಾರತದಲ್ಲಿ, ಉನ್ನತ ತಂತ್ರಜ್ಞಾನದ ಕೈಗಾರಿಕೆಗಳೊಂದಿಗೆ ಅಕ್ಕಪಕ್ಕದಲ್ಲಿ ಹಳೆಯ ಉತ್ಪಾದನಾ ವಿಧಾನದೊಂದಿಗೆ ಹೆಚ್ಚಿನ ಸಂಖ್ಯೆಯ ಸಾಂಪ್ರದಾಯಿಕ ಕೈಗಾರಿಕೆಗಳಿವೆ. ಉದಾಹರಣೆಗೆ, ಆಧುನೀಕರಿಸಿದ ಉಕ್ಕಿನ ಕೈಗಾರಿಕೆಗಳು, ಆಟೋಮೊಬೈಲ್ ಮತ್ತು ಪೆಟ್ರೋ–ಕೆಮಿಕಲ್ ಅಥವಾ ಬಿಹೆಚ್‌ಇಎಲ್ ನಂತಹ ಕೈಗಾರಿಕೆಗಳು ಉತ್ಪಾದನೆಗೆ ಉನ್ನತ ತಂತ್ರಜ್ಞಾನವನ್ನು ಬಳಸುತ್ತವೆ, ಮತ್ತು ಇದರ ಪರಿಣಾಮವಾಗಿ ಹೆಚ್ಚು ನುರಿತ ಕಾರ್ಮಿಕ ಬಲ ಬೇಕಾಗುತ್ತದೆ; ಸಾಂಪ್ರದಾಯಿಕ ಕೈಗಾರಿಕೆಗಳಾದ ಸೆಣಬಿನ ಅಥವಾ ಜವಳಿ ಹಳೆಯ ಉತ್ಪಾದನಾ ವಿಧಾನಗಳನ್ನು, ಯಾವುದೇ ಸರಿಯಾದ ಆಧುನೀಕರಣವಿಲ್ಲದೆ ಬಳಸುತ್ತವೆ. ಇಲ್ಲಿ ದೈಹಿಕ ಶ್ರಮವು ಸರಕುಗಳ ಉತ್ಪಾದನೆಯಲ್ಲಿ ಹೆಚ್ಚು ಪ್ರಾಬಲ್ಯ ಹೊಂದಿದೆ. ಆದ್ದರಿಂದ ಆಧುನೀಕರಿಸಿದ ಕಾರ್ಖಾನೆಗಳಲ್ಲಿನ ಕಾರ್ಯಪಡೆ ಮತ್ತು ಸಾಂಪ್ರದಾಯಿಕ ಕಾರ್ಖಾನೆಗಳ ನಡುವಿನ ವ್ಯತ್ಯಾಸವು ತುಂಬಾ ಸ್ಪಷ್ಟವಾಗಿದೆ. ಹೆಚ್ಚಿನ ಕೌಶಲ್ಯ ಮತ್ತು ತಾಂತ್ರಿಕ ಹಿನ್ನೆಲೆಯುಳ್ಳ ಹಿಂದಿನ ಕೈಗಾರಿಕೆಗಳಲ್ಲಿ ಆಧುನಿಕ ಕಾರ್ಮಿಕ ವರ್ಗದ ಎಲ್ಲಾ ಗುಣಲಕ್ಷಣಗಳೊಂದಿಗೆ ಉದ್ಯೋಗಿಗಳು ನಿಜವಾಗಿಯೂ ಹೊರಹೊಮ್ಮಿದ್ದಾರೆ ಎಂದು ಹೇಳಬಹುದು – ಹೆಚ್ಚಿನ ಕೌಶಲ್ಯ, ಹೆಚ್ಚಿನ ವೇತನ ಮತ್ತು ಉತ್ತಮ ಕೆಲಸದ ಪರಿಸ್ಥಿತಿಗಳು. ಆದ್ದರಿಂದ ಆಧುನಿಕ ಕಾರ್ಮಿಕ ವರ್ಗವು ಸಾಂಪ್ರದಾಯಿಕ ಕಾರ್ಮಿಕ ವರ್ಗದೊಂದಿಗೆ ಅಕ್ಕಪಕ್ಕದಲ್ಲಿದೆ.

ಭಾರತದ ಅಸಂಘಟಿತ ವಲಯದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ, ವೇತನದ ನಿಬಂಧನೆಗಳು, ಮನವೊಪ್ಪದ ದುಡಿತ, ಏಕತಾನತೆ ಮತ್ತು ಪರಿಸರ ಸ್ಥಿತಿಯ ವಿಷಯದಲ್ಲಿ ಕೆಲಸದ ಪರಿಸ್ಥಿತಿಗಳು ತುಂಬಾ ಕೆಟ್ಟದಾಗಿವೆ.

ಈ ವೈರುಧ್ಯಮಯ ಸ್ಥಿತಿ ಮತ್ತು ಅಸಮ ಸನ್ನಿವೇಶಗಳು ಭಾರತದ ಕಾರ್ಮಿಕ ವರ್ಗದ ರಚನೆಯಲ್ಲಿ ಪ್ರಮುಖ ಅಂಶಗಳಾಗಿವೆ.

ಭಾರತದ ಕಾರ್ಮಿಕ ವರ್ಗದ ರಚನೆಯು ಕೆಲವು ಅಂಶಗಳಿಂದ ಮತ್ತಷ್ಟು ಪರಿಣಾಮ ಹೊಂದುತ್ತದೆ. ಅದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ರಾಂತಿ, ಅಥವಾ ಏಕಸ್ವಾಮ್ಯ ಬಂಡವಾಳಶಾಹಿಯ ಅವಧಿಯಲ್ಲಿ, ಬಂಡವಾಳಶಾಹಿ–ಪೂರ್ವದ ಸಂಬಂಧಗಳದ್ದಾಗಿದೆ. ಇವು ಕಾರ್ಮಿಕರ ಜಾತಿ, ಬುಡಕಟ್ಟು ಅಥವಾ ಜನಾಂಗೀಯ ಮೂಲ ಮತ್ತು ಸೇವಾ ನಿಯಮಾವಳಿಯಲ್ಲಿ ಗಂಡು ಮತ್ತು ಹೆಣ್ಣು ನಡುವಿನ ಪಿತೃಪ್ರಾಧಾನ್ಯತೆ–ಸಂಬಂಧಿತ, ಲಿಂಗ ಆಧಾರಿತ ತಾರತಮ್ಯದ ಪರಿಸ್ಥಿತಿ. ಇದು ಜಾತಿ, ಜನಾಂಗೀಯತೆ ಮತ್ತು ಲಿಂಗಕ್ಕೆ ಸಂಬಂಧಿಸಿ ಕಾರ್ಮಿಕ ವರ್ಗದಲ್ಲಿ ವಿಭಿನ್ನ ರೀತಿಯ ಅಸಮಾನತೆಗಳಿಗೆ ಕಾರಣವಾಗುತ್ತದೆ.

ವೇತನದಲ್ಲಿನ ಅಸಮಾನತೆ ಮತ್ತು ಜಾತಿ ಮತ್ತು ಜನಾಂಗೀಯತೆಗೆ ಸಂಬಂಧಿಸಿದ, ಲಿಂಗ ಪಕ್ಷಪಾತವು ಭಾರತದ ಕಾರ್ಮಿಕ ವರ್ಗದ ರಚನೆಯಲ್ಲಿ ಪ್ರಮುಖ ಅಂಶವಾಗಿದೆ. ಸಣ್ಣ ಕಾರ್ಖಾನೆಗಳಲ್ಲಿ ಗುತ್ತಿಗೆ ಅಥವಾ ಪ್ರಾಸಂಗಿಕ ಕಾರ್ಮಿಕರಾಗಿ ಅಥವಾ ಬೀಡಿ (ಸಿಗರೇಟ್‌ನ ಕೆಳಮಟ್ಟದ ರೂಪ) ತಯಾರಿಕೆಯಲ್ಲಿ ಮನೆಯಲ್ಲಿ ಕೆಲಸ ಮಾಡುವಂತ ಮಹಿಳಾ ಕಾರ್ಮಿಕರು ಪ್ರಧಾನವಾಗಿ ಕಾರ್ಮಿಕ ವರ್ಗದ ಕಡಿಮೆ ಸಂಬಳದ ವಿಭಾಗದಲ್ಲಿದ್ದಾರೆ.

ಭಾರತದ ಪರಿಸ್ಥಿತಿಯನ್ನು ಇಲ್ಲಿ ಚರ್ಚಿಸಲಾಗಿದೆ, ಏಕೆಂದರೆ ಭಾರತವು ಅಸಂಖ್ಯಾತ ಕ್ಷೇತ್ರಗಳಲ್ಲಿ ದೊಡ್ಡ ಸಂಖ್ಯೆಯ ಕಾರ್ಮಿಕ ವರ್ಗ ಮತ್ತು ಅಸಂಘಟಿತ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರನ್ನು ಹೊಂದಿರುವ ಮತ್ತು ಕಾರ್ಮಿಕ ವರ್ಗದ ಅನೇಕ ವಿಶಿಷ್ಟತೆಗಳನ್ನು ಹೊಂದಿರುವ ಮತ್ತು ಆದರೆ ಅದೇ ಸಮಯದಲ್ಲಿ ಬಲವಾದ ಬಹಳ ದೊಡ್ಡ ಟ್ರೇಡ್ ಯೂನಿಯನ್ ಆಂದೋಲನವಿರುವ ದೇಶವಾಗಿದೆ. ಬಲವಾದ ಟ್ರೇಡ್ ಯೂನಿಯನ್ ಚಳವಳಿಯೊಂದಿಗೆ, ವಿವಿಧ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭಯೋತ್ಪಾದಕ ಗುಂಪುಗಳು, ಜಾತಿ, ಜನಾಂಗೀಯತೆ, ಧಾರ್ಮಿಕ ನಂಬಿಕೆಗಳಿಂದ, ಕೆಟ್ಟದಾಗಿ ವಿಂಗಡನೆಯಾಗಿರುವ ಭಾರತದ ಸಾಮಾಜಿಕ ಸನ್ನಿವೇಶ ಸಾಂದರ್ಭಿಕವಾಗಿ ಧಾರ್ಮಿಕ ಮೂಲಭೂತವಾದದ ಸ್ವರೂಪವನ್ನೂ ಪಡೆಯುತ್ತದೆ..

ಆದರೆ ಒಂದು ಅಂಶವನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಸಂಘಟಿತ ವಲಯದ ಉದ್ಯಮದ ಮೇಲೆ, ನವ–ಉದಾರವಾದಿ ಆರ್ಥಿಕತೆಯ ಆಕ್ರಮಣದಿಂದಾಗಿ, ಅನೇಕ ಕಾರ್ಮಿಕರನ್ನು ಈ ಕೈಗಾರಿಕೆಗಳಿಂದ ಹೊರಹಾಕಲಾಗುತ್ತಿದೆ ಮತ್ತು ಈ ಹೊಸ ನಿರುದ್ಯೋಗಿ ಗುಂಪುಗಳು ಅನೌಪಚಾರಿಕ ಕ್ಷೇತ್ರಗಳು ಮತ್ತು ಸ್ವಯಂ ಉದ್ಯೋಗ ಕ್ಷೇತ್ರಗಳಲ್ಲಿ ಕನಿಷ್ಠ ಗಳಿಕೆಯ ಜೀವನಾಧಾರಗಳ ಮೊರೆ ಹೋಗಬೇಕಾಗುತ್ತದೆ.

ಈ ವಿದ್ಯಮಾನವು ಭಾರತ ಅಥವಾ ಇತರ ತೃತೀಯ ಜಗತ್ತಿನ ದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ, ಇದು ಇತರ ಮಧ್ಯಮ ಅಥವಾ ಮುಂದುವರಿದ ಆರ್ಥಿಕತೆಗಳಿಗೂ ಹರಡುತ್ತಿದೆ. ಶ್ರಮಜೀವಿ ಹೋರಾಟದಲ್ಲಿ ಅವರನ್ನು ಸಂಘಟಿಸುವುದು ಇಂದಿನ ಟ್ರೇಡ್ ಯೂನಿಯನ್ ಆಂದೋಲನದಲ್ಲಿ ದೊಡ್ಡ ಸವಾಲಾಗಿದೆ.

ಕಾರ್ಮಿಕ ವರ್ಗದ ಸಂಯೋಜನೆಯ ಈ ವಿರೋಧಾಭಾಸದ ಸನ್ನಿವೇಶಗಳನ್ನು, ವಿಶೇಷವಾಗಿ ಮೂರನೇ ವಿಶ್ವದ ರಾಷ್ಟ್ರಗಳಲ್ಲಿ ಸರಿಯಾಗಿ ಗಣನೆಗೆ ತೆಗೆದುಕೊಳ್ಳದೆ ಮತ್ತು ಈ ಅಸಮಾನತೆಗಳ ವಿರುದ್ಧ ಹೋರಾಡಲು ಸರಿಯಾದ ತಂತ್ರಗಳನ್ನು ಅಳವಡಿಸದೆ ಕ್ರಾಂತಿಕಾರಿ ಟ್ರೇಡ್ ಯೂನಿಯನ್ ಚಳುವಳಿ ಮುನ್ನಡೆಯಲು ಸಾಧ್ಯವಿಲ್ಲ.

ಐತಿಹಾಸಿಕ ಜವಾಬ್ದಾರಿ

ಈ ಸನ್ನಿವೇಶದಲ್ಲಿ, ಭಾರತದ ಟ್ರೇಡ್ ಯೂನಿಯನ್ ಆಂದೋಲನವು ಎಲ್ಲಾ ವಿಧಗಳ ಕಾರ್ಮಿಕರನ್ನು, ಅವರ ನಂಬಿಕೆಗಳೇನೇ ಇದ್ದರೂ, ಒಂದುಗೂಡಿಸುವ ಮತ್ತು ಸಜ್ಜುಗೊಳಿಸುವ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ ಮತ್ತು ಅವರನ್ನು ಶೋಷಿಸುವ ವ್ಯವಸ್ಥೆಯನ್ನೇ ಪರಿವರ್ತಿಸುವ ಹೋರಾಟದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ವರ್ಗವನ್ನು ಸೇರಿಕೊಳ್ಳಬೇಕಿದೆ.

ಮಾರ್ಕ್ಸ್ ಹೇಳಿರುವಂತೆ, "ವರ್ಗ ವೈಷಮ್ಯವನ್ನು ಶಮನಗೊಳಿಸುವುದಲ್ಲ, ವರ್ಗವನ್ನೇ ನಿರ್ಮೂಲನೆ ಮಾಡುವುದು; ಅಸ್ತಿತ್ವದಲ್ಲಿರುವ ಸಮಾಜವನ್ನು ಸುಧಾರಿಸುವುದಲ್ಲ, ಹೊಸದೊಂದರ ಅಡಿಪಾಯ ಹಾಕುವುದು"! ಮತ್ತು ಅದನ್ನು ಸಾಧಿಸಲಿಕ್ಕಾಗಿ 'ಕಮ್ಯುನಿಸ್ಟ್ ಪ್ರಣಾಳಿಕೆ'ಯಲ್ಲಿ ಮಾರ್ಕ್ಸ್‌ರವರೇ ಹೇಳಿದಂತೆ, ಕ್ರಾಂತಿಕಾರಿ ಕಾರ್ಮಿಕ ವರ್ಗದ ಎದುರಿರುವ ಐತಿಹಾಸಿಕ ಜವಾಬ್ದಾರಿಯನ್ನು "ಕಾರ್ಮಿಕ ವರ್ಗದ ಕ್ರಾಂತಿಯ ಮೊದಲ ಹೆಜ್ಜೆಯೆಂದರೆ, ಪ್ರಜಾಪ್ರಭುತ್ವಕ್ಕಾಗಿ ಕದನವನ್ನು ಗೆಲ್ಲಲು ಶ್ರಮಜೀವಿ ವರ್ಗವನ್ನು ಆಳುವ ಸ್ಥಾನಕ್ಕೆ ಏರಿಸುವುದು" ಎಂದು ಸಾರಾಂಶರೂಪದಲ್ಲಿ ಹೇಳಬಹುದು.

ಉಪಸಂಹಾರ

ಈ ಅವಧಿಯ ಕಾರ್ಮಿಕ ವರ್ಗದ ಆಕ್ರೋಶಕ್ಕೆ ಮತ್ತು ಪ್ರಪಂಚದಾದ್ಯಂತ ಶ್ರಮಜೀವಿಗಳ ಹೋರಾಟಗಳಿಗೆ ಸಾಕ್ಷಿಯಾಯಿತು, 2011 ರ ಸೆಪ್ಟೆಂಬರ್ 17 ರಂದು ನ್ಯೂಯಾರ್ಕ್‌ನಲ್ಲಿ ಹುಟ್ಟಿದ ಮತ್ತು 2011 ರ ವರ್ಷದಲ್ಲಿ, ಈ ವಾಕ್ಯಗಳನ್ನು ಬರೆಯುವವರೆಗೂ, ಕಾರ್ಪೊರೇಟ್ ಶೋಷಣೆ, ನವ–ಉದಾರವಾದ ಮತ್ತು ಕೆಲವು ಕಡೆಗಳಲ್ಲಿ ಬಂಡವಾಳಶಾಹಿಗಳ ವಿರುದ್ಧದ ನೇರ ಘೋಷಣೆಗಳೊಂದಿಗೆ ವಿಶ್ವದಾದ್ಯಂತ ಹರಡುತ್ತಿರುವ 'ವಾಲ್ ಸ್ಟ್ರೀಟ್ ಆಕ್ರಮಿಸಿ' ಚಳವಳಿ ಇವುಗಳಲ್ಲಿ ಇತ್ತೀಚಿನದು. "ಕಾರ್ಪೊರೇಟ್ ದುರಾಶೆ ಕ್ರಾಂತಿಯ ಬೀಜ' ಎಂಬ ಆ ಚಳವಳಿಯ ಭಿತ್ತಿಪತ್ರದ ಘೋಷವಾಕ್ಯ ಪ್ರಪಂಚದಾದ್ಯಂತ ಕ್ರಾಂತಿಕಾರಿಗಳಿಗೆ ನೇರ ಪ್ರೇರಣೆಯಾಗಿದೆ.

ಷೇರು ಮಾರುಕಟ್ಟೆ ಮತ್ತು ಇತರ ಎಲ್ಲ ದೊಡ್ಡ ಹಣಕಾಸು ಸಂಸ್ಥೆಗಳು ಇರುವ ನ್ಯೂಯಾರ್ಕ್‌ನ ವಾಲ್ ಸ್ಟ್ರೀಟ್, ಸೆಪ್ಟೆಂಬರ್ 15, 2008 ರಂದು ಕುಸಿಯಿತು ಮತ್ತು ಅದರಿಂದ ಸೆಪ್ಟೆಂಬರ್ 17, 2011 ರಂದು ನ್ಯೂಯಾರ್ಕ್‌ನ ಜುಕೋಟಿ ಪಾರ್ಕ್‌ನಲ್ಲಿ ಪ್ರಾರಂಭವಾದ ಈ 'ವಾಲ್ ಸ್ಟ್ರೀಟ್ ಆಕ್ರಮಿಸಿ' ಘೋಷಣೆಯು ಮೂಲತಃ ಬಂಡವಾಳಶಾಹಿ ವಿರೋಧಿ. ಈ ಸಮಯದಲ್ಲಿ ಸಾಮೂಹಿಕ ಮತ್ತು ವರ್ಗ ಹೋರಾಟಗಳ ಇತ್ತೀಚಿನ ಬೆಳವಣಿಗೆಯಾದ ಇದು ಬಂಡವಾಳಶಾಹಿ ಶೋಷಣೆಯ ವಿರುದ್ಧದ ಸಾಮೂಹಿಕ ಕ್ರಾಂತಿಯ ಅತ್ಯಂತ ಮಹತ್ವದ ಮತ್ತು ಭರವಸೆಯ ಬೆಳವಣಿಗೆಯಾಗಿದೆ.

(ಈ ಲೇಖನ ಮಾಲೆ ಇಲ್ಲಿಗೆ ಮುಕ್ತಾಯವಾಗುತ್ತದೆ)

ಚೀನಾ: ಎಲ್ಲರ ಸಮಾನ ಸಮೃದ್ಧಿಗೆ ಕ್ರಮಗಳು

'ಎಲ್ಲರ ಸಮಾನ ಸಮೃದ್ಧಿಗೆ' ಮತ್ತು 'ವಿಪರೀತ ಆದಾಯಗಳನ್ನು ನಿಗ್ರಹಿಸಲು' ಹೊಸ ಕ್ರಮಗಳನ್ನು ಕೈಗೊಳ್ಳುವುದಾಗಿ ಚೀನಾದ ಅಧ್ಯಕ್ಷ ಮತ್ತು ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕ್ಸಿ ಪಿಂಗ್ ಘೋಷಿಸಿದ್ದಾರೆ. ಅವರು ಅಗಸ್ಟ್ 17ರಂದು ನಡೆದ ಹಣಕಾಸು ಮತ್ತು ಆರ್ಥಿಕ ವ್ಯವಹಾರಗಳ ಕೇಂದ್ರ ಸಮಿತಿಯ ಸಭೆಯ ನಂತರ ಅದರ ಮುಖ್ಯ ನಿರ್ಣಯಗಳ ಕುರಿತು ತಿಳಿಸುತ್ತಿದ್ದರು. ಇದಕ್ಕಿಂತ ಮೊದಲು ಪ್ರಸಕ್ತ ಮತ್ತು ಹಿಂದಿನ ನಾಯಕತ್ವಗಳ ವಾರ್ಷಿಕವಾಗಿ ಜರುಗುವ ಸಭೆ ಸಹ ನಡೆದಿತ್ತು. ನಾಲ್ಕು ದಶಕಗಳ ಪವಾಡ ಸದೃಶ ಆರ್ಥಿಕ ಬೆಳವಣಿಗೆ, ಕಡು ಬಡತನದ ನಿರ್ಮೂಲನದ ಘೋಷಣೆ ಮತ್ತು ಕಮ್ಯುನಿಸ್ಟ್ ಪಕ್ಷದ ಶತಮಾನೋತ್ಸವದ ಹಿನ್ನೆಲೆಯಲ್ಲಿ ಇದು ಜಗತ್ತಿನಾದ್ಯಂತ ಗಮನ ಸೆಳೆದಿದೆ.

ಕಡಿಮೆ ಆದಾಯದವರ ಆದಾಯವನ್ನು ಹೆಚ್ಚಿಸುವ ಮತ್ತು ಮಧ್ಯಮ ಆದಾಯ ಹೊಂದಿರುವವರ ಸಂಖ್ಯೆಯನ್ನು ವಿಸ್ತರಿಸುವ, ಹೆಚ್ಚೆಚ್ಚು ಉಚಿತ ಅಥವಾ ಕಡಿಮೆ ದರದ ಸಾರ್ವತ್ರಿಕ ಸೇವೆಗಳನ್ನು ವಿಸ್ತರಿಸುವುದರ ಮತ್ತು ಇತರ ಕ್ರಮಗಳ ಮೂಲಕ ಸಮೃದ್ಧಿಯನ್ನು ಎಲ್ಲರಿಗೂ ಸಮಾನವಾಗಿ ಹಂಚಿಕೊಳ್ಳುವ ಹೊಸ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದೂ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಸಾಕಷ್ಟು ಆರ್ಥಿಕ ಸಮೃದ್ಧಿಯನ್ನು ಸಾಧಿಸಿರುವ ಈ ಹಂತದಲ್ಲಿ ಬರಿಯ 'ಸಮಾನತಾವಾದ ಅಥವಾ ಕೆಲವರು ಸಮೃದ್ಧರಾಗುವುದಕ್ಕೆ ತದ್ವಿರುದ್ಧವಾಗಿ, ಎಲ್ಲರೂ ಸಮಾನವಾಗಿ ಭೌತಿಕ ಮತ್ತು ಸಾಂಸ್ಕೃತಿಕ ಸಮೃದ್ಧಿಯನ್ನು ಹಂಚಿಕೊಳ್ಳುವಂತೆ ಹಂತ ಹಂತವಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದೂ ಹೇಳಲಾಗಿದೆ.

"ಕಾನೂನುಬದ್ಧ ಆದಾಯಕ್ಕೆ ರಕ್ಷಣೆ ಕೊಡುತ್ತಲೇ ಅತ್ಯಧಿಕ ಆದಾಯಗಳನ್ನು ನಿಬಂಧನೆ, ಹೊಂದಾಣಿಕೆಗೆ ಒಳಪಡಿಸುವ, ಉದ್ಯಮಗಳು ಮತ್ತು ಅಧಿಕ ಆದಾಯದ ವ್ಯಕ್ತಿಗಳು ಸಮಾಜಕ್ಕೆ ಹೆಚ್ಚಿನ ಕೊಡುಗೆ ನೀಡುವ" ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದೂ ಇದೇ ಸಮಯದಲ್ಲಿ ಘೋಷಿಸಿರುವುದು ಹೆಚ್ಚಿನ ಗಮನ ಸೆಳೆದಿದೆ.

ಝೇಜಿಯಾಂಗ್ ಪ್ರಾಂತದ ಮೊದಲ ಪ್ರಯೋಗ

ಈ ಕ್ರಮಗಳನ್ನು ತೆಗೆದುಕೊಳ್ಳುವತ್ತ ಕಳೆದ ತಿಂಗಳಲ್ಲೇ ಪೂರ್ವ ಚೀನಾದ ಝೇಜಿಯಾಂಗ್ ಪ್ರಾಂತದಲ್ಲಿ ಮೊದಲ ಪ್ರಯೋಗವನ್ನು ಆರಂಭಿಸಲಾಗಿದೆ. ಇದು ಅಲಿ ಬಾಬಾ (ಅಮೆಜಾನ್ ನಂತಹ ಚೀನಾದ ದೈತ್ಯ ಇ-ವಾಣಿಜ್ಯ ಕಂಪನಿ) ಮುಂತಾದ ಪ್ರಮುಖ ಖಾಸಗಿ ಕಂಪನಿಗಳ ತಾಯ್ನಾಡಾಗಿದೆ. ಮುಂದಿನ 5 ವರ್ಷಗಳಲ್ಲಿ ಪ್ರಾಂತದ ತಲಾ ಆದಾಯವನ್ನು ಶೇ.45ರಷ್ಟು ಹೆಚ್ಚಿಸಿ 75 ಸಾವಿರ ಯುವಾನ್ (11,563 ಡಾಲರ್) ಮಾಡುವ ಯೋಜನೆ ಹಾಕಲಾಗಿದೆ. ಪ್ರಾಂತದ ಅರ್ಧದಷ್ಟು ಆದಾಯ ಕಾರ್ಮಿಕರ ವೇತನದ್ದಾಗಿರಬೇಕು ಎಂಬ ಗುರಿಯನ್ನೂ ಈ ಯೋಜನೆಯಲ್ಲಿ ಇಟ್ಟುಕೊಳ್ಳಲಾಗಿದೆ.

ಝೇಜಿಯಾಂಗ್ ಪ್ರಾಂತದ ಈ ಯೋಜನೆಯ ಭಾಗವಾಗಿ ಕಾರ್ಮಿಕರ ವೇತನದ ಸಾಮೂಹಿಕ ಚೌಕಾಶಿಗೆ ವಿಶೇಷ ಉತ್ತೇಜನ ಕೊಡಲಿದೆ. ಅದರಲ್ಲೂ ಹೊಸ ಮಾದರಿಯ ವಸ್ತುಗಳ ಡೆಲಿವರಿ, ಟ್ಯಾಕ್ಸಿ ಮುಂತಾದ ಕಡಿಮೆ ಆದಾಯದ ಕಾರ್ಮಿಕರ ಹಕ್ಕು ರಕ್ಷಿಸುವ ಮತ್ತು ಆದಾಯ ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಲಿದೆ. ಶೇರು ಮಾರುಕಟ್ಟೆಯಲ್ಲಿರುವ ಕಂಪನಿಗಳು ಶೇರುದಾರರ ಡಿವಿಡೆಂಡ್ ಹೆಚ್ಚಿಸಲು ಉತ್ತೇಜನ, ರೈತರ ಆದಾಯ ಹೆಚ್ಚಿಸುವ ಉದ್ಯಮಗಳಿಗೆ ಉತ್ತೇಜನ, ವಿವಿಧ ಸಾಮಾಜಿಕ ಕ್ರಮಗಳಿಗೆ ಕೊಡುವ ನಿಧಿಗೆ ತೆರಿಗೆ ವಿನಾಯಿತಿ ಮುಂತಾದ ಕ್ರಮಗಳು ಯೋಜನೆಯಲ್ಲಿ ಸೇರಿವೆ.

ಅಸಮಾನತೆ ಕಡಿಮೆ ಮಾಡುವತ್ತ

'ಎಲ್ಲರ ಸಮಾನ ಸಮೃದ್ಧಿಗೆ' ಮತ್ತು 'ವಿಪರೀತ ಆದಾಯಗಳನ್ನು ನಿಗ್ರಹಿಸಲು' ಹೊಸ ಕ್ರಮಗಳ ಈ ಎರಡು ಘೋಷಣೆಗಳನ್ನು ಚೀನಾದಲ್ಲಿ ನಡೆಯುತ್ತಿರುವ ಪವಾಡ ಸದೃಶ ನಾಗಾಲೋಟದ ಆರ್ಥಿಕ ಬೆಳವಣಿಗೆಗಳ ಪರಿಣಾಮಗಳ ಮತ್ತು ಕಳೆದ ಕೆಲವು ತಿಂಗಳುಗಳಲ್ಲಿ ಚೀನಾ ಸರಕಾರದ ಖಾಸಗಿ ಉದ್ಯಮವನ್ನು ಅದರಲ್ಲೂ ದೈತ್ಯ ತಂತ್ರಜ್ಞಾನ ಕಂಪನಿಗಳನ್ನು ನಿಬಂಧನೆಗೊಳಪಡಿಸುವ ಹಲವು ಕ್ರಮಗಳ ಹಿನ್ನೆಲೆಯಲ್ಲಿ ನೋಡಬೇಕು.

ಎಲ್ಲರಿಗೂ ಸಾಕಷ್ಟು ನೆಮ್ಮದಿಯ ಜೀವನಮಟ್ಟ ಕೊಡಲು ಆರ್ಥಿಕ ಸಮೃದ್ಧಿಯನ್ನು ಬೆಳೆಸುವ ಸಲುವಾಗಿ ಕಳೆದ ನಾಲ್ಕು ದಶಕಗಳಲ್ಲಿ ಉತ್ಪಾದಕ ಶಕ್ತಿಗಳನ್ನು ಬೆಳೆಸುವತ್ತ ಮತ್ತು ಕಡು ಬಡತನದ ನಿರ್ಮೂಲನದತ್ತ ಮುಖ್ಯ ಒತ್ತು ಇತ್ತು. ಇದಕ್ಕಾಗಿ ಒಡೆತನದ ವಿವಿಧ ರೂಪಗಳು, ವಿದೇಶ ಮತ್ತು ಖಾಸಗಿ ಬಂಡವಾಳಕ್ಕೆ ತೆರೆದ ಅವಕಾಶ, ಮಾರುಕಟ್ಟೆ ಮತ್ತು ಯೋಜನೆಗಳ ಸಂಯೋಜನೆಗಳನ್ನು ಅವಲಂಬಿಸಲಾಗಿತ್ತು. ಆದರೆ ಇದು ಸಮೃದ್ಧಿ ಮತ್ತು ಸರಾಸರಿ ಜೀವನ ಮಟ್ಟ ಏರಿಸುವ ಜೊತೆಗೆ ಸಾಮಾಜಿಕ, ಪ್ರಾದೇಶಿಕ ಅಸಮಾನತೆಗಳನ್ನೂ ಹೆಚ್ಚಿಸಿದೆ ಎಂಬ ಅರಿವು ಕಮ್ಯುನಿಸ್ಟ್ ಪಕ್ಷಕ್ಕಿತ್ತು. ಈಗ ಈ ಅಸಮಾನತೆಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಒತ್ತು ಕೊಡಲಾಗಿದ್ದು, ಈ ಎರಡು ಕ್ರಮಗಳನ್ನು ವಹಿಸಲಾಗುತ್ತಿದೆ.

ಈಗ ಚೀನಾದ ಅತ್ಯಂತ ಶ್ರೀಮಂತ ಶೇ.1 ಜನ ದೇಶದ ಶೇ. 31 ಸಂಪತ್ತನ್ನು ಹೊಂದಿದ್ದಾರೆ. ಇದು ಎರಡು ದಶಕಗಳ ಹಿಂದೆ ಶೇ. 21ರಿಂದ ಹೆಚ್ಚಿದೆ. ವಿದೇಶ ಮತ್ತು ಖಾಸಗಿ ಬಂಡವಾಳಕ್ಕೆ ತೆರೆದ ಅವಕಾಶ, ಇದರ ಜೊತೆಗೆ ಬಂದ ಭ್ರಷ್ಟಾಚಾರಗಳಿಂದಾಗಿ, ಈ ಶ್ರೀಮಂತರ ಒಂದು ವಿಭಾಗ ಕಾನೂನುಬಾಹಿರ ಮತ್ತು ಭ್ರಷ್ಟ ಕ್ರಮಗಳನ್ನು ಅನುಸರಿಸಿದೆ ಎಂಬುದೂ ವಾಸ್ತವ. ಇದರ ವಿರುದ್ಧ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕಳೆದ ದಶಕದಲ್ಲಿ 14 ಶತಕೋಟ್ಯಾಧಿಪತಿ (100 ಕೋಟಿ ಯುವಾನ್ ಆಸ್ತಿವಂತರು) ಗಳನ್ನು ಕಾನೂನುಬಾಹಿರ ಮತ್ತು ಭ್ರಷ್ಟ ಕ್ರಮಗಳಿಗಾಗಿ ಗಲ್ಲಿಗೇರಿಸಲಾಗಿತ್ತು. ಇನ್ನೂ ಹಲವರು ಆರ್ಥಿಕ ಅಪರಾಧಗಳಿಗೆ ಶಿಕ್ಷೆಗೊಳಗಾಗಿದ್ದಾರೆ.



ಇದಲ್ಲದೆ ಕಾನೂನುಬದ್ಧವಾಗಿಯೇ ಅತ್ಯಧಿಕ ಆದಾಯ ಇರುವ ವ್ಯಕ್ತಿಗಳು ಮತ್ತು ಕಂಪನಿಗಳ ಸಂಖ್ಯೆ ಹೆಚ್ಚುತ್ತಲಿದ್ದು ಈ ಸಮೃದ್ಧಿಯನ್ನು ಸಾಮಾಜಿಕವಾಗಿ ತೊಡಗಿಸುವ ಅಸಮಾನತೆಯನ್ನು ಕಡಿಮೆ ಮಾಡುವ ಕೆಲವು ಕ್ರಮಗಳನ್ನು ಚೀನಾ ಸರಕಾರ ಯೋಜಿಸುತ್ತಿದೆ. ಈ ಸಂಪತ್ತಿನ ಒಂದು ಭಾಗವನ್ನು ಎಲ್ಲರ ಸಮೃದ್ಧಿ ಹೆಚ್ಚಿಸಲು ಬಳಸಲು ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿದೆ. ಅತ್ಯಧಿಕ ಆದಾಯ ಗುಂಪಿಗೆ ಆದಾಯ ತೆರಿಗೆಯನ್ನು ಹೆಚ್ಚಿಸುವ, ಶೇ.70ರಷ್ಟು ಆದಾಯ ಅಸಮಾನತೆಗೆ ಕಾರಣವಾದ ರೀಯಲ್ ಎಸ್ಟೇಟ್ ವಲಯದ ಅಸಮಾನತೆ ನಿವಾರಿಸಲು ಆಸ್ತಿ ತೆರಿಗೆಯನ್ನು ಹಾಕುವ, ಅತ್ಯಧಿಕ ಲಾಭ ಆದಾಯ, ಸಂಪತ್ತು ಗಳಿಸುತ್ತಿರುವ ಇಂಟರ್ ನೆಟ್ ಕಂಪನಿಗಳ ಮೇಲಿನ ತೆರಿಗೆಯನ್ನು ಶೇ. 10ರಿಂದ ಶೇ.25ಕ್ಕೆ ಏರಿಸಲು ಯೋಜಿಸುತ್ತಿದೆ.

ಸಮಾಜವಾದಿ ದಾರಿಗೆ ಕಂಟಕಗಳ ನಿವಾರಣೆ

ಇದಲ್ಲದೆ ಹಲವು ಕ್ಷೇತ್ರಗಳಲ್ಲಿ ಖಾಸಗಿ ಹೂಡಿಕೆಯನ್ನು ಸಾಮಾಜಿಕ-ರಾಜಕೀಯ ಅಗತ್ಯಗಳ ನಿರ್ಬಂಧಗಳಿಗೆ ಒಳಪಡಿಸುವ ಕ್ರಮಗಳನ್ನು ಕೈಗೊಂಡಿದೆ. ಇದಕ್ಕೆ ಒಳ್ಳೆಯ ಉದಾಹರಣೆ ಆನ್-ಲೈನ್ ಶಿಕ್ಷಣ ನೀಡುವ ಮತ್ತು ಖಾಸಗಿ ಟ್ಯೂಶನ್ ನೀಡುವ ಶಿಕ್ಷಣ ಕಂಪನಿಗಳನ್ನು 'ಲಾಭದ ಉದ್ದೇಶವಿಲ್ಲದ ಕಂಪನಿ'ಗಳಾಗಿ ಪರಿರ್ತಿಸಬೇಕೆಂಬ ನಿಬಂಧನೆ ಜಾರಿಗೆ ತಂದಿದ್ದು. ಇದರಿಂದಾಗಿ ಅಮೆರಿಕದ ಶೇರು ಮಾರುಕಟ್ಟೆಗಳಲ್ಲಿ ಭಾರಿ ಮೌಲ್ಯವಿದ್ದ ಹಲವು ಇ-ಶಿಕ್ಷಣ ಕಂಪನಿಗಳ ಮೌಲ್ಯ ಬಿದ್ದು ಹೋಗಿದ್ದನ್ನು ಲೆಕ್ಕಿಸದೆ ಈ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇದು 'ಸಮಾಜವಾದಿ ಶಿಕ್ಷಣ' ಗುರಿಯನ್ನು ಮುಟ್ಟಲು ಅಗತ್ಯವೆಂದು ಹೇಳಲಾಗಿದೆ.

ಇದೇ ರೀತಿ ಚೀನಾದಲ್ಲೂ, ಅಮೆಜಾನ್, ಗೂಗಲ್, ಫೇಸ್ ಬುಕ್, ಟ್ವಿಟರ್, ವಾಟ್ಸಪ್, ನಂತಹ ನೆಟ್ ಆಧಾರಿತ ಸೇವೆಗಳ ಮೂಲಕ, ಒಂದು ಕಡೆ ಗ್ರಾಹಕರ ಕುರಿತ ಅಪಾರ ಖಾಸಗಿ ಮಾಹಿತಿ ಹೊಂದಿದ್ದು ಅದರ ವಾಣಿಜ್ಯದಲ್ಲಿ ಇನ್ನಷ್ಟು ಪ್ರಭಾವ ಮತ್ತು ಆದಾಯ-ಆಸ್ತಿ ಗಳಿಸಿದ ಭಾರೀ ಏಕಸ್ವಾಮ್ಯ ಕಂಪನಿಗಳು ಬೆಳೆದಿದ್ದವು. ಎಲ್ಲೆಡೆಯಂತೆ ಅವು ಸರಕಾರಗಳಿಗಿಂತಲೂ ಪ್ರಭಾವಶಾಲಿಯಾಗಿ ಸರಕಾರಗಳ ಸಾಮಾಜಿಕ-ರಾಜಕೀಯ-ಆರ್ಥಿಕ ನೀತಿಗಳನ್ನೇ ಬುಡಮೇಲು ಮಾಡುವ, ನಾಗರಿಕರ ಖಾಸಗಿತನಕ್ಕೆ ಧಕ್ಕೆ ತರುವ, ಸರಕಾರಗಳಿಗೆ ಸವಾಲು ಹಾಕುವಷ್ಟು ಬೆಳೆದಿದ್ದವು. ಇದು ಅಮೆರಿಕ, ಯುರೋಪುಗಳಲ್ಲೂ ತೀವ್ರ ಸಮಸ್ಯೆಯಾಗಿದ್ದು ಇಂತಹ ಏಕಸ್ವಾಮ್ಯಗಳನ್ನು ಇನ್ನಷ್ಟು ದೊಡ್ಡ ಏಕಸ್ವಾಮ್ಯ ಆಗದಂತೆ ತಡೆಯುವ, ಹಲವು ಕಂಪನಿಗಳಾಗಿ ಒಡೆಯುವ ಕ್ರಮ ಅನಿವಾರ್ಯವಾಗಿತ್ತು. ಆದರೆ ಅಮೆರಿಕ, ಯುರೋಪಿನ ಸರಕಾರಗಳು ತೋರದ ಧೈರ್ಯ, ದೂರದರ್ಶಿತನ ವನ್ನು ಚೀನಾ ಸರಕಾರ ತೋರಿದೆ.

ಇತ್ತೀಚೆಗೆ ಅಲಿಬಾಬಾ ಗುಂಪಿನ ಶೇರು ಮಾರುಕಟ್ಟೆ ಪ್ರವೇಶಿಸಿ 37 ಶತಕೋಟಿ ಡಾಲರು ಮೌಲ್ ಪಡೆಯುವ ಪ್ರಯತ್ನವನ್ನು ತಡೆಹಿಡಿದಿತ್ತು. ಅದೇ ರೀತಿ, ದಿದಿ ಚುಕ್ಸಿಂಗ್ (ಓಲಾದಂತಹ) ಎಂಬ ಟ್ಯಾಕ್ಸಿ ಸೇವೆಯ 4.4 ಶತಕೋಟಿ ಡಾಲರು ಶೇರು ಮಾರಾಟವನ್ನು ತಡೆ ಹಿಡಿದಿತ್ತು. ಇತರ ಏಕಸ್ವಾಮ್ಯಗಳಾದ ಟೆನ್ ಸೆಂಟ್, ಬೈದು ಗಳ ಮೇಲೂ ಈ ರೀತಿಯ ನಿರ್ಬಂಧಗಳನ್ನು ಹೇರಲಾಗಿದೆ. ಈ ದೈತ್ಯ ಟೆಕ್ ಕಂಪನಿಗಳು ಜನತಾ ಪ್ರಭುತ್ವದ ಮತ್ತು ಅದರ ನಾಯಕತ್ವ ವಹಿಸಿರುವ ಕಮ್ಯುನಿಸ್ಟ್ ಪಕ್ಷದ ಸಮಾಜವಾದಿ ದಾರಿಯನ್ನು ಪ್ರಶ್ನಿಸಬಲ್ಲವು ಮತ್ತು ಅಸಾಧ್ಯ ಮಾಡಬಲ್ಲವು ಎಂಬ ಎಚ್ಚರಿಕೆಯೂ ಇಲ್ಲಿದೆ. ಇದು ಅಮೆರಿಕ, ಯುರೋಪುಗಳಲ್ಲಿ ಸಾಧ್ಯವಾಗದಿರುವುದಕ್ಕೆ ಆರ್ಥಿಕ ಏಕಸ್ವಾಮ್ಯ ಹೊಂದಿರುವ ಹಣಕಾಸು ಬಂಡವಾಳವು ಪ್ರಭುತ್ವವನ್ನೂ ನಿಯಂತ್ರಿಸುತ್ತಿರುವುದು ಕಾರಣ. ಆದರೆ ಚೀನಾದಲ್ಲಿ ಪ್ರಭುತ್ವವು, ದುಡಿಯುವ ಜನತೆಯ ಪರವಾಗಿ ಆರ್ಥಿಕ ವ್ಯವಸ್ಥೆಯ ನಿಬಂಧನೆ ಮಾಡುತ್ತಿದೆ.. ಈ ವ್ಯತ್ಯಾಸ ತಿಳಿಯದ ಹಲವು ವಿಮರ್ಶಕರು ತನ್ನ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಚೀನಾದ ಕಂಪನಿಗಳನ್ನು ಒಡೆಯುತ್ತಿದೆ ಎಂದು ತಪ್ಪಾಗಿ ಆಪಾದಿಸುತ್ತಿದ್ದಾರೆ.

ಅಮೃತ ಮಹೋತ್ಸವಕ್ಕೆ ಸಜ್ಜಾಗುವ ಮುನ್ನ.....

ಪುಟ 6 ರಿಂದ

ಈ ಎರಡೂ ಕ್ಷೇತ್ರಗಳ ಖಾಸಗೀಕರಣದ ಪ್ರಕ್ರಿಯೆ ಈಗಾಗಲೇ ಚಾಲ್ತಿಯಲ್ಲಿದೆ.

ಉತ್ಪಾದನಾ ವಲಯದಲ್ಲಿ ಗುಂಡುಸೂಜಿಯಿಂದ ಬೃಹತ್ ಯುದ್ಧೋಪಕರಣಗಳವರೆಗೆ ಯಂತ್ರೋಪಕರಣಗಳನ್ನು, ಸಲಕರಣೆಗಳನ್ನು, ಉಪಕರಣಗಳನ್ನು ಉತ್ಪಾದಿಸುತ್ತಾ ಈ ದೇಶದ ಅರ್ಥವ್ಯವಸ್ಥೆಗೆ ಸುಭದ್ರ ಬುನಾದಿಯನ್ನು ನಿರ್ಮಿಸಿದ ಶ್ರಮಿಕ ವರ್ಗ ತಾವು ನಿರ್ಮಿಸಿದ ಈ ಸ್ಥಾವರಗಳು ಕುಸಿಯುತ್ತಿರುವುದನ್ನು ಆತಂಕದಿಂದ ಗಮನಿಸುತ್ತಿದೆ. ಈ ಹಾದಿ ಸುಗಮವಾಗಲೆಂದೇ ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿ ನಾಲ್ಕು ಸಂಹಿತೆಗಳನ್ನು ರೂಪಿಸಲಾಗಿದೆ. ತನ್ನ ದುಡಿಮೆಯ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳಲಿರುವ ಶ್ರಮಿಕ ಮತ್ತೊಮ್ಮೆ ಬಂಡವಾಳದ ಸಂಕೋಲೆಗಳಲ್ಲಿ ಸಿಲುಕುವ ದಿನಗಳು ಸನಿಹವಾಗುತ್ತಿದೆ. ಸಂಭಾವ್ಯ 'ಆದರ್ಶಭಾರತ'ದಲ್ಲಿ ಕಾರ್ಪೋರೇಟ್ ಬಂಡವಾಳ ಭಾರತದಲ್ಲಿ ಸಾಂಪ್ರದಾಯಿಕ ಸಂಕೋಲೆಗಳಿಲ್ಲದ ಜೀತಪದ್ಧತಿಯನ್ನು ಮರುಸ್ಥಾಪಿಸುತ್ತದೆ.

ತಮ್ಮ ಸುಭದ್ರ ನೆಲೆ ಕಳೆದುಕೊಳ್ಳುತ್ತಿರುವ ಕೆಳಸ್ತರದ ಶ್ರಮಿಕ ವರ್ಗದ ಅಸ್ತಿತ್ವವನ್ನು ಮತ್ತು ಶ್ರಮಶಕ್ತಿಯ ಮೌಲ್ಯವನ್ನು ರಕ್ಷಿಸುವ ನಿಟ್ಟಿನಲ್ಲಿ ಹಿತವಲಯದ ಕಾರ್ಮಿಕ ವರ್ಗ ಮುಂಚೂಣಿ ನಾಯಕತ್ವ ವಹಿಸುವುದು ಇಂದಿನ ತುರ್ತು. ಹಣಕಾಸು ಮತ್ತು ವಿಮಾ ವಲಯದ ಈ ಕಾರ್ಮಿಕ ವರ್ಗವೂ ಸಹ ತಮ್ಮ ಸಾಂಸ್ಥಿಕ ನೆಲೆಗಳನ್ನು ಕಳೆದುಕೊಳ್ಳುವ ಭೀತಿಯಲ್ಲಿದೆ. ಆದರೆ ಈ ಅಪಾಯದ ಅರಿವೇ ಇಲ್ಲದಂತೆ ಉತ್ಪಾದನಾ ವಲಯದ ಶ್ರಮಿಕರ ಕರಾಳ ಭವಿಷ್ಯವನ್ನು ಗ್ರಹಿಸುವುದರಲ್ಲಿ ವಿಫಲವಾಗುತ್ತಿದೆ. ಇದು ಭಾರತದ ಸಂಘಟಿತ ಕಾರ್ಮಿಕ ಚಳುವಳಿಯ ಮುಂದಿರುವ ಬೃಹತ್ ಸವಾಲು. ಶ್ರಮಜೀವಿಗಳ ಕ್ರಾಂತಿಯ ಮುಂದಾಳತ್ವ ವಹಿಸಬೇಕಾದ ಕಾರ್ಮಿಕ ವರ್ಗ ಇಂದು ತನ್ನದೇ ಭವಿಷ್ಯದ ಹಾದಿಗಳ ಅಸ್ಪಷ್ಟತೆಯನ್ನು ಗ್ರಹಿಸದಂತಾಗಿರುವುದು ದುರಂತ.

ಅಗಸ್ಟ್ 15 ರಂದು ಕೆಂಪುಕೋಟೆಯಿಂದ ಮೂಡಿಬಂದ 'ಆದರ್ಶಭಾರತ'ದ ಕನಸಿನ ಲೋಕದಲ್ಲಿ ಭಾರತದ ಕೃಷಿ ಭೂಮಿ, ಆಹಾರ ಉತ್ಪನ್ನ, ಖನಿಜ ಸಂಪತ್ತು, ನೈಸರ್ಗಿಕ ಸಂಪನ್ಮೂಲಗಳು, ಜಲಸಂಪತ್ತು, ಅರಣ್ಯ ಸಂಪತ್ತು, ಉತ್ಪಾದನೆಯ ಮೂಲಗಳು, ಸಾರಿಗೆ ವ್ಯವಸ್ಥೆ, ಶ್ರಮಶಕ್ತಿಯ ಮೂಲಗಳು, ಶ್ರಮಿಕರ ಮೂಲ ನೆಲೆಗಳು ಮತ್ತು ಉತ್ಪಾದನೆಯ ಸಾಧನಗಳು, ಇವೆಲ್ಲವೂ ಕಾರ್ಪೋರೇಟ್ ಮಾರುಕಟ್ಟೆ ಅಧಿಪತಿಗಳ ಒಡೆತನಕ್ಕೆ ಒಳಪಟ್ಟಿರುತ್ತವೆ. ಇದು 'ಆತ್ಮನಿರ್ಭರ' ಭಾರತ 'ಆದರ್ಶಭಾರತ'ಕ್ಕಾಗಿ ರೂಪಿಸಿರುವ ನೀಲನಕ್ಷೆ. ನವ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಯ ದಾಳಿಯಲ್ಲಿ ಭಾರತ ಮತ್ತೊಮ್ಮೆ ಮಾರುಕಟ್ಟೆ ಬಂಡವಾಳದ ಸಂಕೋಲೆಗಳಲ್ಲಿ ಸಿಲುಕಲು ಸಿದ್ಧವಾಗುತ್ತಿದೆ.

ಭಾರತದ ಪ್ರಭುತ್ವ ಈ ಹಾದಿಗೆ ಅಡ್ಡಿಯಾಗುವ ದನಿಗಳನ್ನು ದಮನಿಸಲು ಕರಾಳ ಶಾಸನಗಳ ಮೊರೆ ಹೋಗುತ್ತದೆ. ಈ ದೇಶದ ಮತೀಯವಾದಿ ಸಾಂಸ್ಕೃತಿಕ ಫ್ಯಾಸಿಸ್ಟ್ ರಾಜಕಾರಣ ಜಾತಿ ಪ್ರಣೀತ ಸಮಾಜವನ್ನು ಆಶ್ರಯಯಿಸುತ್ತದೆ. ಭಾರತದ ಶ್ರಮಿಕವರ್ಗ ಈ ತೂಗುಗತ್ತಿಯ ಅಡಿಯಲ್ಲೇ ತನ್ನ ಅಸ್ತಿತ್ವ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳಬೇಕಿದೆ. ಜಾತಿ, ಧರ್ಮ ಮತ್ತು ಭಾಷಿಕ ಸಂಕೋಲೆಗಳನ್ನು ತೊರೆದು ಒಂದು ಮಾನವೀಯ ಸಮಾಜವನ್ನು ರೂಪಿಸುವ ನಿಟ್ಟಿನಲ್ಲಿ ಭಾರತದ ಶ್ರಮಜೀವಿಗಳು ರೈತಾಪಿಯೊಂದಿಗೆ ಕೈಜೋಡಿಸಿ ಸಮ ಸಮಾಜದ ನಿರ್ಮಾಣದತ್ತ ಮುನ್ನಡೆಯಬೇಕಿದೆ. ಈ ಶ್ರಮಿಕ ವರ್ಗ ಹೊತ್ತ ಸೈಜುಗಲ್ಲುಗಳನ್ನೇ ಕಾರ್ಪೋರೇಟ್ ಮಾರುಕಟ್ಟೆಯ ಸಂತೆಮಾಳಗಳಲ್ಲಿ ಹಾಸುಗಲ್ಲುಗಳಂತೆ ಬಳಸಿ ನವ ಉದಾರವಾದದ ನೂತನ ಭಾರತವನ್ನು ನಿರ್ಮಿಸಲು ಭಾರತದ ಆಳುವ ವರ್ಗಗಳು ಸಜ್ಜಾಗುತ್ತಿವೆ.

ನಾವು ಸ್ವತಂತ್ರರಾಗಿದ್ದೇವೆ ಆದರೆ ಶೋಷಣೆಯಿಂದ ವಿಮೋಚನೆ ಪಡೆದಿದ್ದೇವೆಯೇ? ಯೋಚಿಸೋಣ.

JANASHAKTHI KANNADA VARA PATRIKE August 23-29, 2021 Price: Rs. 10/- Date of Publication: 20 August 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21



ದೇಶಾದ್ಯಂತ 75ನೇ ಸ್ವಾತಂತ್ರ್ಯ ದಿನಾಚರಣೆ





















JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**